
ಸಂಪುಟ 22 ಸಂಚಿಕೆ 43-45
ಅಕ್ಟೋಬರ್ 29, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಷ್ಯಾರರಗ



ಕೃಷ್ಣ ಸರ್ಕಾರಕ್ಕೆ ಒಂದು ವರ್ಷ



ಭಾರತದ ಕ್ರಾಂತಿಯ ಅನ್ವೇಷಣೆ



ವಾಜಪೇಯಿ ನೀತಿಗಳಿಗೆ ಕರ್ನಾಟಕದಲ್ಲಿ ಛೀಮಾರಿ

ಕಾಂಗ್ರೆಸ್‌ನಿಂದ ಬಂಡವಾಳಶಾಹಿಗಳ ಓಲೈಕೆ

ಹಿಂದಿನ ಸಂಚಿಕೆಯಲ್ಲಿ ಮೇ ದಿನದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ಆಕ್ರಮಣ, ಅಸ್ಸಾಂನಲ್ಲಿ ಭುಗಿಲೆದ್ದ ಜನಾಂಗೀಯ ಗಲಭೆ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಮೂರನೇ ಸಾರ್ವತ್ರಿಕ ಚುನಾವಣೆ, ಕಾಂಗ್ರೆಸ್‌ಗೆ ಪರ್ಯಾಯ ಒಂದರ ಉಗಮ, ಭಾರತ-ಚೀನಾ ಬಿಕ್ಕಟ್ಟಿನ ಹೆಸರಿನಲ್ಲಿ ಜ್ಯೋತಿಬಸು ಸೇರಿದಂತೆ ಹಲವರ ಬಂಧನದ ಬಗ್ಗೆ ಓದಿರಿ

ಮೂರನೇ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿತ್ತು. ಬ್ರಿಟಿಷರು ಭಾರತ ಬಿಟ್ಟು ತೊಲಗಿ ಬಹುತೇಕ 15ವರ್ಷವಾಗಿತ್ತು. ಇತಿಹಾಸದಲ್ಲಿ ಇದು ದೀರ್ಘ ಅವಧಿ ಅಲ್ಲವಾದರೂ, ದೇಶದ ಅಭಿವೃದ್ಧಿಗಾಗಿ ಸರಕಾರ ಅನೇಕ ಕೆಲಸಗಳನ್ನು ಮಾಡಬಹುದಾಗಿತ್ತು. ಅದಕ್ಕಾಗಿ ಸಾಕಷ್ಟು ಸಮಯವಿತ್ತು. ಆದರೆ ಸತತವಾಗಿ ಆಡಳಿತ ನಡೆಸಿದ ಕಾಂಗ್ರೆಸ್ ಸರಕಾರಗಳು ಜನರ ಮೇಲೆ ಹೊರೆಯನ್ನಷ್ಟೆ ಹೊರಿಸಿದವು. ಸಮಾಜವಾದ, ಸಮಾನತೆ ಮತ್ತು ಸಾಮಜಿಕ ಕಲ್ಯಾಣ ಕಾಗದದ ಮೇಲಿನ ಬೊಗಳೆಯಾಗಿತ್ತು. ಗುತ್ತೇದಾರಿ ಮನೆತನಗಳು ಮತ್ತು ಬಂಡವಾಳಶಾಹಿಗಳನ್ನು ಸಂತೃಪ್ತಿಪಡಿಸಲು ಕಾಂಗ್ರೆಸ್ ಮುಂದಾಯಿತು. ದೇಶ ಮೂರನೇ ಪಂಚವಾರ್ಷಿಕ ಯೋಜನೆಯನ್ನು ಪ್ರವೇಶಿಸಿತ್ತು. ಆದರೆ ಯಾವುದೇ ಆಶಾಭಾವನೆ ಉಳಿದಿರಲಿಲ್ಲ.

ವಿದೇಶಿ ಬಂಡವಾಳಶಾಹಿಗಳಿಂದ ನಡೆಯುತ್ತಿದ್ದ ಶೋಷಣೆಯ ವಿರುದ್ಧ ಸ್ವಾತಂತ್ರ್ಯ ಆಂದೋಲನದ ಅವಧಿಯಲ್ಲಿ ಘೋಷಣೆ ಮೊಳಗಿತ್ತು. ಅದು ಪ್ರಧಾನ ಘೋಷಣೆಗಳಲ್ಲಿ ಒಂದಾಗಿತ್ತು. ಆದರೆ ಬ್ರಿಟಿಷರು ತೊಲಗಿದ ಮೇಲೆ ಅದು ಎಲ್ಲೂ ಕೇಳಿಸಲೇ ಇಲ್ಲ. ವಾಸ್ತವವಾಗಿ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಭಾರಿ ಸ್ಪರ್ಧೆಯೇ ಆರಂಭವಾಯಿತು. 1948 ರಲ್ಲಿ 255.80 ಕೋಟಿ ರೂಪಾಯಿಯಷ್ಟಿದ್ದ ವಿದೇಶಿ ಬಂಡವಾಳ 1960 ರಲ್ಲಿ 655 ಕೋಟಿಗೆ ಏರಿತು. ಏನಿದ್ದರೂ ತೆರಿಗೆಗಳು ಮಾತ್ರ ಜನರ ಬೆಂಬಿಡಲಿಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣದುಬ್ಬರ ದರ ಶೇಕಡ 30 ಕ್ಕೆ ಬೆಳೆಯಿತು.

ಕೇಂದ್ರದಲ್ಲಿನ ಕಾಂಗ್ರೆಸ್ ದುರಾಡಳಿತದ ಪರಿಣಾಮದಿಂದ ಪಶ್ಚಿಮ ಬಂಗಾಳವೂ ಹೊರತಾಗಲಿಲ್ಲ. ರಾಜ್ಯದ ಕೆಲವು ವಿಶಿಷ್ಟ ಸಮಸ್ಯೆಗಳಿಂದಾಗಿ ಅದರ ಚಿಂತೆ ಇನ್ನೂ ಹೆಚ್ಚಿತು. ನಿರಾಶ್ರಿತರ ಸಮಸ್ಯೆ ಅವುಗಳಲ್ಲಿ ಒಂದು. ಶಿಕ್ಷಣ ಕ್ಷೇತ್ರದಲ್ಲಿ ಅರಾಜಕತೆ ತಾಂಡವವಾಡುತ್ತಿತ್ತು. ಅನಕ್ಷರತೆ ವ್ಯಾಪಕವಾಗಿತ್ತು. ಸಂಘಟಿತ ವಲಯದಲ್ಲಿ ಉದ್ಯೋಗ ಸೃಷ್ಟಿಯಾಗದ ಏಕೈಕ ರಾಜ್ಯವೆಂದರೆ ಪಶ್ಚಿಮ ಬಂಗಾಳವಾಗಿತ್ತು. ಸೆಣಬು ಕೈಗಾರಿಕೆಯ ಸಾವಿರಾರು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾಯಿತು. ಇಡಿಯಾಗಿ ಕೈಗಾರಿಕೆಯ ಪಾತ್ರದ ಮಹತ್ವವನ್ನೇ ಸರಕಾರ ಕಡೆಗಣಿಸಿತ್ತು.


ಕೇಂದ್ರ ಸರ್ಕಾರದ ಪಕ್ಷಪಾತದ ವಿರುದ್ಧ ರಾಜ್ಯ ಸರಕಾರ ಧ್ವನಿ ಎತ್ತದಿರುವುದರಿಂದ ಸಮಸ್ಯೆ ಉಲ್ಬಣಿಸಿತು. ಆದರೆ ಜನರು ಸರಕಾರದ ವಿರುದ್ಧ ಒಂದಾದ ಮೇಲೆ ಇನ್ನೊಂದು ಚಳುವಳಿಯನ್ನು ನಡೆಸಿದರು. ಇದರಿಂದ ನಡುಗಿದ ಕಾಂಗ್ರೆಸ್ ಸರಕಾರ ದಮನಕಾರಿ ನೀತಿಗಳನ್ನು ಅನುಸರಿಸಿತು. ಕರಾಳ ಕಾನೂನುಗಳನ್ನು ರೂಪಿಸಿ ಜನತೆಯ ವಿರುದ್ಧ ಬಳಸಿತು.

ರ್‍ಯಾಲಿ ಮತ್ತು ಸಭೆಗಳಿಗೆ ಅನುಮತಿ ನೀಡದಿರುವ ಒಂದು ಮಸೂದೆಯನ್ನು ರೂಪಿಸಿದಾಗ ಪರಿಸ್ಥಿತಿ ವಿಕೋಪಕ್ಕೆ ತಲುಪಿತು. ಸರಕಾರ ಸಾರ್ವಜನಿಕರ ಒತ್ತಡಕ್ಕೆ ಮಣಿದು ಅದನ್ನು ವಾಪಸು ಪಡೆಯಿತು. ನಾವು ಪರಿಣಾಮಕಾರಿ ಪ್ರತಿಪಕ್ಷದ ಪಾತ್ರವನ್ನು ನಿರ್ವಹಿಸಿದೆವು. ಸರಕಾರದ ಜನವಿರೋಧಿ ನೀತಿಗಳನ್ನು ಸದನದ ಒಳಗೆ ವಿರೋಧಿಸಿದೆವು ಹಾಗೂ ಹೊರಗಡೆ ಚಳುವಳಿಗಳನ್ನು ಸಂಘಟಿಸಿದೆವು.

ಎಡ ಒಗ್ಗಟ್ಟನ್ನು ರೂಪಿಸುವಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ನಡೆಸಿದೆವು. ದೇಶಾದ್ಯಂತ ನಮ್ಮ ಬಲ ಬೆಳೆದಿರುವುದನ್ನು ಇತಿಹಾಸ ಸಾಬೀತುಪಡಿಸಿದೆ. ಈ ಯಶಸ್ಸಿನ ಪರಂಪರೆ ಆರಂಭಿಕ ದಿನಗಳ ಹೋರಾಟಗಳಲ್ಲಿ ಅಡಗಿದೆ.

ರಂಗರಚನೆ

ಚುನಾವಣೆಗೆ ನಾವು ಸಿದ್ಧತೆಗಳನ್ನು ಆರಂಭಿಸಿದೆವು. ಕಾಂಗ್ರೆಸ್ ನಾಚಿಕೆಬಿಟ್ಟು ಆಡಳಿತ ಯಂತ್ರವನ್ನು ಬಳಸಲು ಆರಂಭಿಸಿತು. ಈ ಬಾರಿ ಪಿಎಸ್‌ಪಿ ನಮ್ಮ ಜತೆಗಿರಲಿಲ್ಲ. ನಮ್ಮಿಂದ ದೂರ ಸರಿದ ಅದು ಕಾಂಗ್ರೆಸ್‌ನೊಂದಿಗೆ ಸರಸವಾಡತೊಡಗಿತ್ತು. ಕೇರಳದಲ್ಲಿ ಇಎಂಎಸ್ ಸರಕಾರವನ್ನು ವಜಾ ಮಾಡುವಲ್ಲಿ ಪಿಎಸ್‌ಪಿ ಕೂಡ ಪಾತ್ರ ವಹಿಸಿತ್ತು ಹಾಗೂ ಅದು ಕಾಂಗ್ರೆಸ್ ನೇತೃತ್ವದ



ಸಚಿವಸಂಪುಟವನ್ನು ಸೇರಿತ್ತು.

ಬಂಗಾಳದಲ್ಲಿ ನಾವು ಆರು ಪಕ್ಷಗಳ ಒಂದು ರಂಗವನ್ನು ರಚಿಸಿದೆವು. ಆರ್‌ಸಿಪಿಐ ಮತ್ತು ಬೋಲ್ಶೆವಿಕ್ ಪಕ್ಷ ಹೊಸದಾಗಿ ಸೇರ್ಪಡೆಗೊಂಡ ಪಕ್ಷಗಳು. ಒಂದು ಪ್ರಣಾಳಿಕೆಯನ್ನು ಕೂಡ ಬಿಡುಗಡೆ ಮಾಡಿದೆವು.

ಕಾಂಗ್ರೆಸ್ ಮತ್ತೆ ಭಯೋತ್ಪಾದನೆಗೆ ಇಳಿಯಿತು. ನನ್ನ ಮೇಲೆ ಪುನಃ ದಾಳಿ ಮಾಡಲಾಯಿತು. ಕಾಕದ್ವೀಪದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಹೋಗುತ್ತಿದ್ದಾಗ ಜನರ ಒಂದು ಗುಂಪು ನಮ್ಮ ಕಾರನ್ನು ತಡೆಯಿತು. ಅವರು ಕ್ಷಣಾರ್ಧದಲ್ಲಿ ಕಾರನ್ನು ಸುತ್ತುವರಿದು ಗಾಜುಗಳನ್ನು ಒಡೆಯತೊಡಗಿದರು.

ಕೆಲವು ಪೋಲೀಸರು ಹತ್ತಿರವೇ ನಿಂತು ಇದನ್ನೆಲ್ಲ ನೋಡುತ್ತಿದ್ದರು. ಮಧ್ಯಪ್ರವೇಶಿಸಿ ಇಲ್ಲವೇ ಇಲ್ಲಿಂದ ಹೊರಟುಹೋಗಿ ಎಂದು ಪೋಲೀಸರಿಗೆ ನಾನು ಹೇಳಿದೆ. ನಮ್ಮನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ನಮಗೆ ಗೊತ್ತಿತ್ತು.

ನಮ್ಮ ಮೇಲೆ ಹಲ್ಲೆ ನಡೆದ ಸುದ್ದಿ ರ್‍ಯಾಲಿ ನಡೆಯುತ್ತಿದ್ದ ಸ್ಥಳದಲ್ಲಿ ತಲುಪುತ್ತಿದ್ದಂತೆ ನಮ್ಮ ರಕ್ಷಣೆಗೆ ಜನರು ಧಾವಿಸಿ ಬಂದರು. ಆಕ್ರಮಣಕಾರರು ಕಾಲಿಗೆ ಬುದ್ಧಿ ಹೇಳಿದರು.

ಚುನಾವಣೆಗೆ ಮುಂಚೆ ನಮ್ಮ ಸಂಸತ್ ಸದಸ್ಯ ಮಹಮದ್ ಇಲಿಯಾಸ್ ಮತ್ತು ಶಾಸಕ ತಾರಾಪುರ ಅವರ ಮೇಲೆ ಹೌರಾದಲ್ಲಿ ಹಲ್ಲೆ ನಡೆಯಿತು. ಮಣಿಕುಂತಲ ಸೆನ್ ಸಭೆಯೊಂದರಲ್ಲಿ ಭಾಷಣ ಮಾಡುತ್ತಿದ್ದಾಗ ಆಕೆಯ ಮೇಲೆ ಕಲ್ಲುಗಳನ್ನು ತೂರಲಾಯಿತು. ಕಳೆದ ಬಾರಿ ಅಭ್ಯರ್ಥಿಗಳೇ ಸಿಗದಿದ್ದ ಕ್ಷೇತ್ರಗಳಲ್ಲಿ ಕೂಡ ನಾವು ಹುರಿಯಾಳುಗಳನ್ನು ಕಣಕ್ಕಿಳಿಸಿದ್ದೆವು. ಈ ಕ್ಷೇತ್ರಗಳಲ್ಲಿ ದೊಡ್ಡ ರ್‍ಯಾಲಿಗಳನ್ನು ನಡೆಸಿದೆವು.

ಕಮ್ಯುನಿಸ್ಟ್ ಪಕ್ಷ 145, ಫಾರ್ವರ್ಡ್ ಬ್ಲಾಕ್ 34, ಆರ್‌ಎಸ್‌ಪಿ 3, ಆರ್‌ಸಿಪಿಐ 3, ಬೋಲ್ಶೆವಿಕ್ ಪಕ್ಷ ಮೂರು ಅಭ್ಯರ್ಥಿಗಳನ್ನು ಇಳಿಸಿದವು. ನಮ್ಮ ಬೆಂಬಲದ ಮೂವರು ಪಕ್ಷೇತರರೂ ಕಣದಲ್ಲಿದ್ದರು. ಕಾಂಗ್ರೆಸ್ ಎಲ್ಲಾ 252 ಸ್ಥಾನಗಳಿಗೆ ಸ್ಪರ್ಧಿಸಿತು.

ನಾನು ಪುನಃ ಬಾರಾನಗರ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ಧೀರೇಂದ್ರ ನಾಥ ಚಟರ್ಜಿಯವರನ್ನು 13,412 ಮತಗಳಿಂದ ಸೋಲಿಸಿದೆ. ಈ ಬಾರಿಯೂ ನಮಗೆ ಸರಕಾರ ರಚಿಸಲು ಆಗಲಿಲ್ಲ. ಆದರೆ ಪರ್ಯಾಯವೊಂದು ಉದಯವಾಗುತ್ತಿರುವುದು ಸ್ಪಷ್ಟವಾಗಿತ್ತು. ಕಾಂಗ್ರೆಸ್ ನಮ್ಮನ್ನು ಸೋಲಿಸಿರಬಹುದು ಆದರೆ ನಮ್ಮ ಬೆಳವಣಿಗೆಯನ್ನು ತಡೆಯಲು ಅದಕ್ಕೆ ಆಗಿರಲಿಲ್ಲ.

ಕಾಂಗ್ರೆಸ್ ಕಳೆದ ಸಲಕ್ಕಿಂತ ಐದು ಹೆಚ್ಚು ಸ್ಥಾನಗಳು; ಅಂದರೆ 157 ಸ್ಥಾನಗಳನ್ನು ಗೆದ್ದಿತು. ಕಮ್ಯುನಿಸ್ಟರ ಬಲ 46 ರಿಂದ 50 ಕ್ಕೆ ಏರಿತು. ನಾವು ಈ ಬಾರಿ ಕಳೆದ ಸಲಕ್ಕಿಂತ 5,14,847 ಮತಗಳನ್ನು ಹೆಚ್ಚಿಗೆ ಪಡೆದೆವು.

ನಾವು ಕಾಂಗ್ರೆಸ್‌ನಿಂದ 56 ಸ್ಥಾನಗಳನ್ನು ಕಸಿದುಕೊಂಡೆವು. ಆದರೆ 53 ಕ್ಷೇತ್ರಗಳಲ್ಲಿ ಆ ಪಕ್ಷಕ್ಕೆ ಸೋತೆವು. ಕಳೆದ ಬಾರಿ 21 ರಲ್ಲಿ ಗೆದ್ದಿದ್ದ ಪಿಎಸ್‌ಪಿ ಈಸಲ ಕೇವಲ ಐದು ಸ್ಥಾನಗಳಲ್ಲಿ ಜಯಗಳಿಸಿತು. ಕಮ್ಯುನಿಸ್ಟ್ ಪಕ್ಷ ರಾಜ್ಯದ ಒಂಬತ್ತು ಲೋಕಸಭೆ ಸ್ಥಾನಗಳಲ್ಲಿ ಗೆದ್ದಿತು. ರಂಗ ಒಟ್ಟಾರೆಯಾಗಿ 12 ಸ್ಥಾನಗಳಲ್ಲಿ ಜಯಶಾಲಿಯಾಯಿತು. ಕಾಂಗ್ರೆಸ್ 22 ಸ್ಥಾನ ಗಳಿಸಿತು.

ಕೇಶವಚಂದ್ರ ಬೋಸ್ ವಿಧಾನಸಭೆಯ ಹೊಸ ಸ್ಪೀಕರ್. ನಾನುಪುನಃ ಪ್ರತಿಪಕ್ಷದ ನಾಯಕನಾದೆ. ಹರೇಕೃಷ್ಣ ಕೋನಾರ್ ಉಪನಾಯಕರು ಗಣೇಶ್ ಘೋಷ್ ಪಕ್ಷದ ಮುಖ್ಯ ಸಚೇತಕರಾದರು.

ಭಾರತ-ಚೀನಾ ಬಿಕ್ಕಟ್ಟು

ಗಡಿ ವಿವಾದದ ಸಂಬಂಧದಲ್ಲಿ ಭಾರತ ಮತ್ತು ಚೀನಾ 1962 ರಲ್ಲಿ ಯುದ್ಧಕ್ಕಿಳಿದವು. ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಗಾಮಿ ಶಕ್ತಿಗಳು ಯುದ್ಧದ ಕೂಗೆಬ್ಬಿಸಿದವು. ಹಾಗೂ ದೇಶದಲ್ಲಿ ಭಾವನೆಗಳನ್ನು ಕೆರಳಿಸಿದವು. ಈ ಪರಿಸ್ಥಿತಿಯಲ್ಲಿ ಮಾತುಕತೆಯೊಂದೇ ದಾರಿ ಎಂದು ನಾವು (ಕಮ್ಯುನಿಸ್ಟರು) ಹೇಳಿದೆವು. ಅದಕ್ಕಾಗಿ ಪ್ರತಿಗಾಮಿ ಶಕ್ತಿಗಳು ನಮ್ಮನ್ನು 'ರಾಷ್ಟ್ರವಿರೋಧಿಗಳು' ಎಂದು ಜರಿದರು.

ಲೋವರ್ ಸರ್ಕಲ್ ರಸ್ತೆಯಲ್ಲಿನ ನಮ್ಮ ಪಕ್ಷದ ಕಚೇರಿ ಮುಂದೆ ಕಾಂಗ್ರೆಸ್ಸಿನವರು ಪ್ರತಿದಿನ ಚಳುವಳಿ ನಡೆಸಿದರು. ಕಾಂಗ್ರೆಸ್ ದುಂಡಾವರ್ತಿಯ ವಿರುದ್ಧ ನಮ್ಮ ನಾಯಕರು ಕಾವಲುಗಾರರಾಗಿ ನಿಲ್ಲಬೇಕಾಗಿತ್ತು. ಗಡಿಯಲ್ಲಿ ಪರಿಸ್ಥಿತಿ ವಿಕೋಪಕ್ಕೆ ತಲುಪಿತ್ತು.

ನಮ್ಮಲ್ಲಿ 'ಚೀನಾಪರ' ಇರುವವರು ಯಾರು ಎಂಬ ಒಂದು ಪಟ್ಟಿಯನ್ನು 'ಡಾಂಗೆ ನಿಷ್ಠರು' ಕೇಂದ್ರ ಸರಕಾರಕ್ಕೆ ಕಳಿಸಿದ್ದಾರೆ ಎಂಬ ಮಾಹಿತಿ ನಮಗೆ ಸಿಕ್ಕಿತ್ತು. ಬಂಧನಕ್ಕೆ ಸಹಾಯವಾಗಲು ಪಟ್ಟಿಯನ್ನು ದೆಹಲಿಗೆ ರವಾನಿಸಲಾಗಿತ್ತು. ನಮ್ಮ ಪ್ರತಿಕೃತಿಗಳನ್ನು ಸುಡಲಾಯಿತು. ಚೌ.ಎಲ್.ಲ್ಯಾ ಮತ್ತು ನನ್ನ ಪ್ರತಿಕೃತಿಗಳನ್ನು ಮಾರಾಟ ಮಾಡಲು ಒಬ್ಬಾತ ಕಾಳಿಘಾಟ್‌ನಲ್ಲಿ ಅಂಗಡಿಯನ್ನೇ ಆರಂಭಿಸಿದ್ದು ನನಗೆ ನೆನಪಿದೆ!

ಪೋಲೀಸರು ಮಧ್ಯಪ್ರವೇಶಿಸಿದರೂ ನಮ್ಮ ಪಕ್ಷದ ಕಚೇರಿ ಮೇಲೆ ಆಕ್ರಮಣ ಮಾಡಲಾಯಿತು. ಪಾರ್ಕ್‌ಲೇಸ್‌ನಲ್ಲಿ 'ಸ್ವಾಧೀನತಾ' ಕಚೇರಿ ಇತ್ತು. ಅದರ ಮೇಲೂ ಕೂಡ ದಾಳಿ ಮಾಡಲು ಕಾಂಗ್ರೆಸ್ಸಿಗರು ಸಂಚು ಹೂಡಿರುವುದು ಗೊತ್ತಾಯಿತು. ಮುಂಜಾಗ್ರತೆಯಾಗಿ ನಾವು ಅಲ್ಲಿಗೆ ಸ್ವಯಂಸೇವಕರನ್ನು ಕಳಿಸಿದೆವು. ಅದೃಷ್ಟವಶಾತ್ ಅಲ್ಲಿ ಯಾವುದೇ ಆಕ್ರಮಣ ನಡೆಯಲಿಲ್ಲ.

ಈ ನಡುವೆ, ಗಡಿ ಸಂಘರ್ಷ ಪೂರ್ಣ ಪ್ರಮಾಣದ ಕಾಳಗವಾಗಿ ಪರಿವರ್ತನೆಗೊಂಡಿತ್ತು. ಚೀನಿಸೇನೆ ಬೊಮ್ಡಿಲಾ ಪಾಸ್‌ವರೆಗೆ ತಲುಪಿತ್ತು. ಹಾಗೂ ತಕ್ಷಣವೇ ಹಿಂದೆ ಸರಿಯಲು ಅದು ನಿರ್ಧರಿಸಿತ್ತು.

'ಸ್ವಾಧೀನತಾ' ವಶಕ್ಕೆ ಹುನ್ನಾರ

'ಸ್ವಾಧೀನತಾ' ದ ಸಂಪಾದಕತ್ವವನ್ನು ಆಗಿನ ಸಂಪಾದಕ ಸರೋಜ ಮುಖರ್ಜಿ ಅವರ ಬದಲಿಗೆ ಸೋಮನಾಥ ಲಾಹಿರಿ ಅವರಿಗೆ ವಹಿಸಬೇಕೆಂದು ಡಾಂಗೆಗೆ ನಿಷ್ಠರಾಗಿದ್ದ ಪ.ಬಂಗಾಳದ ಕೆಲವು ನಾಯಕರು ನಮ್ಮ ಮುಂದೆ ಪ್ರಸ್ತಾಪವಿಟ್ಟರು. ಸಂಪಾದಕೀಯ ಮಂಡಳಿಯನ್ನು ವಶಪಡಿಸಿಕೊಂಡು ಪತ್ರಿಕೆಯನ್ನು ಕಾಂಗ್ರೆಸ್ ನಿಲುವಿನ ಪ್ರಕಾರ ನಡೆಸಿಕೊಂಡು ಹೋಗಲು ಯೋಜಿಸಲಾಗಿತ್ತು ಎನ್ನುವುದು ಇದರ ಅರ್ಥವಾಗಿತ್ತು.

ಆದರೆ ಈ ಪ್ರಸ್ತಾವವನ್ನು ನಾವು ತಿರಸ್ಕರಿಸಿದೆವು. ಆನಂತರ, ವ್ಯಾಪಕ ದಾಳಿ ಮತ್ತು ಬಂಧನಗಳ ಹಿನ್ನೆಲೆಯಲ್ಲಿ 'ಸ್ವಾಧೀನತಾ' ಅನೇಕ ಮುಖಂಡರನ್ನು ಬಂಧಿಸಿದ ಅವಕಾಶವನ್ನು ಬಳಸಿಕೊಂಡು ಡಾಂಗೆ ನಿಷ್ಠರು ಪ್ರಕಟಣೆಯನ್ನು ತಮ್ಮ ಕೈವಶ ಮಾಡಕೊಂಡರು.

ಪ್ರಮೋದ್ ದಾಸ್‌ಗುಪ್ತಾ, ಸರೋಜ್ ಮುಖರ್ಜಿ, ನಿರಂಜನ ಸೇನ್‌ಗುಪ್ತಾ, ಹರೇಕೃಷ್ಣ ಕೋನಾರ್ ಮತ್ತು ನನ್ನ ಮೇಲೆ ಪೋಲೀಸರು ಹದ್ದಿನ ಕಣ್ಣಿಟ್ಟಿದ್ದರು. ನಾವು ಹೋದಲೆಲ್ಲಾ ಪೋಲೀಸರು ನಮ್ಮ ಬೆನ್ನ ಹಿಂದೆ ಇರುತ್ತಿದ್ದರು. ನನ್ನ ಬಂಧನವಾಗುವ ಹಿಂದಿನ ದಿನ ಸಂಜೆ ನನ್ನನ್ನು ಸ್ನೇಹಾಂಗ್ಶು ಆಚಾರ್ಯರ ಮನೆಗೆ ಆಹ್ವಾನಿಸಲಾಗಿದ್ದು ನನಗೆ ಚೆನ್ನಾಗಿ ನೆನಪಿದೆ. ಬಹುತೇಕ, ಪ್ರಮೋದ ದಾಸ್ ಗುಪ್ತ ಅಲ್ಲಿ ಬರಬೇಕಾಗಿತ್ತು. ದಿನೇಶ್ ರಾಯ್ ಅಲ್ಲಿದ್ದರು. ನಾವು ಊಟ ಮಾಡುತ್ತಿದ್ದಾಗ ಸ್ನೇಹಾಂಗ್ಶು ಅವರ ಮನೆಯ ಹೊರಗೆ ಒಂದು ಕಾರನ್ನು ನಾವು ಗಮನಿಸಿದೆವು. ನಾನು ಅಲ್ಲಿಂದಹೊರಟಾಗ ನನ್ನನ್ನು ಆ ಸಂಜೆಯೇ ಬಂಧಿಸುವ ಸಾಧ್ಯತೆಯಿದೆ ಎಂದು ಸ್ನೇಹಾಂಗ್ಶು ನನಗೆ ಹೇಳಿದರು.

ಮರುದಿನ ಮುಂಜಾನೆ ಮೂರು ಗಂಟೆಗೆ ಪೋಲೀಸರು ನನ್ನ ಮನೆಗೆ ಬಂದು 'ನಿಮ್ಮನ್ನು ಬಂಧಿಸುತ್ತಿದ್ದೇವೆ' ಎಂದರು. ನಾನೂ ಅಷ್ಟೇ ಸರಾಗವಾಗಿ 'ಗೋ ಅಹೆಡ್' ಎಂದೆ.

ಮರುದಿನ ರಾಜ್ಯಾದ್ಯಂತ ವ್ಯಾಪಕ ದಾಳಿ-ಬಂಧನಗಳಾದವು. ಪ್ರಮೋದ್ ದಾಸ್‌ಗುಪ್ತಾ, ಮುಜಫರ್ ಅಹ್ಮದ್, ಕೃಷ್ಣಪಾದ ಘೋಷ ಮತ್ತಿತರರು ಸೆರೆಮನೆ ಸೇರಿದರು. ಆದರೆ ಸಮರ್ ಮುಖರ್ಜಿ, ಬಿನಯ್ ಚೌಧರಿ ಮತ್ತು ನರೇಶ್ ದಾಸ್‌ಗುಪ್ತಾ ಮೊದಲಾದ ನಾಯಕರು ಪಕ್ಷದ ನಿರ್ದೇಶನದ ಮೇರೆಗೆ ಬಂಧನದಿಂದ ತಪ್ಪಿಸಿಕೊಂಡು ಭೂಗತರಾಗಿ ಕೆಲಸ ಮುಂದುವರಿಸಿದರು.

ಚೀನಾ ಪೂರ್ಣ ಪ್ರಮಾಣದ ಯುದ್ಧಕ್ಕೆ ಕಾತರಿಸುತ್ತಿರುವುದರಿಂದ ನೀವೆಲ್ಲಾ ಹೆಚ್ಚು ದಿನ ಜೈಲಿನಲ್ಲಿ ಇರಬೇಕಾಗಿಲ್ಲ ಎಂದು ಪೋಲೀಸರು ನಮಗೆ ಹೇಳಿದರು. ಆದರೆ, ಯುದ್ಧ ಕೇವಲ 14 ದಿನ ನಡೆದರೂ ನಾವು ಅಲ್ಲಿ ಸಲ್ಲದ ಆರೋಪಗಳ ಮೇಲೆ ಒಂದು ವರ್ಷ ಜೈಲಿನಲ್ಲಿ ಕಳೆದೆವು. 1963 ಡಿಸೆಂಬರ್‌ನಲ್ಲಿ ನಮ್ಮನ್ನು ಬಿಡುಗಡೆ ಮಾಡಲಾಯಿತು.

ನಮ್ಮನ್ನು ಪ್ರೆಸಿಡೆನ್ಸಿ ಕಾರಾಗೃಹದಲ್ಲಿ ಇಡಲಾಗಿತ್ತು. ಆ ವೇಳೆ ನನ್ನ ತಂದೆ ನಿಧನರಾದರು. ನನ್ನ ಪತ್ನಿ ಸರಕಾರದ ಮುಖ್ಯಕಾರ್ಯದರ್ಶಿಯನ್ನು ಸಂಪರ್ಕಿಸಿ ಅಂತಿಮ ಸಂಸ್ಕಾರದಲ್ಲಿ ಪಾಲ್ಗೊಳ್ಳಲಿಕ್ಕಾಗಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿದರು. ಸರಕಾರ ನನ್ನನ್ನು ಒಂದು ದಿನ ಪೆರೋಲ್ ಮೇಲೆ ಬಿಟ್ಟಿತು. ನನ್ನ ಪತ್ನಿ ಮತ್ತು ಸಂಬಂಧಿಕರ ಹತ್ತಿರ ಮಾತನಾಡುತ್ತಿದ್ದಾಗಲೂ ಪೋಲೀಸರು ಹತ್ತಿರ ನಿಂತಿದ್ದದ್ದು ಅಸಹ್ಯವಾಗಿತ್ತು.

ಬಂಧಿತ ಪ್ರಮುಖರಲ್ಲಿ ಮನೋರಂಜನ್ ರಾಯ್ ಮತ್ತು ಗಣೇಶ್ ಘೋಷ್ ಕೂಡ ಇದ್ದರು.


ಡಾಂಗೆ ಬಣದ ವಿಫಲ ಯತ್ನ

ಪಕ್ಷದ ಪಶ್ಚಿಮ ಬಂಗಾಳದ ಘಟಕದ ಮೇಲೆ ನಿಯಂತ್ರಣ ಸಾಧಿಸಲು ಡಾಂಗೆ ನಿಷ್ಠರು ಪ್ರಯತ್ನಿಸಿದರು. ಆದರೆ ಬಹುಸಂಖ್ಯಾತ ಸದಸ್ಯರು ನಮ್ಮ ಜತೆ ಇದ್ದಿದ್ದರಿಂದ ಅವರು ಸಫಲರಾಗಲಿಲ್ಲ.

ದೇಶದ್ರೋಹದ ಸುಳ್ಳು ಆರೋಪಗಳ ಮೇಲೆ ಪಕ್ಷದ ಪಶ್ಚಿಮ ಬಂಗಾಳ ಘಟಕ ಬಹುತೇಕ ನಾಯಕರನ್ನು 1962 ಅಕ್ಟೋಬರ್‌ನಲ್ಲಿ ಬಂಧಿಸಲಾಯಿತು. ಸೆರೆಮನೆಯಲ್ಲಿ ಒಂದು ವರ್ಷದ ನಂತರವೂ ಪೋಲೀಸರು ನಮ್ಮ ಮೇಲೆ ಕಣ್ಣಿಡುವುದನ್ನು ಮುಂದುವರಿಸಿದರು.

ಪರಿಷ್ಕರಣವಾದಿಗಳಿಲ್ಲದ ಪಕ್ಷದ ರಚನೆ - ಮುಂದಿನವಾರ

ಕೃಷ್ಣ ಸರ್ಕಾರದ ಒಂದು ವರ್ಷ



ಎಸ್.ಎಂ.ಕೃಷ್ಣರವರ ಸರ್ಕಾರಕ್ಕೆ ಒಂದು ವರ್ಷ ತುಂಬಿದೆ. ಕೃಷ್ಣರವರ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಸಾಗುತ್ತಿರುವ ಬಗ್ಗೆ ವಿಶ್ಲೇಷಿಸಲು, ವಿಮರ್ಶಿಸಲು ಸರಿಯಾದ ಸಂದರ್ಭ ಇದು. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪುನರಾಯ್ಕೆಗೊಂಡು ಅಧಿಕಾರಕ್ಕೆ ಬಂದ ಸಂದರ್ಭ ಹಾಗೂ ಕಾರಣಗಳ ಬಗ್ಗೆ ವಿವೇಚಿಸಬೇಕು. ಕರ್ನಾಟಕದ ಜನತೆ ಈ ಹಿಂದೆ ಅಧಿಕಾರ ನಡೆಸಿದ್ದ ಜನತಾದಳವನ್ನು ತಿರಸ್ಕರಿಸಿ ಹಾಗೂ ಅಧಿಕಾರಕ್ಕೆ ಬಂದೇ ಬಿಟ್ಟಿದ್ದೇನೆಂದು ಭ್ರಮಿಸಿದ್ದ ಬಿಜೆಪಿಯನ್ನು ತಿರಸ್ಕರಿಸಿ ಕಾಂಗ್ರೆಸ್ಸಿಗೆ ಬಹುಮತವನ್ನು ಯಾವ ವಿಭಾಗದ ಜನತೆ ಏಕೆ ನೀಡಿದರು? ಎಂಬ ಹಿನ್ನೆಲೆಯಿಂದಲೇ ಒಂದು ವರ್ಷದ ಅಧಿಕಾರವನ್ನು ವಿವೇಚಿಸಬೇಕಾದದ್ದು ಸರಿಯಾದ ಪ್ರಜಾಸತ್ತಾತ್ಮಕ ವಿಮರ್ಶೆ.

ಕರ್ನಾಟಕದ ಹಲವು ಪತ್ರಿಕೆಗಳಲ್ಲಿ ಹಾಗು ಮಾಧ್ಯಮಗಳಲ್ಲಿ ಕಾಂಗ್ರೆಸ್ ಸರ್ಕಾರದ ಒಂದು ವರ್ಷದ ಬಗ್ಗೆ ಹಲವು ದೃಷ್ಟಿಕೋನದ ವಿಮರ್ಶೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವೀಯ ದೃಷ್ಟಿಯ ವಿಶ್ಲೇಷಣೆ ಎಂಬುದು ಮಹತ್ವವನ್ನು ಪಡೆಯುತ್ತದೆ.

ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಮತ ನೀಡಿ ಅದು ಅಧಿಕಾರಕ್ಕೆ ಬರಲು ಕಾರಣವಾದವರು ಕರ್ನಾಟಕದ ದಲಿತ ಹಾಗೂ ಹಿಂದುಳಿದ ಜಾತಿಗಳ ಬಡಜನರು ಮತ್ತು ಅಲ್ಪಸಂಖ್ಯಾತರು ಎಂಬುದರಲ್ಲಿ ಸಂದೇಹವಿಲ್ಲ. ಈ ವಿಭಾಗಗಳು ಒಂದುಕಡೆ ಬಿಜೆಪಿ ಕೂಟದ ಕೇಂದ್ರ ಸರ್ಕಾರದ ಆಡಳಿತ ಅನುಸರಿಸುತ್ತಿದ್ದ ಆರ್ಥಿಕ ನೀತಿಗಳಿಂದಾಗಿ ಹಾಗೂ ಕೋಮುದಂಗೆಗಳನ್ನು ಪ್ರೋತ್ಸಾಹಿಸುತ್ತಿದ್ದ ಕೋಮುವಾದಿ ನೀತಿಗಳಿಂದಾಗಿ ಬೇಸತ್ತು, ಬಿಜೆಪಿಯನ್ನು ತಿರಸ್ಕರಿಸಿದರು. ಹಾಗೆಯೇ ಹಿಂದೆ 5 ವರ್ಷ ಆಳ್ವಿಕೆ ನಡೆಸಿದ ಜನತಾದಳ ಸರ್ಕಾರದ ಅಡಿಯಲ್ಲಿ ಬಡಜನತೆಯ ಜೀವನ ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಿದ್ದು, ಹೊಸ ಆರ್ಥಿಕ ನೀತಿಗಳ ಅನುಸರಣೆಯಿಂದ ರಾಜ್ಯ ಸರ್ಕಾರಗಳ ಸೇವೆಯಲ್ಲಿ ಬೆಲೆ ಏರಿಕೆ ಉಂಟಾಗಿದ್ದು ಹಾಗೂ ಅದರಿಂದ ಉಂಟಾದ ಜನರ ಅತೃಪ್ತಿಯನ್ನು ಎದುರಿಸಲಾರದೆ ಜನತಾದಳದಲ್ಲಿ ಉಂಟಾದ ತೀವ್ರ ಕಚ್ಚಾಟ ಮತ್ತು ಅಂತಿಮವಾಗಿ ಒಡಕು ಇವುಗಳಿಂದಾಗಿ ಜನತಾದಳವನ್ನು ತಿರಸ್ಕರಿಸಿತು.

ಒಟ್ಟಿನಲ್ಲಿ ಕಾಂಗ್ರೆಸ್ಸಿಗೆ ಮತ ನೀಡಿದ ಜನರ ಅಪೇಕ್ಷೆ ತಮ್ಮ ಬಡತನವನ್ನು ಹೋಗಲಾಡಿಸುವ, ಬೆಲೆ ಏರಿಕೆಯನ್ನು ಕಡಿಮೆ ಮಾಡುವ ಸರ್ಕಾರ. ಇದನ್ನು ಇಂಗ್ಲೀಷಿನಲ್ಲಿ mandate ಎಂದು ಕರೆಯುತ್ತಾರೆ. ಕನ್ನಡದಲ್ಲಿ 'ಜನರ ನಿರ್ದೇಶನ' ವೆಂದು ಕರೆಯಬಹುದು. ಇದನ್ನು ಸರಿಯಾಗಿ ಗ್ರಹಿಸಿ ಜನರ ನಿರ್ದೇಶನಕ್ಕೆ ಅನುಗುಣವಾಗಿ ಆಡಳಿತ ನಡೆಸುವುದೇ ಪ್ರಜಾಪ್ರಭುತ್ವದ ಮೂಲತತ್ವ. ಆದ್ದರಿಂದಲೇ ಯಾವುದೇ ಆಡಳಿತವನ್ನು ಜನರ ನಿರ್ದೇಶನವೆಂಬ ಒರೆಗಲ್ಲಿಗೆ ಸಿಕ್ಕಿ ವಿಮರ್ಶೆ ಮಾಡಬೇಕು.

ಹೈಟೆಕ್ ಆಡಳಿತ v/s ಜನಪರ ಆಡಳಿತ

ಕಾಂಗ್ರೆಸ್ ಪಕ್ಷ ಬಹುಮತ ಪಡೆದು ಎಸ್.ಎಂ.ಕೃಷ್ಣರನ್ನು ಮುಖ್ಯಮಂತ್ರಿಯನ್ನಾಗಿ ಆರಿಸಿದ ಕ್ಷಣದಿಂದಲೇ ಜನರ ನಿರ್ದೇಶನವನ್ನು ಕಡೆಗಣಿಸುವ ಕೆಲಸ ಆರಂಭವಾಯಿತು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಗಳಿಗೆಯಿಂದ ಹಿಡಿದು ಇಲ್ಲಿಯವರೆಗೆ ಎಸ್.ಎಂ.ಕೃಷ್ಣ 'ಹೈಟೆಕ್' ಮಾದರಿಯ ಆಡಳಿತದ ಚಂದ್ರಬಾಬು ನಾಯ್ಡು ದಾರಿಯನ್ನು ಆಯ್ದುಕೊಂಡರು. ಕಂಪ್ಯೂಟರ್ ಹಾಗೂ ಮಾಹಿತಿ ತಂತ್ರಜ್ಞಾನದ ಸದ್ಬಳಕೆ, ಜನಸಾಮಾನ್ಯರಿಗೆ ಅದರ ಪ್ರಯೋಜನ ದಕ್ಕುವಂತಹ ಯೋಜನೆಗಳು ಅತ್ಯವಶ್ಯ. ಆದರೆ ಸಾಮನ್ಯ ವಿದ್ಯೆ ಮತ್ತು ಜೀವಿಸುವ ಸಾಮರ್ಥ್ಯದಿಂದಲೇ ವಂಚಿತರಾದ ಕೋಟ್ಯಾಂತರ ಜನಕ್ಕೆ ಇವುಗಳಿಂದ ಹೊಟ್ಟೆ ತುಂಬುವುದಿಲ್ಲ. ಇಂತಹ ಸಂದರ್ಭದಲ್ಲಿ ಕೇವಲ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನಕ್ಕೆ ಮಾತ್ರ ಒತ್ತು ನೀಡುತ್ತ ಕರ್ನಾಟಕ ಜನಕೋಟಿ ಅವಲಂಬಿಸಿದ ಕೃಷಿ ಮತ್ತು ಕೈಗಾರಿಕೆಗಳ ಅಲಕ್ಷ, ತಮ್ಮ ಕಣ್ಣೆದುರೇ ಕೈಗಾರಿಕೆಗಳು ಮುಚ್ಚುತ್ತಾ ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗುತ್ತಿದ್ದರೂ ಹಾಗೂ ಅನೇಕ ಬೆಳೆಗಳ ಬೆಲೆ ಕುಸಿದು ಲಕ್ಷಾಂತರ ರೈತರು ಸಂಕಟಕ್ಕೀಡಾಗಿ, ಆತ್ಮಹತ್ಯೆ

ಜಿ.ಎನ್.ನಾಗರಾಜ್

ಮಾಡಿಕೊಳ್ಳುತ್ತಿದ್ದರೂ ಅದರ ಬಗ್ಗೆ ಯಾವ ಕಾಳಜಿಯನ್ನೂ ವ್ಯಕ್ತಪಡಿಸದ ಅಮಾನವೀಯ ಸ್ಥಿತಿ ಕೃಷ್ಣ ಸರ್ಕಾರದ ದಾರಿಗೆ ಹಿಡಿದ ಕನ್ನಡಿ.

ಕರ್ನಾಟಕದಲ್ಲಿ ತೊಗರಿ ಹಾಗೂ ಎಣ್ಣೆ ಕಾಳುಗಳ (ಸೂರ್ಯಕಾಂತಿ, ಶೇಂಗಾ ಮೊದಲಾದ) ಬೆಲೆ ಕುಸಿದು 15 ಸಾವಿರಕ್ಕೂ ಹೆಚ್ಚು ಎಣ್ಣೆ ಗಿರಣಿಗಳು ಹಾಗೂ ತೊಗರಿ ಬೇಳೆ ಮಿಲ್‌ಗಳು ಮುಚ್ಚಿರುವಾಗ, ತೆಂಗು, ಅಡಿಕೆ, ತರಕಾರಿಗಳು, ರೇಷ್ಮೆ, ಹಾಲು, ಜೋಳ, ಮುಸುಕಿನ ಜೋಳ, ರಾಗಿ ಮೊದಲಾದವುಗಳ ಬೆಲೆ ಕುಸಿಯುತ್ತಿರುವಾಗ ಕೃಷ್ಣರವರಿಂದ ಪ್ರತಿಕ್ರಿಯೆ ಇಲ್ಲ.

ಅದೇ ರೀತಿ ಕರ್ನಾಟಕದ ಹಲವು ಕೈಗಾರಿಕೆಗಳು ನಷ್ಟಕ್ಕೊಳಗಾಗಿ ಹತ್ತಾರು ಸಾವಿರ ಕೈಗಾರಿಕೆಗಳು ನಷ್ಟಕ್ಕೊಳಗಾಗಿ ಮುಚ್ಚುತ್ತಿದ್ದರೂ, ಮೈಸೂರು ರಾಜ್ಯವನ್ನು 'ಮಾದರಿ ಮೈಸೂರು ರಾಜ್ಯ'ವನ್ನಾಗಿಸಿದ ಕೀರ್ತಿಗೆ ಕಾರಣವಾದ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆ, ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ ಮತ್ತು ಮಂಡ್ಯದ ನ್ಯಾಷನಲ್ ಕಾಗದ ಕಾರ್ಖಾನೆ, ದಾವಣಗೆರೆ, ಮೈಸೂರು, ಬೆಂಗಳೂರು ಮುಂತಾದ 40 ಕ್ಕೂ ಹೆಚ್ಚು ಜವಳಿ ಗಿರಣಿಗಳು, ಮಿನಿ ಉಕ್ಕು ಕಾರ್ಖಾನೆಗಳು, ಚಿನ್ನದ ಗಣಿ, ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳು ಸೊರಗಿ ಸಾಯುವಂತಾಗಿದ್ದರೂ ಅವುಗಳ ಕಡೆಗೆ ಕಣ್ಣು ತಿರುಗಿಸಿ ಕೂಡ ನೋಡದ ಕುರುಡುತನ ಕೃಷ್ಣರ ಸರ್ಕಾರಕ್ಕೆ.

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಕೂಟದ ಆವುದು ನೀತಿಯಿಂದಾಗಿ, ವಿಶ್ವಬ್ಯಾಂಕ್, ವಿಶ್ವವಾಣಿಜ್ಯ ಸಂಸ್ಥೆಗಳ ಶರತ್ತುಗಳಿಂದಾಗಿ ಕರ್ನಾಟಕದ ಲಕ್ಷಾಂತರ ರೈತ ಕೂಲಿಕಾರ ಕಾರ್ಮಿಕರು ಈ ರೀತಿ ಸಂಕಷ್ಟಕ್ಕೆ ಒಳಗಾಗಿದ್ದರೂ ಕೂಡ ಒಂದುಕಡೆ ಕೇಂದ್ರದ ಬಿಜೆಪಿ ಸರ್ಕಾರದ ನೀತಿಗಳ ಬಗ್ಗೆ ತಮಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲವೆಂಬ ಹೇಳಿಕೆ. ಆ ಮೂಲಕ ಬಿಜೆಪಿ ಸರ್ಕಾರದ ನೀತಿಗಳ ಅಂಗೀಕರಣೆ; ಮಾತ್ರವಲ್ಲ ಕರ್ನಾಟಕದ ಈ ಸ್ಥಿತಿಯಿಂದ ಬೇಗುದಿಗೊಂಡ ಕೃಷಿಸಚಿವ ಮತ್ತು ಸಣ್ಣ ಕೈಗಾರಿಕಾ ಸಚಿವರು ಜಾಗತೀಕರಣ, ಉದಾರೀಕರಣ ನೀತಿಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರೆ ತಕ್ಷಣವೇ ಝಳಪಿಸಿದ ಮುಖ್ಯಮಂತ್ರಿ ಕೃಷ್ಣರವರ ಚಾಟಿ.

ಮತ್ತೊಂದು ಕಡೆ ವಿಶ್ವಬ್ಯಾಂಕಿನ ಷರತ್ತುಗಳ ಪರಿಣಾಮವನ್ನು ಕಂಡುಂಡರು ಕೂಡಾ ಮತ್ತೆ ಮತ್ತೆ ವಿಶ್ವಬ್ಯಾಂಕ್ ಮುಂದೆ ಭಿಕ್ಷಾ ಪಾತ್ರೆ.

ಕರ್ನಾಟಕದ ರಸ್ತೆ, ಶಾಲೆ, ಆಸ್ಪತ್ರೆ, ನೀರಾವರಿ, ವಿದ್ಯುತ್ ಎಲ್ಲಾ ಅಭಿವೃದ್ಧಿಗಳಿಗೂ ದಿನನಿತ್ಯ ಹಾತೊರೆಯುತ್ತಿರುವ ಸಚಿವರು ಮತ್ತು ಈ ಸಾಲಗಳಿಗಾಗಿ ಅವರ ಎಲ್ಲಾ ಶರತ್ತುಗಳನ್ನು ಡೊಗ್ಗಾಲೂರಿ ಒಪ್ಪಿಕೊಂಡಿರುವುದು ಹೀಗೆ ಹತ್ತು ಹಲವಾರು ಉದಾಹರಣೆಗಳನ್ನು ಕೊಡಬಹುದು. ವಿಶ್ವಬ್ಯಾಂಕಿನೆಡೆಗೆ ಪ್ರತಿಯೊಂದಕ್ಕೂ ಸಾಲಕ್ಕಾಗಿ ಕೈ

ಪುಟ 11 ಕ್ಕೆ

ರೈತಸಮೂಹದ ಅಸಹನೀಯ ಸ್ಥಿತಿ ಮತ್ತೆ ಕ್ರಿಯಾಶೀಲವಾಗುತ್ತಿರುವ ರೈತ ಚಳುವಳಿ

ಕರ್ನಾಟಕದ ರೈತರ ಮೇಲೆ ತೀವ್ರ ಪ್ರಭಾವಿಸಬಲ್ಲ ಮೂರು ಪ್ರಮುಖ ಘಟನೆಗಳು ನಡೆದಿವೆ. ಬೆಳೆದ ಬೆಳೆಗೆ ಬೆಲೆ ಇಲ್ಲದೆ ಸಾಲವನ್ನು ತೀರಿಸಲಾಗದೇ ರೈತರ ಆತ್ಮಹತ್ಯೆಗಳ ಸರಣಿ, ಕಳಪೆ ಬೀಜ, ಗೊಬ್ಬರಗಳ ಹಗರಣದಂತಹ ಧಾರುಣ ಘಟನೆಗಳ ಸರಮಾಲೆ ಇರುವ ಹೈದರಾಬಾದ್-ಕರ್ನಾಟಕದ ಗುಲಬರ್ಗ ಜಿಲ್ಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನ ಜರುಗಿತು. ಸಾವಿರಸಾವಿರ ರೈತರು ಸಮ್ಮೇಳನದ ಕಲಾಪಗಳಲ್ಲಿ, ಮೆರವಣಿಗೆಗಳಲ್ಲಿ, ಜಾಥಾಗಳಲ್ಲಿ ಭಾಗಿಯಾದರು. ವಿಚಾರಸಂಕಿರಣಗಳು ನಡೆದವು. ಇಡೀ ಉತ್ತರಕರ್ನಾಟಕದಾದ್ಯಂತ ವ್ಯಾಪಕ ಪ್ರಚಾರವು ಪಸರಿಸಿತು. ಇದರ ಬೆನ್ನ ಹಿಂದೆಯೇ ಬೆಂಗಳೂರಿನಲ್ಲಿ ಸೆಪ್ಟೆಂಬರ್ 24, 25 ರಂದು 'ನವಧಾನ್ಯ' ಹಾಗೂ ಪುಟ್ಟಣ್ಣಯ್ಯ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘದ ಸಂಯುಕ್ತ ಪ್ರಯತ್ನದಿಂದ ಬೀಜ ಪಂಚಾಯತ್ ಜರುಗಿತು. ದೇಶದ ಹಾಗೂ ವಿದೇಶಗಳ ರೈತ ಸಂಘಟನೆಗಳ ಪ್ರಮುಖರು, ಬುದ್ಧಿಜೀವಿಗಳು, ಹೋರಾಟಗಾರರು ಸಾಲಕ್ಕಾಗಿ ಕಿಡ್ನಿ ಮಾರಿದ/ಆಂಧ್ರದ ನೊಂದ ರೈತರು, ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದ ಸದಸ್ಯರು ಭಾಗವಹಿಸಿದ್ದರು. ಹಲವಾರು ಪ್ರಬಂಧಗಳು, ಜೀವಂತ ಅನುಭವಗಳು ಮಂಡಿಸಲ್ಪಟ್ಟವು. 26 ರಂದು ರೈತರ ಬೃಹತ್ ರ್‍ಯಾಲಿಯೂ ಸಹ ನಡೆದು ವಿಶ್ವ ವ್ಯಾಪಾರ ಸಂಘಟನೆಯ ಆಕ್ರಮಣಗಳನ್ನು ಖಂಡಿಸಿ, ಹೋರಾಡುವ ನಿರ್ಧಾರ ಕೈಗೊಳ್ಳಲಾಯಿತು. ಹಾಗೆಯೇ ಅಕ್ಟೋಬರ್ 2 ರಂದು ಪ್ರೊ. ನಂಜುಂಡಸ್ವಾಮಿಯವರ ಕ.ರಾ.ರೈತ ಸಂಘವೂ ಸಹ ವಿಶ್ವ ವ್ಯಾಪಾರ ಸಂಸ್ಥೆಯ ಪಿತೂರಿಗಳ ಬಗ್ಗೆ ಅಂತರ್ರಾಷ್ಟ್ರೀಯ ರೈತ ಪ್ರತಿನಿಧಿಗಳ ಸಮಾವೇಶವನ್ನು ನಡೆಸಿತು.

ಈ ಮೂರು ರೈತ ಸಂಘಟನೆಗಳಲ್ಲಿ ಹಲವಾರು ಭಿನ್ನತೆ ಇದ್ದರೂ, ಜ್ವಲಂತ ಸಮಸ್ಯೆಗಳ ಬಗ್ಗೆ

ಕರ್ನಾಟಕ ಈ ವಾರ

ಸಾಮಾನ್ಯ ಅಂಶಗಳೂ, ನಿಲುವುಗಳೂ ಇವೆ. ಸಂಘರ್ಷಸಾರುವ ನಿರ್ಧಾರವಿದೆ. ಚಳುವಳಿಯ ಇತಿಹಾಸವೂ ಇದೆ. ಕರ್ನಾಟಕದ ರೈತ ಸಮುದಾಯ ಅನುಭವಿಸುತ್ತಿರುವ ಬವಣೆಗಳಿಗೆ ಅತೃಪ್ತಿ, ಪ್ರತಿಭಟನೆಗಳು ರೈತ ಚಳುವಳಿಯನ್ನು ಮತ್ತೆ ವ್ಯಾಪಕವಾಗಿ ಸಮರಶೀಲಗೊಳ್ಳುವಂತೆ ಮಾಡುತ್ತಿವೆ. ರೈತ ಸಮುದಾಯದ ಸಂಕಟಗಳಿಗೆ ಧ್ವನಿಯಾಗಿ, ಸಮರ ಸಾರುವ ದಿಕಿನಲ್ಲಿ ಇವೆಲ್ಲಾ ಅತ್ಯಂತ ಸ್ವಾಗತಾರ್ಹ ಬೆಳವಣಿಗೆಗಳು. ಇನ್ನಾದರೂ ಬಿಡಿಬಿಡಿಯಾಗಿ ಪ್ರತಿಕ್ರಿಯಿಸದೇ ಸಾಮಾನ್ಯ

ಎಸ್.ವೈ.ಗುರುಶಾಂತ್

ಬೇಡಿಕೆಗಳ ಮೇಲಾದರೂ ಜಂಟಿ ಚಳುವಳಿಯಾಗಿ ಸ್ಫೋಟಿಸುವುದು ರಾಜ್ಯದ, ರಾಷ್ಟ್ರದ ಜನಸಮುದಾಯದ ಹಿತದಿಂದ ಅತ್ಯಗತ್ಯವಾಗಿದೆ. ಈ ದಿಕ್ಕಿನಲ್ಲಿ ವಿಚಾರ ಮಂಥನ ಹಾಗೂ ತೀರ್ಮಾನಬೇಕು.

ಬಿಜೆಪಿಯಿಂದ ಹೊರಗಾದ ಬಾಬಾಗೌಡ

ಇನ್ನೊಂದೆಡೆ ಕರ್ನಾಟಕ ರಾಜ್ಯ ರೈತ ಸಂಘವನ್ನು ಒಡೆದು ಬಿಜೆಪಿ ಸೇರಿ, ಮಾಜಿ ಕೇಂದ್ರ ಸಚಿವರೂ ಆಗಿಬಿಟ್ಟಿದ್ದ ಬಾಬಾಗೌಡ ಪಾಟೀಲ್ ಅನೇಕ ರಾಜ್ಯದ ಪದಾಧಿಕಾರಿಗಳು, ಕಾರ್ಯಕರ್ತರೊಂದಿಗೆ ಇದೀಗ ಕಮಲದ ಸಖ್ಯ ತೊರೆದಿದ್ದಾರೆ, ಹೊರನಡೆದಿದ್ದಾರೆ. ಹೊಸ ಸಂಘಟನೆ ಹುಟ್ಟಿಹಾಕಲು ಮುಂದಾಗಿದ್ದಾರೆ. ಬಿಜೆಪಿಯನ್ನು ತುಂಬಾ ಹಾಡಿಹೊಗಳಿ ವಾಜಪೇಯಿ ಸರ್ಕಾರದಿಂದಲೇ ರೈತರ ಉದ್ಧಾರ ಎಂದೆಲ್ಲಾ ಹೇಳಿಕೊಂಡು ಓಡಾಡಿದ್ದ ಈ ಮಾಜಿ ಸಚಿವರಿಗೆ ಬಿಜೆಪಿ 'ಸರಿಯಾದ ಮರ್ಯಾದೆ' ತೋರಿದೆಯಂತೆ. ಬಿಜೆಪಿಯ(ಆರ್‌ಎಸ್‌ಎಸ್‌ನ) ಸಿದ್ಧಾಂತದೊಂದಿಗೆ ಕ್ಷಣಮಾತ್ರವೂ ಬದುಕಲು ಅಲ್ಲಿ ಸಾಧ್ಯವಿಲ್ಲ. ಯಡಿಯೂರಪ್ಪ, ಅನಂತಕುಮಾರರ ದರ್ಬಾರು ಅಸಹ್ಯ ಹುಟ್ಟಿಸುತ್ತದೆ. ಬಿಜೆಪಿಯೂ ಮೂಳೆ ಗುಂಪಾಗುತ್ತಿದೆ. ಅದಕ್ಕೆ ನೆಲೆ ಎಲ್ಲಿ ಬೆಲೆ ಎಲ್ಲಿ ಎಂದೆಲ್ಲಾ ಬಾಬಾಗೌಡರು ವಿವರಿಸಿದ್ದಾರೆ.

ಇದು ಕೇವಲ ಬಾಬಾಗೌಡರಿಗೆ ಸಿಕ್ಕ ಮರ್ಯಾದೆ ಮಾತ್ರವಲ್ಲ, ಬಹುತೇಕ ಬಿಜೆಪಿ ಸೇರಿದ ಇಂಥವರಿಗೆಲ್ಲಾ ಹೀಗೆಯೇ ಆಗಿದೆ. ಅಲ್ಲಿ ಆರ್.ಎಸ್.ಎಸ್.ನ ಕಟ್ಟಾಳುಗಳದೇ ದರ್ಬಾರು. ಅವರಿಗೆ ಎಲ್ಲಾ ಪ್ರಾಮುಖ್ಯತೆ. ಹಾವನೂರು, ನಂಜೇಗೌಡ, ಮುಂತಾದವರು ಊಟದಲ್ಲಿ ನಂಜಿಕೊಳ್ಳಲು ಇರಲಿ ಒಂದು ತುಂಡು ಉಪ್ಪಿನಕಾಯಿ ಎಂಬಂತೆ ಆದವರೇ.

ಬಾಬಾ ಗೌಡ ಪಾಟೀಲರನ್ನು ಹೊರನೂಕಿದ ಪರಿ ಇನ್ನೊಂದು ಸಂಗತಿಯನ್ನು ಹೇಳುತ್ತದೆ. ರೈತರ ಪಕ್ಷವೆಂದೆಲ್ಲಾ ಬೊಗಳೆ ಹೊಡೆಯುವ ಬಿಜೆಪಿಗೆ ರೈತಾಪಿ ಜನ ಸಮೂಹದ ಬಗ್ಗೆ ಇರುವ ತುಚ್ಛ ಮನೋಭಾವನೆಯನ್ನು ಈ ಘಟನೆ ತೋರಿಸುತ್ತದೆ. ಶ್ರೀಮಂತ ರೈತ ವಿಭಾಗಕ್ಕೆ ಭ್ರಮನಿರಸಗೊಳ್ಳುವಂತಾದರೆ ಇನ್ನು ಸಾಮಾನ್ಯ ರೈತರ ಪಾಡೇನು? ಅಂತೂ ಕ.ರಾ.ರೈತ ಸಂಘ ಒಡೆದು ಹಾನಿ ಮಾಡಿದ್ದು ಬಾಬಾಗೌಡರಿಗೆ ಈಗ ರಾಜಕೀಯವಾಗಿ ಹಾನಿಯಾಗಿರುವುದು ನಿಜ.

ಅಭಿನಂದಿಸಿಕೊಳ್ಳಬೇಕಾದವರು ಪ್ರತಿಭಟಿಸಿದರು

ಸೈಬರ್ ಕೃಷ್ಣರವರ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ ನಡೆಸಿತು. 'ಏತಕ್ಕಾಗಿ' ಎಂದರೆ ಕಾಗಕ್ಕ ಗುಬ್ಬಕ್ಕನ ಕಥೆ ಹೇಳಿ ಅದನ್ನು ಸಮರ್ಥಿಸಿಕೊಳ್ಳುವ ಗಟ್ಟಿ ಧ್ವನಿಯೇ ಇಲ್ಲವೆಂದು ಕಿಚಾಯಿಸಿತು. ಕೃಷ್ಣ ಅಧಿಕಾರಕ್ಕೆ ಬಂದು ವರ್ಷವಾಗಿರುವುದರಿಂದ 'ವಿರೋಧ ಪಕ್ಷದ ಪಟ್ಟ ಕಟ್ಟಿಕೊಂಡಿರುವುದಕ್ಕಾದರೂ ವಿರೋಧಿಸದಿದ್ದರೆ ಹೇಗೆ? ಎನ್ನುತ್ತಾರೆ ಅವರು. ಹಾಗೆ ನೋಡಿದರೆ ಬಿಜೆಪಿಯ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳಿಗೂ ರಾಜ್ಯ ಸರ್ಕಾರದ ನೀತಿಗಳಿಗೂ ಏನೂ ವ್ಯತ್ಯಾಸಗಳೇ ಇಲ್ಲ. ಇವುಗಳ ಜಾರಿಗಾಗಿ ಒಬ್ಬರಿಗಿಂತ ಒಬ್ಬರು ಟೊಂಕಕಟ್ಟಿ ನಿಂತಿದ್ದಾರೆ. ಹೀಗಾಗಿ ಕೃಷ್ಣರವರ ಸರ್ಕಾರವನ್ನು ಟೀಕಿಸುವ ಹಕ್ಕು ಬಿಜೆಪಿಗಂತೂ ಇಲ್ಲವೇ ಇಲ್ಲ. ಆದ್ದರಿಂದ ಪ್ರತಿಭಟಿಸುವ ಬದಲು ಪರಸ್ಪರ ಅಭಿನಂದಿಸುವ ಸಮಾರಂಭ ಏರ್ಪಡಿಸಿದ್ದರೆ ಸೂಕ್ತವಾಗುತ್ತಿತ್ತು. ಕೇಂದ್ರ ಸರ್ಕಾರ ಶಿಕ್ಷಣದ ಶುಲ್ಕಗಳನ್ನು ಹೆಚ್ಚಿಸುವುದು, ಇಲ್ಲಿ ಎಬಿವಿಪಿ ರಾಜ್ಯ ಸರ್ಕಾರವನ್ನು ಮಾತ್ರ ವಿರೋಧಿಸುವುದು... ಹಾಗೆ ಬಿಜೆಪಿ ಕೂಡ.... ಮಗುವನ್ನು ಚಿವುಟುವುದು, ತೊಟ್ಟಿಲು ತೂಗುವ ಇವರ ವೈಖರಿ ತಿಳಿದಿದ್ದೆ.

ಕಾಗದಾಡ ಉಪಚುನಾವಣೆ: ಕಾಂಗ್ರೆಸ್-ಬಿಜೆಪಿಗೆ ಪರ್ಯಾಯದ ಬಯಕೆ

ಪುಟ 8 ಕ್ಕೆ


ಪಶ್ಚಿಮ ಬಂಗಾಳದಲ್ಲಿ ಮಹಾಪ್ರವಾಹ

ಪಶ್ಚಿಮ ಬಂಗಾಳದ 9 ಜಿಲ್ಲೆಗಳನ್ನು ಆವರಿಸಿ 1100 ಜನರ ಸಾವಿಗೆ ಕಾರಣವಾದ ಜಲಪ್ರವಾಹದ ಬಗ್ಗೆ ಪತ್ರಿಕೆ ಮತ್ತು ಟಿ.ವಿ. ಮೊದಲಾದ ಮಾಧ್ಯಮಗಳಲ್ಲಿ ದೊಡ್ಡ ಚರ್ಚೆಯೇ ನಡೆದಿದೆ. ಇಂತಹ 3 ಕೋಟಿ ಜನ ಹಠಾತ್ ಆಘಾತಕ್ಕೀಡಾದ ಸಂಕಷ್ಟದ ಸಮಯದಲ್ಲಿ ಜನರ ನೆರವಿಗೆ ಧಾವಿಸಿ ಅವರ ದುಃಖ ಪರಿಹಾರ ಮಾಡುವುದಕ್ಕೆ ಬದಲಾಗಿ ಪ.ಬಂಗಾಳದಿಂದ ಕೇಂದ್ರದ ಮಂತ್ರಿಯಾಗಿರುವ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಕೊಚ್ಚೆಯಲ್ಲಿ ಮೀನು ಹಿಡಿಯುವ ನೀಚ ಮಟ್ಟಕ್ಕಿಳಿದಿದ್ದು ದುರಂತವೇ ಸರಿ.

ಈ ಜನ ಪ್ರವಾಹದ ಮೂಲ ಮಧ್ಯ ಬಂಗಾಳದಲ್ಲಿ ಕೇವಲ ಒಂದು ಗಂಟೆ ಅವಧಿಯಲ್ಲಿ 84.4 ಸೆ.ಮಿ. (33 ಇಂಚು) ರಷ್ಟು ಧೋ ಧೋ ಎಂದು ಸುರಿದ ಮಳೆ(ಎಂದರೆ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೀಳುವ ಒಂದು ವರ್ಷದ ಮಳೆ ಕೇವಲ ಒಂದು ಗಂಟೆಯಲ್ಲೇ ಸುರಿದಿದೆ ಎಂದರ್ಥ) ಹೀಗೆ ಆಕಾಶವೇ ಬಿರುಕುಬಿಟ್ಟಂತೆ ಆರಂಭವಾದ ಮಳೆ ಒಂದೇ ಸಮನೆ 3. ದಿನಗಳ ಕಾಲ ಎಡೆಬಿಡದೆ ಸುರಿದ ಫಲವಾಗಿ(ಒಂದು ಗಂಟೆಗೆ ಸರಾಸರಿ 78 ಸೆ.ಮಿ) ಕಲ್ಕತ್ತದ ಕೆಲವು ಭಾಗಗಳು ಸೇರಿದಂತೆ 9 ಜಿಲ್ಲೆಗಳನ್ನು ಆವರಿಸಿತು.

ಈ ರೀತಿಯ ಪ್ರವಾಹ ಆರಂಭವಾದ ಕೂಡಲೇ ಹತ್ತಾರು ಸಾವಿರ ಈಜು ಬಲ್ಲ ಯುವ ಜನರು ಮತ್ತು ಯುವತಿಯರು ಪ್ರವಾಹದಲ್ಲಿ ಸಿಕ್ಕಿಬಿದ್ದವರನ್ನು ರಕ್ಷಿಸಲು ನೀರಿಗೆ ಧುಮುಕಿ ಪ್ರವಾಹಕಾಲದಲ್ಲಿ ಬರುವ ಎಲ್ಲಾ ಹೊಲಸು ಮತ್ತು ಅಪಾಯಕಾರಿ ವಸ್ತುಗಳ ನಡುವೆ ಹಲವಾರು ದಿನಗಳ ಕಾಲ ಶ್ರಮಿಸಿ ಜನರನ್ನು, ಪಶುಪ್ರಾಣಿಗಳನ್ನು ಅವರ ಆಸ್ತಿ-ಪಾಸ್ತಿಗಳನ್ನು ಸಂರಕ್ಷಿಸಿದ್ದಾರೆ. 4 ಸಾವಿರಕ್ಕೂ ಹೆಚ್ಚು ನಾಡದೋಣಿಗಳು, ರಾಜ್ಯ ಸರ್ಕಾರದ 50 ವೇಗದ ದೋಣಿಗಳು ಮತ್ತು ಸೈನ್ಯದ 36 ಯಂತ್ರದೋಣಿಗಳು ಎಡೆಬಿಡದೆ 24 ಗಂಟೆಗಳ ಕಾಲ ಕೆಲಸ ಮಾಡುತ್ತಿವೆ. ಈ ಪರಿಹಾರ ಕಾರ್ಯದಲ್ಲಿ ಸಿಪಿಐ(ಎಂ)ನ 9 ಕಾರ್ಯಕರ್ತರು ಈಗಾಗಲೇ ಬಲಿದಾನವಾಗಿದ್ದಾರೆ. ಪರಿಹಾರ ಕಾರ್ಯದಲ್ಲಿ ನಿರತರಾಗಿರುವಾಗ ಸರ್ರನೇ ಮಿಂಚಿನಂತೆ ಬರುವ ಹೊಸ ಪ್ರವಾಹದ ಅಲೆಗಳಿಗೆ ಇವರು ತುತ್ತಾಗಿದ್ದಾರೆ.

ಈಗಾಗಲೇ 20 ಸಾವಿರ ಮೆಟ್ರಿಕ್ ಟನ್ ಆಹಾರ ವಸ್ತುಗಳನ್ನು ರವಾನಿಸ ಲಾಗಿದೆ ಮತ್ತು ಮುಂದೆ ಹಬ್ಬ ಬಹಿಂದಾದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ನೀರನ್ನು ಶುದ್ಧೀಕರಿಸುವ 'ಹ್ಯಾಲೋಜಿನ್' ಮಾತ್ರೆಗಳನ್ನು ಪ್ರದೇಶದಾದ್ಯಂತ ಸರಬರಾಜು ಮಾಡಲಾಗಿದೆ. ಈ ವರದಿ ಬರುವ ವೇಳೆಗೆ 500 ಲಾರಿಗಳಲ್ಲಿ ಟಾರ್ಪಾಲ್‌ಗಳು, ಆಹಾರ ವಸ್ತುಗಳು, ಔಷಧಿ ಹಾಗೂ ಬಟ್ಟೆಗಳನ್ನೊಳಗೊಂಡ ಪರಿಹಾರ ಸಾಮಗ್ರಿಗಳು ಕಲ್ಕತ್ತ ನಗರ ಬಿಟ್ಟು ಹೊರಟಿದ್ದವು. ಹೀಗೆ ರಾಜ್ಯ ಸರ್ಕಾರ ನೂರಾರು ಕೋಟಿ ರೂ. ತೊಡಗಿಸಿ ಭರದಿಂದ ಪರಿಹಾರ ಕಾರ್ಯಕ್ಕೆ ಟೊಂಕಕಟ್ಟಿ ನಿಂತಿದೆ.


ರಕ್ಷಣೆ ಕಾರ್ಯದಲ್ಲಿ ಸಿಪಿಐ(ಎಂ) ಕಾರ್ಯಕರ್ತ

ಮಮತಾ ಬ್ಯಾನರ್ಜಿ ಕ್ಷುಲ್ಲಕ ರಾಜಕೀಯ


ಕೃಪೆ: ತಿಕದೀರ್

ತೃಣಮೂಲ - ಬಿಜೆಪಿ ರಾಜಕೀಯ


ಹೀಗೆ ಇಡೀ ಬಂಗಾಳ ಪ್ರವಾಹದಿಂದ ರಕ್ಷಿಸುವ ರಣರಂಗದಲ್ಲಿ ತೊಡಗಿಸಿಕೊಂಡಿರುವಾಗ ಮಮತಾ ಬ್ಯಾನರ್ಜಿ ಎಂಬ ಅಬ್ಬರದ ಮಹಿಳೆ ಏನು ಮಾಡುತ್ತಿದ್ದಾರೆ? ಕಲ್ಕತ್ತದ ತನ್ನ ಮನೆಯ ಅಂಗಳವನ್ನು ಬಿಟ್ಟು ಕದಲದೆ ಮತ್ತು ಆ ಮನೆಗೆ ಕೇವಲ 7.ಕಿಮಿ ದೂರವಿರುವ 24 ಪರಗಣ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಒಂದು ಬಾರಿ ಇಣುಕಿ ನೋಡುವ ಕಾಳಜಿಯನ್ನು ತೋರದೆ, ಈ ಸಮರದಲ್ಲಿ ತೊಡಗಿರುವ ಎಡರಂಗ ಸರ್ಕಾರದ ಮೇಲೆ ಪುಂಕಾನುಪುಂಕದ ಆಪಾದನೆಗಳನ್ನು ಸುರಿಯುತ್ತಿದ್ದಾಳೆ. ಆಕೆಯ ಪ್ರಕಾರ ಇಡೀ ಪ್ರವಾಹ ಕೇವಲ ಮಾನವ ಸೃಷ್ಟಿ. ಪ.ಬಂಗಾಳದ 10-12 ನದಿಗಳಿಗೆ ಅಲ್ಲಲ್ಲಿ ಅಡ್ಡಲಾಗಿ ಕಟ್ಟಿರುವ ಬ್ಯಾರೇಜ್‌ಗಳ ಬಾಗಿಲುಗಳನ್ನು ತೆರೆದಿರುವುದರಿಂದ ಉಂಟಾಗಿದ್ದು.

ಭಾರತದಾದ್ಯಂತ ಪತ್ರಿಕೆ ಮತ್ತು ಟಿ.ವಿ.ಗಳು ಶೂರ ಮಹಿಳೆಯಂತೆ ಚಿತ್ರಿಸುತ್ತಿರುವ ಈ ಮಹಿಳೆ ಎಂತಹ ನೀಚ ಮಟಕ್ಕೆ ಇಳಿಯ ಬಲ್ಲಳೆಂಬುದಕ್ಕೆ ಇದೇ ಸಾಕ್ಷಿ. ಭಾರತದ ಹಲವಾರು ಭಾಗಗಳಲ್ಲಿ ಇದೇ ವರ್ಷ ಬೀಳುವುದಕ್ಕಿಂತ ಹೆಚ್ಚು ಮಳೆ ಒಂದೇ ಗಂಟೆಯಲ್ಲಿ ಸುರಿದರೆ ಆ ನೀರು ಎಂತಹ ರಭಸದಿಂದ ಎಷ್ಟು ದೊಡ್ಡ ಪ್ರಮಾಣದಲ್ಲಿ ನದಿಗಳಲ್ಲಿ ಧುಮ್ಮಿಕ್ಕುತ್ತದೆ ಎಂಬ ಬಗ್ಗೆ ಹೀಗೆ ಸೇರಿದ ನೀರು ಅಣೆಕಟ್ಟುಗಳ ಮೇಲೆ ಧಾಳಿ ಮಾಡಿದರೆ ಆ ಅಣೆಕಟ್ಟುಗಳ ಗತಿ ಏನಾಗುತ್ತದೆ? ಈ ಅಣೆಕಟ್ಟುಗಳು ಒಡೆದುಹೋದರೆ ಜಲಪ್ರವಾಹದ ನೀರಿನ ಜೊತೆಗೆ, ಅಲ್ಲಿ ಶೇಖರವಾಗಿದ್ದ ನೀರು ಸೇರಿ ಎಂತಹ ಜಲಪ್ರಳಯ ಸೃಷ್ಟಿಸುತ್ತದೆ ಎಂಬ ಬಗ್ಗೆ ಸಾಮಾನ್ಯ ಅರಿವು ಕೂಡ ಇಲ್ಲದ ಈ ಮಹಿಳೆ ಇಂತಹ ತಳಮಟ್ಟಕ್ಕೆ ಇಳಿದಿದ್ದು ದೇಶದ ರಾಜಕೀಯದ ಒಂದು ದುರಂತ.

ಮಮತಾ ಬ್ಯಾನರ್ಜಿಯವರ ಇಂತಹ ವಾದಗಳನ್ನು ಸ್ವತಃ ಪ.ಬಂಗಾಳಕ್ಕೆ ಭೇಟಿ ನೀಡಿದ್ದ ಕೇಂದ್ರ ಕೃಷಿಮಂತ್ರಿ ನಿತೀಶ್ ಕುಮಾರ್‌ರವರು ಧ್ವನಿಗೂಡಿಸಲಿಲ್ಲವೆಂದು ಅವರ ಮೇಲೆ ಕೂಡ ಈ ಕೇಂದ್ರ ಮಂತ್ರಿಣಿ ಹರಿಹಾಯ್ದಿದ್ದಾಳೆ. ಅದಲ್ಲದೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ರೈಲ್ವೆ ಮತ್ತು ಹವಾಮಾನ ಇಲಾಖೆಗಳನ್ನು ಬಳಸಿಕೊಂಡು ಅವುಗಳ ಮೂಲಕವು ಎಡರಂಗದ ವಿರುದ್ಧ ಅಪಪ್ರಚಾರ ಸಮರ ಸಾರಿದ್ದಾಳೆ. ಈ ನಿರುಪಯುಕ್ತ ರಾಜ್ಯ ಸರ್ಕಾರದಿಂದಾಗಿ ಪರಿಹಾರ ಸಾಮಗ್ರಿಗಳನ್ನು ಜನತೆಗೆ ತಲುಪಿಸಲಾಗಲಿಲ್ಲ ಎಂಬ ಜಾಹೀರಾತು ನೀಡುವ ಮಟ್ಟಕ್ಕೆ ರೈಲ್ವೆ ಇಲಾಖೆ ಎಡರಂಗ ಸರ್ಕಾರದ ವಿರುದ್ಧ ಇಳಿದಿದೆಯೆಂದರೆ ಎಡರಂಗ ಸರ್ಕಾರ ಎಂತಹ ಸಂಕಷ್ಟಗಳ ನಡುವೆ ಕೆಲಸ ಮಾಡುತ್ತಿದೆ ಎಂಬ ಅರಿವಾಗುತ್ತದೆ.

ಇನ್ನು ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಈ ಮಹಾ ಪ್ರವಾಹವನ್ನು ರಾಷ್ಟ್ರೀಯದುರಂತವೆಂದು ಘೋಷಿಸಿ ಇಡೀ ದೇಶದ ಸಹಾಯ ಹಸ್ತವನ್ನು ಚಾಚುವುದಕ್ಕೆ ಹಾಗೂ ಕೇಂದ್ರ ಸರ್ಕಾರದ ಬೊಕ್ಕಸದಿಂದ ಹಣಸಹಾಯ ಮಾಡುವುದರಲ್ಲಿ ರಾಜಕೀಯ ಮಾಡುತ್ತಿದೆ. ನಾಲ್ಕು ಸಾವಿರ ಕೋಟಿ ರೂ. ಮೊತ್ತದ ಮನೆ ಮತ್ತು ಆಸ್ತಿ ಪಾಸ್ತಿಗಳು ನಷ್ಟವಾಗಿರುವ ಸಂದರ್ಭದಲ್ಲಿ ಮತ್ತು ರಾಜ್ಯ ಸರ್ಕಾರ 1400 ಕೋಟಿಗಳಿಗಿಂತ ಹೆಚ್ಚಿದ ಪರಿಹಾರ ಕಾರ್ಯಕ್ರಮವನ್ನು ರೂಪಿಸಿ ಕೇಂದ್ರದ ನೆರವಿಗೆ ಮನವಿ ಸಲ್ಲಿಸಿರುವ ಸಂದರ್ಭದಲ್ಲಿ ಕೇವಲ 45 ಕೋಟಿ ರೂ.ಗಳ ಸಹಾಯದ ಮಾತನಾಡುವುದು ಬಿಜೆಪಿಕೂಟದ ಕಾಳಜಿಯ ಅಳತೆಗೋಲಾಗಿದೆ.

ಕೇವಲ ಕೆಲವೇ ತಿಂಗಳ ನಂತರ ನಡೆಯಲಿರುವ ಚುನಾವಣೆಯನ್ನೇ ದೃಷ್ಟಿಯಲ್ಲಿರಿಸಿಕೊಂಡು ತೃಣಮೂಲ ಮತ್ತು ಬಿಜೆಪಿ ಕೂಟ ನಡೆಸುತ್ತಿರುವ ಈ ಕುತಂತ್ರಗಳನ್ನು ಜನತೆ ಅರ್ಥಮಾಡಿಕೊಳ್ಳುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಹಲವಾರು ನೆರೆ ಪ್ರವಾಹಗಳ ಕಾರ್ಯದಲ್ಲಿ ಜೀವದ ಹಂಗು ತೊರೆದು ಧಮುಕಿ ಕೆಲಸ ಮಾಡುವ ಕಾರ್ಯಕರ್ತರ ಪಡೆ ಜನರೊಳಗೆ


ಮನೆಮಾರು ಕಳೆದುಕೊಂಡ ಜನತೆ

ಸಿಪಿಐ(ಎಂ)ನ ರಾಷ್ಟ್ರೀಯ ಪಕ್ಷದ ಮಾನ್ಯತೆ ರದ್ದು
ಅಸಂಬದ್ಧತೆಯ ಪರಾಕಾಷ್ಠೆ

ರಾಜಕೀಯ ಪಕ್ಷಗಳು ಹುಟ್ಟುತ್ತವೆ, ಸಾಯುತ್ತವೆ ಒಬ್ಬ ವ್ಯಕ್ತಿಯ ಪ್ರತಿಷ್ಠೆಗಾಗಿ ಪಕ್ಷಗಳು ಹುಟ್ಟುತ್ತವೆ, ಮತ್ತೊಬ್ಬ ವ್ಯಕ್ತಿಯ ಪ್ರತಿಷ್ಠೆಯಿಂದಾಗಿ ಸಾಯುತ್ತವೆ. ತತ್ವ ಸಿದ್ಧಾಂತಗಳೇ ಇಲ್ಲದ ಪಕ್ಷಗಳಿವೆ. ಸರ್ಕಾರದ ಹೊರಗಿದ್ದಾಗ ಒಂದು ಮಾತು, ಸರ್ಕಾರಕ್ಕೆ ಬಂದ ಮೇಲೆ ಮತ್ತೊಂದು ಮಾತು. ಅಧಿಕಾರಕ್ಕಾಗಿ ಏನನ್ನೂ ಮಾಡಲು ಹೇಸದ ಪಕ್ಷಗಳಿವೆ. ಹೀಗೆ ಭಾರತ ಮಾತೆಯ ಒಡಲಿನಲ್ಲಿ ಈ ರೀತಿಯ ಪಕ್ಷಗಳು ಎಷ್ಟೋ?

ಆದರೆ ಇವೆಲ್ಲವನ್ನೂ ಮೀರಿ ನಿಂತ ಪಕ್ಷವೊಂದಿದೆ. ತತ್ವಸಿದ್ಧಾಂತಗಳಿಗೆ ಬದ್ಧವಾದ ಪಕ್ಷವೊಂದಿದೆ. ಏನೇ ಆದರೂ ಜನಪರ ನಿಲುವು ತಳೆಯುವ ಪಕ್ಷವೊಂದಿದೆ. ಅಧಿಕಾರದಲ್ಲಿದ್ದೂ ಜನರ ಒಳಿತಿಗಾಗಿ ದುಡಿಯುತ್ತಿರುವ ಪಕ್ಷ ಒಂದಿದೆ. ರಾಷ್ಟ್ರೀಯ ಹಿತಾಸಕ್ತಿಗಾಗಿ ಅಧಿಕಾರವನ್ನು ತ್ಯಜಿಸಲೂ ಸಿದ್ಧವಾದ ಪಕ್ಷ ಒಂದಿದೆ. ಅದೇ ಸಿಪಿಐ(ಎಂ) ಪಕ್ಷ.

ಕಟ್ಟುನಿಟ್ಟಿನ ಶಿಸ್ತು, ನಿಖರವಾದ ಗುರಿ, ಆಮಿಷಕ್ಕೊಳಗಾಗದ ಗಟ್ಟಿತನ, ಸ್ವಚ್ಛ ನಿಷ್ಕಳಂಕ ಆಡಳಿತ ಮುಂತಾದ ಗುಣಗಳಿಂದ ಜನಮನವನ್ನು ಗೆದ್ದಿರುವ ಪಕ್ಷ ಸಿಪಿಐ(ಎಂ). ಮೂರೇ ದಶಕಗಳಲ್ಲಿ ಮೂರು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಪಕ್ಷ. ಸಿಪಿಐ(ಎಂ) ಲೋಕಸಭೆಯಲ್ಲಿ 33 ಜನ ಸಂಸದರನ್ನು ಹೊಂದಿ ಕಾಂಗ್ರೆಸ್ ಮತ್ತು ಬಿಜೆಪಿಯ ನಂತರದ ದೊಡ್ಡ ಶಕ್ತಿಯಾಗಿರುವ ಪಕ್ಷ, ಸಿಪಿಐ(ಎಂ) 12 ರಾಜ್ಯಗಳಲ್ಲಿ (ವಿಧಾನಸಭೆಗಳಲ್ಲಿ)ತನ್ನ ಪ್ರತಿನಿಧಿಗಳನ್ನು ಹೊಂದಿ ರಾಷ್ಟ್ರೀಯ ವ್ಯಾಪಕತೆಯನ್ನು ಪಡೆದಿರುವ ಪಕ್ಷ ಸಿಪಿಐ(ಎಂ).

ಸತ್ಯ ಹೀಗಿರುವಾಗ, ಸಿಪಿಐ(ಎಂ) ಪಕ್ಷದ ರಾಷ್ಟ್ರೀಯ ಮಾನ್ಯತೆಯನ್ನು ಕೇವಲ ತಾಂತ್ರಿಕ ಕಾರಣಗಳಿಗಾಗಿ ರದ್ದು ಮಾಡಿರುವ ಚುನಾವಣಾ ಆಯೋಗದ ಘನಕಾರ್ಯವನ್ನು ನೋಡಿ ನಗಬೇಕೋ, ಅಳಬೇಕೋ? ಕ್ಷುಲ್ಲಕ ಕಾರಣ ನೀಡಿ ಮಾನ್ಯತೆ ರದ್ದು ಮಾಡುವುದರ ಮೂಲಕ ಸಿಪಿಐ(ಎಂ)ನ ವರ್ಚಸ್ಸನ್ನು ಕಡಿಮೆ ಮಾಡುತ್ತೇವೆಂಬ ಭ್ರಮೆ ಇರಬಹುದೇ? ಪ್ರಭಾವವನ್ನು ಇಳಿಸಿಬಿಡುತ್ತೇವೆಂಬ ಒಣ ಹವ್ಯಾಸ ಇರಬಹುದೇ? ರಾಷ್ಟ್ರ ರಾಜಕಾರಣದಲ್ಲಿ ಸಿಪಿಐ(ಎಂ)ನ ಪಾತ್ರವನ್ನು ಮೊಟಕುಗೊಳಿಸಬಹುದೆಂಬ ಮಹದಾಸೆ ಇರಬಹುದೆ?


ನಿಜ ಸ್ಥಿತಿ ಏನು?

ಚುನಾವಣಾ ಆಯೋಗದ ನಿಯಮಾವಳಿಗಳಲ್ಲಿರುವ ನ್ಯೂನತೆ ಮತ್ತು ಅಸಂಬದ್ಧತೆಯನ್ನು ಅದು ಎತ್ತಿ ತೋರುತ್ತದೆಯೇ ವಿನಃ ಸಿಪಿಐ(ಎಂ)ನ ನಿಜವಾದ ಘನತೆಯನ್ನು ಅದು ಕುಂದಿಸಲು ಸಾಧ್ಯವಿಲ್ಲ. ತಾತನ ಕಾಲದಲ್ಲಿ ರೂಪಿಸಿರುವ ಚುನಾವಣಾ ಚಿಹ್ನೆ (ಕಾದಿರಿಸುವ ಮತ್ತು ಹಂಚುವ) ಆದೇಶದಲ್ಲಿರುವ ಹಾಸ್ಯಾಸ್ಪದ ಅಂಶಗಳೇ ಈ ಅಸಂಬದ್ಧ ನಿರ್ಣಯಕ್ಕೆ ಕಾರಣವಾಗಿರುವುದು.

ಈ ನಿಯಮದ ಪ್ರಕಾರ ಲೋಕಸಭೆಯಲ್ಲಿ ಒಂದು ಸದಸ್ಯನಿಲ್ಲದ ಪಕ್ಷಕ್ಕೆ ರಾಷ್ಟ್ರೀಯಮಾನ್ಯತೆ ನೀಡಬಹುದು. ಈಗಿರುವ ನಿಯಮದ ಪ್ರಕಾರ/ ಮಾನದಂಡದ ಪ್ರಕಾರ ನಾಲ್ಕು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯಗಳಲ್ಲಿ ರಾಜ್ಯ ಪಕ್ಷವಾಗಿ ಮಾನ್ಯತೆ ಪಡೆಯುವ ಪಕ್ಷವನ್ನು ರಾಷ್ಟ್ರೀಯ ಪಕ್ಷವಾಗಿ ಮಾನ್ಯ ಮಾಡಲಾಗುತ್ತದೆ. ರಾಜ್ಯದಲ್ಲಿ ಮಾನ್ಯತೆ ಪಡೆಯಲು ಕ್ರಮಬದ್ಧವಾದ ಮತಗಳಲ್ಲಿ ಪ್ರತಿಶತ ಆರರಷ್ಟು ಮತಗಳನ್ನು ಪಡೆದಿರಬೇಕು ಅಥವಾ 25 ಸಂಸದರಲ್ಲಿ ಒಬ್ಬ ಸಂಸದನನ್ನು ಹೊಂದಿರಬೇಕು ಅಥವಾ ವಿಧಾನಸಭೆಯಲ್ಲಿ 30 ಕ್ಕೆ ಒಂದರ ಅನುಪಾತದಲ್ಲಿ ಶಾಸಕರನ್ನು ಹೊಂದಿರಬೇಕು.

ಈ ಮಾನದಂಡದ ಪ್ರಕಾರ ಉತ್ತರ ಪ್ರದೇಶ ಮತ್ತು ಬಿಹಾರದಿಂದ (ಒಟ್ಟು 139 ಸ್ಥಾನಗಳಲ್ಲಿ) 100 ಸ್ಥಾನಗಳನ್ನು ಒಂದು ಪಕ್ಷ ಗೆದ್ದರೆ ಅದು ರಾಷ್ಟ್ರೀಯ ಪಕ್ಷವಾಗಲು ಸಾಧ್ಯವಿಲ್ಲ, ಏಕೆಂದರೆ ಅದು ರಾಜ್ಯಮಟ್ಟದಲ್ಲಿ ನಾಲ್ಕು ರಾಜ್ಯಗಳಲ್ಲಿ ಮಾನ್ಯತೆ ಪಡೆದಿರುವುದಿಲ್ಲ. ಆದರೆ ಅದೇ ನಾಲ್ಕು ಸಣ್ಣ ರಾಜ್ಯಗಳಲ್ಲಿ ಒಂದೊಂದು ಸಂಸದನನ್ನು ಹೊಂದುವ ಪಕ್ಷ ರಾಷ್ಟ್ರೀಯ ಪಕ್ಷವಾಗಿ ಮಾನ್ಯತೆ ಪಡೆಯುತ್ತದೆ.

ಇನ್ನೂ ಮುಂದೆ ಹೋದರೆ ನಾಲ್ಕು ರಾಜ್ಯಗಳಲ್ಲಿ ಒಟ್ಟು ಏಳು ಶಾಸಕರನ್ನು ಹೊಂದಿದ ಪಕ್ಷಕ್ಕೆ ರಾಷ್ಟ್ರೀಯ ಮಾನ್ಯತೆ ಸಿಗಬಹುದು(ಪಾಂಡಿಚೆರಿಯಿಂದ ಒಂದು, ಮಣಿಪುರದಿಂದ ಎರಡು, ಮೇಘಾಲಯದಿಂದ ಎರಡು ಹಾಗೂ ಅರುಣಾಚಲ ಪ್ರದೇಶದಿಂದ ಎರಡು) ಆದರೆ ಅದೇ 25 ಸಂಸತ್ ಸದಸ್ಯರಿಗೊಬ್ಬರಂತೆ ಹೆಚ್ಚಿನ ಸದಸ್ಯರನ್ನು ಲೋಕಸಭೆಯಲ್ಲಿ ರಾಷ್ಟ್ರಮಟ್ಟದಲ್ಲಿ ಹೊಂದಿರುವ ಪಕ್ಷಕ್ಕೆ ರಾಷ್ಟ್ರೀಯ ಮಾನ್ಯತೆ ದೊರೆಯುವುದಿಲ್ಲ. ಇಂತಹ ಹಾಸ್ಯಾಸ್ಪದ ಅಂಶಗಳ ದೊಡ್ಡ ಸರಮಾಲೆಯೇ ಚುನಾವಣಾ ಆಯೋಗದ ನಿಯಮಗಳಲ್ಲಿ ತುಂಬಿದೆ.


ದೆಹಲಿಯ ಸಿಪಿಐ(ಎಂ)ನ ಕೇಂದ್ರ ಕಚೇರಿ

ಇದು ಬದಲಾಗಲೇಬೇಕು

ತನ್ನ ನಿಯಮಾವಳಿಗಳಲ್ಲಿ ತಪ್ಪಿದೆ ಮತ್ತು ನ್ಯೂನತೆ ಇದೆ ಎಂಬ ಅಂಶವನ್ನು ಚುನಾವಣಾ ಆಯೋಗ ಒಪ್ಪಿದರೂ, ಸಿಪಿಐ(ಎಂ) ತನ್ನ ಪತ್ರದಲ್ಲಿ ಇದು ಬದಲಾಗಬೇಕು ಎಂದು ಕೇಳಿದಾಗ ಅದನ್ನು ತತ್ವಶಃ ಒಪ್ಪುವ ಆಯೋಗ, ಕೊನೆಗೂ ರಾಷ್ಟ್ರೀಯ ಮಾನ್ಯತೆಯನ್ನು ರದ್ದು ಮಾಡುವ ಆದರ ಕ್ರಮ ನಿಜಕ್ಕೂ ದುರದೃಷ್ಟಕರ.

ನ್ಯೂನತೆಗಳ ಆಗರವಾಗಿರುವ ಈ ನಿಯಮಾವಳಿಗಳನ್ನು ಬದಲಾಯಿಸುವ ಅಧಿಕಾರವನ್ನು ಆಯೋಗವೇ ಹೊಂದಿದ್ದರೂ ತನ್ನ ಅಧಿಕಾರವನ್ನು ಚಲಾಯಿಸದೆ ಈ ನಿರ್ಣಯವನ್ನು ತೆಗೆದುಕೊಂಡಿದೆ.

ಪತ್ರಿಕೆಗಳ ಅಸಹ್ಯಕರ ಹೀನ ಪ್ರಚಾರ

ದೊಡ್ಡ ಬಂಡವಾಳಗಾರರ ಒಡೆತನದಲ್ಲಿರುವ ಕೆಲವು ಪತ್ರಿಕೆಗಳು ಮತ್ತು ಅದರ ರಾಜಕೀಯ ಪಂಡಿತರು(?) ಸಿಪಿಐ(ಎಂ)ಗೆ ದೊಡ್ಡ ಹೊಡೆತ ಬಿತ್ತು, ಅದರ ಪ್ರಭಾವ ಮತ್ತು ವರ್ಚಸ್ಸಿಗೆ ಅಗಾಧ ಪೆಟ್ಟು ಬಿತ್ತು ಎಂದೆಲ್ಲಾ ಗಳಹುತ್ತಾ ತಾವು ಅದುಮಿಟ್ಟಿದ್ದ ಸಂತೋಷವನ್ನು ಹೊರಗೆಡಹುತ್ತಿವೆ. ಇವಾವುದೂ ಸಿಪಿಐ(ಎಂ)ನ ಧೈರ್ಯ ಮತ್ತು ಸ್ಥೈರ್ಯವನ್ನು ಕುಂದಿಸಲು ಸಾಧ್ಯವಿಲ್ಲ. ತನ್ನ ರಾಷ್ಟ್ರೀಯ ರಾಜಕೀಯ ಪಾತ್ರವನ್ನು ನಿರ್ವಹಿಸುವ ಕಾರ್ಯವನ್ನು ಮುಂದುವರಿಸಿಯೇ ತೀರುತ್ತದೆ. ಬಂಡವಾಳಶಾಹಿ ಭೂಮಾಲಕ ಪರ ನೀತಿಗಳನ್ನು ವಿರೋಧಿಸಿಯೇ ವಿರೋಧಿಸುತ್ತದೆ. ಜನಪರವಾದ ನೀತಿಗಳನ್ನು ತನ್ನ ಸರ್ಕಾರಗಳ ಮೂಲಕ ಜಾರಿ ಮಾಡೇ ಮಾಡುತ್ತದೆ. ಜನರ ಹಕ್ಕುಗಳಿಗಾಗಿ ತನ್ನ ಹೋರಾಟವನ್ನು ಮುಂದುವರಿಸಿಯೇ ತೀರುತ್ತದೆ. ಈ ವಿಚಾರಗಳಲ್ಲಿ ಯಾವುದೇ ಅನುಮಾನ ಅವರಿಗೆ ಬೇಡ.

ಕಮ್ಯುನಿಸ್ಟರಿಗೆ ಅದು ಮುಖ್ಯವೇ ಅಲ್ಲ

ಆಯೋಗದ ನಿರ್ಧಾರ ಕೆಲವು ತಾಂತ್ರಿಕ ಕಷ್ಟಗಳನ್ನು ತಂದೊಡ್ಡಬಹುದಷ್ಟೆ. ರಾಜ್ಯಮಟ್ಟದಲ್ಲಿ ಮಾನ್ಯತೆ ಪಡೆದ ಮೂರು ರಾಜ್ಯಗಳ ಹೊರಗೆ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಚುನಾವಣಾ ಸಂದರ್ಭಗಳಲ್ಲಿ ಪ್ರಚಾರ ಮಾಡಲು ಸಮಯ ಸಿಗದೇ ಹೋಗಬಹುದು. ಆ ಎಲ್ಲಾ ರಾಜ್ಯಗಳಲ್ಲಿ ಮತದಾರರ ಪಟ್ಟಿಯನ್ನು ಉಚಿತವಾಗಿ ಪಡೆಯುವ ಸೌಲಭ್ಯ ಇಲ್ಲದೇ ಹೋಗಬಹುದು. ಜನರ ನಡುವೆ ನಿರಂತರ ಕೆಲಸ ಮಾಡುವ ಮತ್ತು ರಾಜಕೀಯ ಚುಟುವಟಿಕೆ ನಡೆಸುತ್ತಿರುವ ಕಮ್ಯುನಿಸ್ಟ್ ಪಕ್ಷಕ್ಕೆ ಅವೆಲ್ಲ ದೊಡ್ಡ ಸಮಸ್ಯೆಗಳೇ ಅಲ್ಲ.

ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಬೇಕು

ಆಯೋಗದ ಘನತೆ ಹೆಚ್ಚಾಗಬೇಕಾದರೆ ಮತ್ತು ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನೂ ಗಟ್ಟಿಯಾಗಬೇಕಾದರೆ ಚುನಾವಣಾ ಆಯೋಗವು ಆ ನಿಯಮಾವಳಿಗಳಿಗೆ ತಿದ್ದುಪಡಿ ತಂದು ನ್ಯೂನತೆಗಳನ್ನು ಸರಿಪಡಿಸಬೇಕು. ಇತ್ತೀಚಿನ ದಿನಗಳಲ್ಲಿ ಸಮತೋಲನ ಹಾಗೂ ಗಂಭೀರ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಚುನಾವಣಾ ಆಯೋಗವು ತಕ್ಷಣವೇ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು.

ಶುಲ್ಕ ಏರಿಕೆ - ನಿರುದ್ಯೋಗ ವಿರೋಧಿಸಿ ವಿದ್ಯಾರ್ಥಿ-ಯುವಜನರ
ಬೃಹತ್ ವಿಧಾನಸೌಧ ಚಲೋ

ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದ ಎಲ್ಲಾ ಹಂತದಲ್ಲಿ ಶೈಕ್ಷಣಿಕ ಶುಲ್ಕ ಏರಿಕೆ, ಉದ್ಯೋಗ ಕಡಿತ, ನೇಮಕಾತಿ ಮೇಲೆ ನಿರ್ಬಂಧ ಹೇರಿರುವ ನೀತಿಗಳನ್ನು ಖಂಡಿಸಿ, ಹಾಸ್ಟೆಲ್ ಹಾಗೂ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಗ್ರಾಮಾಂತರ ಕೃಪಾಂಕ ನೀಡಿಕೆಗೆ ಶೀಘ್ರ ಶಾಸನ ರೂಪಿಸಲು ನೊಂದಾಯಿತ ನಿರುದ್ಯೋಗಿ ಯುವಕರಿಗೆ ಮಾಸಿಕ ರೂ. 500 ನಿರುದ್ಯೋಗ ಭತ್ಯೆಗೆ ಆಗ್ರಹಿಸಿ, ಪಿಯುಸಿ ಉಪನ್ಯಾಸಕರ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಹಾಗೂ ವಿದ್ಯಾರ್ಥಿಗಳಿಗೆ ನೀಡುವ ರಿಯಾಯಿತಿ ಬಸ್ ಪಾಸ್ ದರ ಏರಿಕೆ, ವಿಶ್ವವಿದ್ಯಾಲಯಗಳಲ್ಲಿ ಪೇಮೆಂಟ್ ಕೋಟಾ ಸೀಟುಗಳ ಜಾರಿ ವಿರೋಧಿಸಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ವಿದ್ಯಾರ್ಥಿ- ಯುವಜನರು ಅಕ್ಟೋಬರ್ 4 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ನೇತೃತ್ವದಲ್ಲಿ ಬೃಹತ್ ವಿಧಾನಸೌಧ ಚಲೋ ಕಾರ್ಯಕ್ರಮ ನಡೆಸಿದರು.

ಡಾ।। ರಾಜ್ ಅಪಹರಣದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನಿಷೇಧಾಜ್ಞೆ ಹೇರಲಾಗಿದ್ದರೂ ಸಹ 'ವಿಧಾನಸೌಧ ಚಲೋ' ಕಾರ್ಯಕ್ರಮದ ಅಂಗವಾಗಿ ರಾಜ್ಯದ ವಿವಿಧ ಜಿಲ್ಲೆಗಳ ವಿದ್ಯಾರ್ಥಿ-ಯುವಜನರು ನಗರದ ಚಿಕ್ಕಲಾಲ್‌ಬಾಗ್ ಬಳಿ ಸೇರಿ, ಅಲ್ಲಿಂದ ಬೃಹತ್ ಮೆರವಣಿಗೆಯಲ್ಲಿ ತೆರಳಿ, ಬನಪ್ಪ ಪಾರ್ಕ್‌ನಲ್ಲಿ ಬಹಿರಂಗ ಸಭೆಯನ್ನು ನಡೆಸಿದರು. ಬಹಿರಂಗ ಸಭೆಯನ್ನುದ್ದೇಶಿಸಿ ಎಸ್‌ಎಫ್‌ಐ ಅಖಿಲ ಭಾರತ ಸಹಕಾರ್ಯದರ್ಶಿ ಕಾಂ. ಕೆ.ಕೆ.ರಾಘೇಶ್, ರಾಜ್ಯ ಅಧ್ಯಕ್ಷ ಕಾಂ. ಕೆ.ಎನ್.ಉಮೇಶ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ರಾಜ್ಯ ಉಪಾಧ್ಯಕ್ಷರಾದ ಎಸ್.ವೈ.ಗುರುಶಾಂತ್ ಮಾತಾಡಿದರು. ಸಭೆಗೆ ಶುಭಕೋರಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ.ಸೂರ್ಯನಾರಾಯಣ ರಾವ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಜಿ.ಸಿ.ಬಯ್ಯಾರೆಡ್ಡಿ, ಸಿಪಿಐ(ಎಂ)ನ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿದರು. ಶಾಂತರಾಮ ನಾಯಕ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಮಕೃಷ್ಣ ಆರ್. ಕಾರ್ಯಕ್ರಮ ನಿರ್ವಹಿಸಿದರು.

ಎಸ್‌ಎಫ್‌ಐ-ಡಿವೈಎಫ್‌ಐ ನಿಯೋಗ ಮುಖ್ಯಮಂತ್ರಿ ಭೇಟಿ

ಅಕ್ಟೋಬರ್ 4 ರ 'ವಿಧಾನಸೌಧ ಚಲೋ' ಕಾರ್ಯಕ್ರಮದ ಅಂಗವಾಗಿ 'ಶಿಕ್ಷಣ ಹಾಗೂ ಉದ್ಯೋಗದ ಪ್ರಶ್ನೆಗಳ ಕುರಿತು - ಶುಲ್ಕ ಏರಿಕೆ ಹಾಗೂ ನಿರುದ್ಯೋಗ ವಿರೋಧಿಸುವ' ಮನವಿಯನ್ನು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣ ರವರನ್ನು ಭೇಟಿ ಮಾಡಿದ ಎಸ್‌ಎಫ್‌ಐ- ಡಿವೈಎಫ್‌ಐ ನಿಯೋಗ ನೀಡಿತು. ನಿಯೋಗದಲ್ಲಿದ್ದ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಕೆ.ಎನ್.ಉಮೇಶ್, ಕಾರ್ಯದರ್ಶಿ ರಾಮಕೃಷ್ಣ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಹಾಗೂ ಉಪಾಧ್ಯಕ್ಷರಾದ ಎಸ್.ವೈ.ಗುರುಶಾಂತ್ ರವರೊಂದಿಗೆ ಚರ್ಚಿಸಿದ ಮುಖ್ಯ ಮಂತ್ರಿಗಳು 'ಗ್ರಾಮಾಂತರ ಕೃಪಾಂಕ' ನೀಡಿಕೆಗೆ ಮುಂಬರುವ ಅಧಿವೇಶನದಲ್ಲಿ ಮಸೂದೆ ಮಂಡಿಸುವುದಾಗಿ ಹಾಗೂ ಇತರೆ ಶಿಕ್ಷಣ-ಉದ್ಯೋಗ ಪ್ರಶ್ನೆಗಳ ಕುರಿತು ಚರ್ಚಿಸಲು ಮುಂಬರುವ ದಿನಗಳಲ್ಲಿ ಸಂಬಂಧಪಟ್ಟ ಸಚಿವರನ್ನು ಒಳಗೊಳ್ಳುವಂತೆ ವಿದ್ಯಾರ್ಥಿ-ಯುವಜನರ ಸಭೆ ಕರೆಯುವುದಾಗಿ ಭರವಸೆ ನೀಡಿದರು.


ಡಾ।। ರಾಜ್ ಬಿಡುಗಡೆಗೆ ಒತ್ತಾಯ - ನಿಷೇದಾಜ್ಞೆ ವಾಪಾಸ್ಸಿಗೆ ಆಗ್ರಹ:

ಬಹಿರಂಗ ಸಭೆಯಲ್ಲಿ ಡಾ।।ರಾಜ್ ಬಿಡುಗಡೆಗೆ ಕ್ರಮಕೈಗೊಳ್ಳಲು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು. ಅಂತೆಯೇ ಡಾ।।ರಾಜ್ ಅಪಹರಣದ ಹಿನ್ನೆಲೆಯಲ್ಲಿ ಅನಿರ್ದಿಷ್ಟವಾಗಿ ಬೆಂಗಳೂರು ನಗರದಲ್ಲಿ ವಿಧಿಸಲಾಗಿರುವ ನಿಷೇಧಾಜ್ಞೆಯು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಗೊಳಿಸುತ್ತಿದೆ, ಈ ನಿಷೇದಾಜ್ಞೆಯನ್ನು ಕೂಡಲೇ ವಾಪಸ್ಸು ಪಡೆಯಬೇಕೆಂದು ಸಭೆಯು ಆಗ್ರಹಿಸಿತು.





ವಿಧಾನಸೌಧ ಚಲೋ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ನೀಡಿದ ಮನವಿ ಮತ್ತು ನಿರುದ್ಯೋಗ ಕುರಿತ ಕಿರುಪುಸ್ತಕಗಳು



ರ್‍ಯಾಲಿಯ ನಂತರ ಬಹಿರಂಗ ಸಭೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು

ವರ್ಷ ಪೂರೈಸಿದ ಹರ್ಷದಲ್ಲಿ ಬೀಗುತ್ತಿರುವ

ಬಿಜೆಪಿ ಸರಕಾರಕ್ಕೆ ಕರ್ನಾಟಕದಲ್ಲಿ ಛೀಮಾರಿ

ಒಂದು ವರ್ಷ ಪೂರೈಸಿದ ಹರ್ಷದಲ್ಲಿ ಬೀಗುತ್ತಿದ್ದ ಅಟಲ್‌ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಮೈತ್ರಿಕೂಟ ಸರ್ಕಾರಕ್ಕೆ ಅಕ್ಟೋಬರ್ 16 ರಂದು ಕರ್ನಾಟಕದಾದ್ಯಂತ ರೈತರು, ಕಾರ್ಮಿಕರು, ವಿದ್ಯಾರ್ಥಿಯುವಜನರು, ಮಹಿಳೆಯರು ಚೆನ್ನಾಗಿ ಉಗುಳಿದ್ದಾರೆ. ಸಿಪಿಐ(ಎಂ) ಕರೆಯ ಮೇರೆಗೆ ಅಂದು ಕೇಂದ್ರ ಸರ್ಕಾರಿ ಕಛೇರಿಗಳನ್ನು ಮುತ್ತಿಗೆ ಹಾಕಲು ನಿರ್ಧರಿಸಲಾದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಒಂದೇ ಘೋಷಣೆ ಪ್ರತಿಧ್ವನಿಸುತ್ತಿತ್ತು - "ರೈತರ ಆತ್ಮಹತ್ಯೆಯನ್ನು ತಡೆಗಟ್ಟದ ಕೇಂದ್ರ ಸರ್ಕಾರ ತೊಲಗಲೇಬೇಕು, ನಿರುದ್ಯೋಗವನ್ನು ಹೆಚ್ಚಿಸುತ್ತಿರುವ ಎನ್.ಡಿ.ಎ. ಸರ್ಕಾರ ಹೋಗಲೇಬೇಕು, ಬಡವರ ಹೊಟ್ಟೆಯ ಮೇಲೆ ಹೊಡೆಯುತ್ತಿರುವ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ"

ದೇಶದ ಕೃಷಿ ಹಾಗೂ ಸಣ್ಣ ಕೈಗಾರಿಕಾ ವಲಯವನ್ನು ನಾಶಮಾಡಿ ಮತ್ತು ಆ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಉಲ್ಬಣಗೊಳಿಸುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಉದಾರೀಕೃತ ಆಮದು ನೀತಿಯ ವಿರುದ್ಧ ಮತ್ತು ಎಲ್ಲಾ ಅಗತ್ಯ ವಸ್ತುಗಳ ತೀವ್ರ ಬೆಲೆ ಏರಿಕೆಗೆ ಕಾರಣವಾದ ಸೀಮೆಎಣ್ಣೆ, ಡೀಸೆಲ್‌ಮೊದಲಾದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಕ್ರಮವನ್ನು ವಿರೋಧಿಸಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯದ ಉದ್ದಗಲಕ್ಕೂ ನಡೆದ ಪ್ರತಿಭಟನಾ ಪ್ರದರ್ಶನ ಹಾಗೂ ಪಿಕೆಟಿಂಗ್ ಚಳುವಳಿಯಲ್ಲಿ ಹತ್ತು ಸಾವಿರ ಕಾರ್ಯಕರ್ತರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 5000 ಕ್ಕೂಹೆಚ್ಚು ಕಾರ್ಮಿಕರು ಮತ್ತು ರೈತರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಮಂಗಳೂರು ಕೇಂದ್ರ ಅಂಚೆ ಕಚೇರಿಯ ಮುಂದೆ ನಡೆದ ಸಾಮೂಹಿಕ ಪಿಕೆಟಿಂಗ್‌ನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿ ಬಂಧನಕ್ಕೊಳಗಾದರು. ಇದಕ್ಕೂ ಮೊದಲು ಬೃಹತ್ ಸಂಖ್ಯೆಯಲ್ಲಿ ಮಹಿಳೆಯರೂ ಒಳಗೊಂಡಂತೆ ಕಾರ್ಯಕರ್ತರು ಪುರಭವನದ ಸಮೀಪದಿಂದ ಮೆರವಣಿಗೆಯಲ್ಲಿ ಸಾಗಿ ಅಂಚೆ ಕಚೇರಿಯ ಎದುರು ಪ್ರದರ್ಶನ ನಡೆಸಿದರು. ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಇನ್ನೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಬಿ.ಮಾಧವ, ರಾಜ್ಯ ಸಮಿತಿಯ ಸದಸ್ಯರಾದ ಸಿ.ನಂಜುಂಡಪ್ಪ ಮತ್ತು ರಾಮಚಂದ್ರ ಉಚ್ಚಿಲ್ ಚಳುವಳಿಗಾರರನ್ನು ಉದ್ದೇಶಿಸಿ ಮಾತನಾಡಿದರು. ಭಂಟ್ವಾಳ, ಬೆಳ್ತಂಗಡಿ ಮತ್ತು ಸುಳ್ಯ ತಾಲ್ಲೂಕು ಕೇಂದ್ರಗಳಲ್ಲಿಯೂ ಪ್ರತಿಭಟನೆ ನಡೆದಿದೆ. ಉಡುಪಿ ಮತ್ತು ಕುಂದಾಪುರದಲ್ಲಿ ನಡೆದ ಪಿಕೆಟಿಂಗ್ ಕಾರ್ಯಕ್ರಮದ ನೇತೃತ್ವವನ್ನು ಕೆ.ಶಂಕರ್, ಅಬ್ರಾಹಂ ಕರ್ಕಡ ಮೊದಲಾದವರು ವಹಿಸಿದ್ದರು. ಕುಂದಾಪುರದಲ್ಲಿ ಸುಮಾರು 2500 ಜನ ಬಂಧನಕ್ಕೊಳಗಾದರು.

ಕೋಲಾರದಲ್ಲಿ 3000 ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ಹಾಗೂ ರೈತರು ಟೆಲಿಕಾಂ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಇದಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಿಂದ ಪ್ರತಿಭಟನಾ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಮಾಜಿ ಶಾಸಕರು ಹಾಗೂ ಪಕ್ಷದ ಕೋಲಾರ ಜಿಲ್ಲಾ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಚಳುವಳಿಯ ನೇತೃತ್ವ ವಹಿಸಿದ್ದರು.

ಬೆಂಗಳೂರಿನಲ್ಲಿ ಪಕ್ಷದ ಜಿಲ್ಲಾ ಸಮಿತಿ ಆಶ್ರಯದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಯಿತು. ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆಯಲ್ಲಿ ಹೊರಟ ಪ್ರತಿಟನಾಕಾರರು ಬೆಂಗಳೂರು ವಿಶೇಷ ಜಿಲ್ಲಾಧಿಕಾರಿಯವರ ಕಛೇರಿ ಬಳಿ ಪಿಕೆಟಿಂಗ್ ನಡೆಸಿದರು. ಈ ಸಂದರ್ಭದಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪಕ್ಷದ ರಾಜ್ಯ ಸಮಿತಿ ಸದಸ್ಯ ಕೆ.ಪ್ರಕಾಶ್ ಅವರು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆಗಳ ಏರಿಕೆಯಾಗಿದೆ ಎಂಬ ನೆಪದಲ್ಲಿ ಅದರ ಹೊರೆಯನ್ನು ಜನಸಾಮಾನ್ಯರ ಮೇಲೆ ಹೇರುವ ಬದಲು ಅಬಕಾರಿ ಮತ್ತು ಕಸ್ಟಂಸ್ ಸುಂಕವನ್ನು ಕಡಿತಗೊಳಿಸುವ ಮೂಲಕ ಜನಸಾಮಾನ್ಯರಿಗೆ ರಕ್ಷಣೆ ಒದಗಿಸಬಹುದಿತ್ತು ಎಂದು ಹೇಳಿದರು. ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ.ನಾಯರ್, ರಾಜ್ಯಸಮಿತಿ ಸದಸ್ಯೆ ವರಲಕ್ಷ್ಮಿ ಅವರು ಸಹ ಸಭೆಯಲ್ಲಿ ಮಾತನಾಡಿದರು. ಅನಂತರ ಜಿಲ್ಲಾ ಕಾರ್ಯದರ್ಶಿ ಪಿ.ಜಗನ್ನಾಥ್ ಅವರ ನೇತೃತ್ವದ ನಿಯೋಗವು ರಾಜಭವನಕ್ಕೆ ತೆರಳಿ ರಾಜ್ಯಪಾಲರಿಗೆ ಮನವಿಯೊಂದನ್ನು ಸಲ್ಲಿಸಿತು.

ಬಳ್ಳಾರಿಯಲ್ಲಿ ಏರ್ಪಡಿಸಲಾಗಿದ್ದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ 1200 ಕ್ಕೂ ಹೆಚ್ಚು ಕಾರ್ಮಿಕರು, ರೈತರು ಮತ್ತು ಯುವಜನರು ಭಾಗವಹಿಸಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಎಸ್.ವೈ.ಗುರುಶಾಂತ್, ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಹಾಗೂ ರಾಜ್ಯ ಸಮಿತಿ ಸದಸ್ಯ ಯು.ಬಸವರಾಜು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಅಂಚೆ ಕಚೇರಿ ಹಾಗೂ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪಿಕೆಟಿಂಗ್ ನಡೆಸಲಾಯಿತು.

ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರ ಕಾರವಾರ ನಗರದಲ್ಲಿ ಪಕ್ಷದ ಧ್ವಜದಡಿಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಮಾತನಾಡಿದರು. ಅನಂತರ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪಿಕೆಟಿಂಗ್ ನಡೆಸಲಾಯಿತು. ರಾಜ್ಯ ಸಮಿತಿ ಸದಸ್ಯರಾದ ಶಾಂತರಾಮ ನಾಯಕ್ ಮತ್ತು ಟಿ.ಎಸ್.ನಾಯಕ್ ಚಳುವಳಿಯ ನೇತೃತ್ವ ವಹಿಸಿದ್ದರು. ಸುಮಾರು 500 ಜನ ಹೆಂಚಿನ ಕಾರ್ಖಾನೆಗಳ ಕಾರ್ಮಿಕರು, ರೈತರು ಹಾಗೂ ವಿದ್ಯಾರ್ಥಿ ಯುವಜನರು ಚಳುವಳಿಯಲ್ಲಿ ಭಾಗವಹಿಸಿದ್ದರು.

ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಸುಮಾರು 150 ಜನ ಕಾರ್ಯಕರ್ತರು ಅಂಚೆ ಕಛೇರಿ ಎದುರು ಪಿಕೆಟಿಂಗ್ ನಡೆಸಿ ಸುಮಾರು ಎರಡು ಗಂಟೆಗಳ ಕಾಲ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸಿದರು.

ಹುಬ್ಬಳ್ಳಿಯಲ್ಲಿ ಪಕ್ಷದ ಧಾರವಾಡ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಹೊರಡಿಸಲಾಗಿತ್ತು. ನಗರದ ಪ್ರಮುಖ ಬೀದಿಗಳಲ್ಲಿ ಸುಮಾರು 2 ಗಂಟೆಗಳ ಕಾಲ ಸಾಗಿದ ಮೆರವಣಿಗೆಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಅನಂತರ ಕೇಂದ್ರ ರೈಲ್ವೆ ನಿಲ್ದಾಣದ ಎದುರು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ನಿತ್ಯಾನಂದ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ರೈತ, ಕಾರ್ಮಿಕ, ನೌಕರ, ಕೂಲಿಕಾರ, ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳ ಮುಖಂಡರು ಮಾತನಾಡಿದರು. ಅನಂತರ ಮುಂಬೈ ಕಡೆ ಹೊರಟಿದ್ದ ಕುರ್ಲಾ ಎಕ್ಸ್‌ಪ್ರಸ್ ರೈಲನ್ನು ಸುಮಾರು ಒಂದು ಗಂಟೆ ಕಾಲ ತಡೆಹಿಡಿಯುವ ಮೂಲಕ

ನಿತ್ಯಾನಂದ ಸ್ವಾಮಿ

ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲಾಯಿತು. ಸುಮಾರು 500 ರಷ್ಟು ಸಂಖ್ಯೆಯಲ್ಲಿದ್ದ ಪ್ರತಿಭಟನಾಕಾರರನ್ನು ರೈಲ್ವೆ ಪೋಲೀಸರು ತಮ್ಮ ವಶಕ್ಕೆ ತೆಗೆದುಕೊಂಡು ಆನಂತರ ಬಿಡುಗಡೆ ಮಾಡಿದರು. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಸಿ.ಆರ್.ಭಟ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ತುಮಕೂರಿನಲ್ಲಿ ಅಂದು ನಗರದ ಪುರಭವನದಿಂದ ಹೊರಡಿಸಲಾಗಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಬೀಡಿ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನಾಕಾರರು ಸುಮಾರು ಒಂದು ಗಂಟೆ ಕಾಲ ಪ್ರಧಾನ ಅಂಚೆ ಕಛೇರಿಯನ್ನು ಮುತ್ತಿಗೆ ಹಾಕಿದರು. ಅನಂತರ ನಡೆದ ಸಭೆಯನ್ನು ಉದ್ದೇಶಿಸಿ ಪಕ್ಷದ ಹಿರಿಯ ಮುಖಂಡರಾದ ಮಹಮ್ಮದ್ ದಸ್ತಗೀರ್ ಅವರು ಮಾತನಾಡಿದರು. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಸೈಯದ್ ಮುಜೀಬ್ ಅವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಹಾಸನದಲ್ಲಿ ಸುಮಾರು 250 ಕ್ಕೂ ಹೆಚ್ಚು ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ಮತ್ತು ಜಿಲ್ಲಾದಿಕಾರಿ ಕಚೇರಿ ಎದುರು ಸುಮಾರು ಎರಡು ಗಂಟೆಗಳ ಕಾಲ ನಡೆಸಲಾದ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ರಾಜ್ಯ ಸಮಿತಿಯ ಸದಸ್ಯರಾದ ವಿ.ಸುಕುಮಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕೇಂದ್ರ ಸರ್ಕಾರಿ ಕಚೇರಿಗಳ ಪಿಕೆಟಿಂಗ್ ಚಳುವಳಿಯ ಭಾಗವಾಗಿ ಮೈಸೂರಿನಲ್ಲಿ ಅಂದು ನಡೆಸಲಾದ ರೈಲು ತಡೆ ಚಳುವಳಿಯಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ರಾಯಚೂರಿನಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಬಿ.ಲಿಂಗಪ್ಪ ಅವರ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಅಂಚೆ ಕಚೇರಿ ಎದುರು ಪಿಕೆಟಿಂಗ್ ನಡೆಸಿದರು. ಅದೇ ರೀತಿಯಲ್ಲಿ ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಸುಮಾರು 400 ಜನ ಕಾರ್ಯಕರ್ತರು ಅಂಚೆ ಕಛೇರಿ ಎದುರು ನಡೆಸಲಾದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ನಡೆಸಲಾದ ಪ್ರತಿಭಟನಾ ಮೆರವಣಿಗೆ ಹಾಗೂ ಅಂಚೆ ಕಚೇರಿ ಎದುರು ಪಿಕೆಟಿಂಗ್‌ನಲ್ಲಿ ಸುಮಾರು 250 ಜನ ಭಾಗವಹಿಸಿದ್ದರು. ಅನಂತರ 'ಜಿಲ್ಲಾಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಲಾಯಿತು.

ಬೀದರ್‌ನಲ್ಲಿ ಪ್ರತಿಭಟನೆಯ ಅಂಗವಾಗಿ ನಡೆಸಲಾದ ರೈಲು ತಡೆ ಚಳುವಳಿಯಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿರುವ ಬಗ್ಗೆ ವರದಿಯಾಗಿದೆ.



ಹುಬ್ಬಳ್ಳಿಯಲ್ಲಿ ರೈಲು ತಡೆ ನಡೆಸುತ್ತಿರುವ ಸಿಪಿಐ(ಎಂ) ಕಾರ್ಯಕರ್ತರು

ಕೇಂದ್ರ ಸರ್ಕಾರವು ಪೆಟ್ರೋಲಿಯಂ ವಸ್ತುಗಳ ಬೆಲೆಗಳನ್ನು ಏರಿಸಲು ನಿರ್ಧರಿಸಿದ ಮರುದಿನವೇ ಗುಲ್ಬರ್ಗದಲ್ಲಿ ಪಕ್ಷದ ಜಿಲ್ಲಾ ಸಮಿತಿಯು ರೈಲು ತಡೆ ಚಳುವಳಿ ನಡೆಸಿ ಪ್ರತಿಭಟಿಸಿತ್ತು. ರಾಜ್ಯ ಸಮಿತಿಯ ಕರೆಯ ಮೇರೆಗೆ ಮತ್ತೆ ಇಲ್ಲಿ ಅಕ್ಟೋಬರ್ 16 ರಂದು ಅಂಚೆ ಕಚೇರಿ ಎದುರು ಪಿಕೆಟಿಂಗ್ ನಡೆಸಲಾಯಿತು.

ಬೆಳಗಾಂವ ಜಿಲ್ಲೆಯ ರಾಮದುರ್ಗದಲ್ಲಿ ಅಕ್ಟೋಬರ್ 11 ರಂದೇ ಬೃಹತ್ ಪ್ರತಿಭಟನಾ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ನಡೆಸಲಾಗಿತ್ತು. ರಾಜ್ಯಸಮಿತಿ ಸದಸ್ಯ ವಿ.ಪಿ.ಕುಲಕರ್ಣಿ ನೇತೃತ್ವ ವಹಿಸಿದ್ದರು.

ಬಿಜಾಪುರದಲ್ಲಿ ಅಕ್ಟೋಬರ್ 14 ರಂದು ಪ್ರತಿಭಟನಾಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಪಕ್ಷದ ಕಛೇರಿಯಿಂದ ಹೊರಟ ನೂರಾರು ಮೆರವಣಿಗೆಕಾರರು ಅಂಚೆ ಕಚೇರಿ ಮುಂದೆ ಪಿಕೆಟಿಂಗ್ ನಡೆಸಿದರು. ಪಕ್ಷದ ಹಿರಿಯ ಮುಖಂಡರಾದ ಎನ್.ಕೆ.ಉಪಾಧ್ಯಾಯ ಮತ್ತು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಭೀಮಸಿ ಕಲಾದಗಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.


ಅಕ್ಟೋಬರ್ 16ರಂದು ರಾಜ್ಯದ್ಯಂತ ಬಾರಿಸಲಾದ ಈ ಎಚ್ಚರಿಕೆ ಗಂಟೆಗೆ ಅನಂತಕುಮಾರ್ ಮತ್ತು ಕಂಪನಿ ಕಿವಿಮುಚ್ಚಿಕೊಂಡಿರಬಹುದು. ಬೆಂಗಳೂರಿನಲ್ಲಿ ವಾಜಪೇಯಿ ನೇತೃತ್ವದ ಸರ್ಕಾರ ಒಂದು ವರ್ಷ ಪೂರ್ಣಗೊಳಿಸಿರುವ ಸಂದರ್ಭದಲ್ಲಿ ಏರ್ಪಡಿಸಿದ್ದ ಬಿ.ಜೆ.ಪಿ. ಸಮಾವೇಶದಲ್ಲಿ ಪಾಲ್ಗೊಂಡ ಕೇದ್ರ ಗ್ರಾಮೀಣಾಭಿವೃದ್ಧಿ ಮಂತ್ರಿ ವೆಂಕಯ್ಯ ನಾಯ್ಡು ಮಾತನಾಡುತ್ತಾ ಎನ್‌ಡಿಎ ಸರ್ಕಾರವು ತನ್ನ ಅವಧಿಯೊಳಗೆ ದೇಶಾದ್ಯಂತ ರೈತರಿಗೆ ಸಮಗ್ರ ಭೂದಾಖಲೆಗಳ ಹಕ್ಕಿನ ಪತ್ರ ನೀಡಲಿದೆ ಎಂದು ಹೇಳಿದ್ದಾರೆ. ಎನ್‌ಡಿಎ ಸರ್ಕಾರದ ಮುಕ್ತ ಆಮದು ನೀತಿಯು ತಡೆ ಇಲ್ಲದೆ ಮುಂದುವರೆದದ್ದೆ ಆದರೆ ನಮ್ಮ ದೇಶದ ರೈತರು ದಿವಾಳಿಯಾಗಿ ತಮ್ಮ ಭೂಮಿಯನ್ನೆಲ್ಲಾ ಕಳೆದುಕೊಂಡಾಗ ವೆಂಕಯ್ಯ ನಾಯ್ಡು ಅವರು ರೈತರಿಗೆ ಭೂದಾಖಲೆಗಳನ್ನು ಒದಗಿಸುವ ತೊಂದರೆಯೇ ಇರಲಾರದು! ಇವರು ತಮ್ಮ ಆಡಂಬರದ ಭಾಷಣಗಳಿಂದ ಯಾರನ್ನು ಮೋಸ ಮಾಡಲು ಹೊರಟಿದ್ದಾರೆ? ಅವರ ಆಮದು ನೀತಿಯಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿರುವ ಲಕ್ಷಾಂತರ ಸಣ್ಣ ಕೈಗಾರಿಕೆಗಳ ಮಾಲೀಕರು ಬಿ.ಜೆ.ಪಿ. ಸರ್ಕಾರದ ಧೋರಣೆಗಳ ವಿರುದ್ಧ ಧ್ವನಿ ಎತ್ತಲು ಸಜ್ಜಾಗುತ್ತಿದ್ದಾರೆ. ಉದ್ಯೋಗ ಕಳೆದುಕೊಂಡು ಬೀದಿಪಾಲಾಗುತ್ತಿರುವ ಲಕ್ಷಾಂತರ ಮಧ್ಯಮವರ್ಗದ ನೌಕರರು ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಯುದ್ಧಕ್ಕೆ ಸನ್ನದ್ಧರಾಗುತ್ತಿದ್ದಾರೆ. ರೈತರು ದಂಗೆ ಎದ್ದಿದ್ದಾರೆ.

'ಈಗ ಆಗಿದೆ ಆರಂಭ
ಬಂದೆ ಬರುವುದು ರಣಗಂಬ'

ಎನ್‌ಡಿಎ ಸರ್ಕಾರನ್ನು ಇನ್ನು ಯಾರಿಂದಲೂ ಉಳಿಸಲು ಸಾಧ್ಯವಿಲ್ಲ. ಮಮತಾ ಬ್ಯಾನರ್ಜಿಗೆ ಸಾಧ್ಯವಿಲ್ಲ, ಜಾರ್ಜ್ ಫರ್ನಾಂಡೀಸ್‌ಗೆ ಸಾಧ್ಯವಿಲ್ಲ. ಚಂದ್ರಬಾಬು ನಾಯ್ಡು ಅವರಿಗೆ ಸಾಧ್ಯವಿಲ್ಲ ಮಾತ್ರವಲ್ಲ ಅಮೆರಿಕನ್ ದೊರೆಗಳಿಗೂ ಸಾಧ್ಯವಿಲ್ಲ. ಎನ್‌ಡಿಎ ಸರ್ಕಾರಕ್ಕೆ ತನ್ನ ಜನ ವಿರೋಧಿ, ದೇಶದ್ರೋಹಿ ನೀತಿಗಳೇ ತಿರುಗುಬಾಣವಾಗಿ ಪರಿಣಮಿಸಿ ಅದು ಕುಸಿದು ಬೀಳದೆ ಇರಲಾರದು. ವಿದ್ಯಾರ್ಥಿ ಯುವಜನರ ಅಖಿಲ ಭಾರತ ಮಟ್ಟದ ಪ್ರದರ್ಶನ ಹಾಗೂ ರೈತ- ಕೃಷಿಕೂಲಿಕಾರರ ಸಂಸತ್ ಮುತ್ತಿಗೆಯಂತಹ ಜನಶಕ್ತಿ ಪ್ರದರ್ಶನಕ್ಕೆ ಯಾವ ನೈತಿಕ ಬಲವೂ ಇಲ್ಲದ ವಾಜಪೇಯಿ ಸರ್ಕಾರ ತತ್ತರಿಸಲಿದೆ.

ಕಾರ್ಯಕ್ರಮ ಕೇವಲ ಆಶಯ-ಬಯಕೆಗಳ ದಸ್ತಾವೇಜಲ್ಲ ಸಾಮಾಜಿಕ ಪರಿವರ್ತನೆಯ ಕ್ರಾಂತಿಕಾರಿ ಸಾಧನ

ಹರ್ಕಿಶನ್ ಸಿಂಗ್ ಸುರ್ಜಿತ್



ಸಿಪಿಐ(ಎಂ) ವಿಶೇಷ ಸಮ್ಮೇಳನ - ತಿರುವನಂತಪುರ

ಎಸ್.ವೈ.ಗುರುಶಾಂತ್
ತಿರುವನಂತಪುರ

'ಕಮ್ಯುನಿಸ್ಟ್ ಪಕ್ಷವೊಂದಕ್ಕೆ ಕಾರ್ಯಕ್ರಮವು ಒಂದು ಸಾಮಾನ್ಯ ದಸ್ತಾವೇಜಲ್ಲ. ಅದು ಕ್ರಾಂತಿಕಾರಿ ಪಥ. ಮೂಲಭೂತ ಸಾಮಾಜಿಕ ಪರಿವರ್ತನೆಯ ನಿರ್ದಿಷ್ಟ ಹಾದಿಯನ್ನು ಅದು ಗುರುತಿಸುತ್ತದೆ. ಆದರೆ ಕಾರ್ಯಕ್ರಮ ಕೇವಲ ಆಶಯ ಅಥವಾ ಬಯಕೆಗಳ ಹೇಳಿಕೆಯಂತೂ ಅಲ್ಲವೇ ಅಲ್ಲ" ಎಂದು ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ನುಡಿದರು. ಅವರು ಸಿಪಿಐ(ಎಂ)ನ ವಿಶೇಷ ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಿದ್ದರು. ಸಿಪಿಐ(ಎಂ) ನ ಸಮಕಾಲಿಕಗೊಳಿಸಲಾದ ಕಾರ್ಯಕ್ರಮದ ಕರಡನ್ನು ಚರ್ಚಿಸಿ ಅಂತಿಮ ಗೊಳಿಸಲು ಇದೇ ಅಕ್ಟೋಬರ್ 20 ರಿಂದ ತಿರುವನಂತಪುರದಲ್ಲಿ 4 ದಿನಗಳ ವಿಶೇಷ ಸಮ್ಮೇಳನ ಸೇರಿದೆ. ಅವರು ಮುಂದುವರೆದು

"ಭಾರತದ ಸಮಾಜವನ್ನು ಇಲ್ಲಿನ ವರ್ಗಗಳನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ, ಭಾರತೀಯ ಪ್ರಭುತ್ವದ ಗುಣಲಕ್ಷಣಗಳ್ನು ಗುರುತಿಸಿಕೊಂಡು ಜನತೆಯ ವಿಮೋಚನೆಗಾಗಿ,ಕ್ರಾಂತಿಕಾರಿ ಪರಿವರ್ತನೆಯ ಸಾಧನವಾಗಿ ಹೇಗೆ ಕಾರ್ಮಿಕವರ್ಗ ಮತ್ತು ಇತರ ಶೋಷಿತ ವರ್ಗಗಳ ಸಖ್ಯತೆ ಬೆಳೆಸಬೇಕೆಂಬುದನ್ನು ಅದು ಖಚಿಪಡಿಸುತ್ತದೆ. ಮಾರ್ಕ್ಸ್‌ವಾದ- ಲೆನಿನ್‌ವಾದವನ್ನು ಭಾರತೀಯ ಸಮಾಜಕ್ಕೆ ಅನ್ವಯಿಸುವ ಅಧ್ಯಯನವನ್ನು ಅದು ಆಧರಿಸಿದೆ" ಎಂದರು. 1964 ರಲ್ಲಿ ಸಿಪಿಐ(ಎಂ)ನ ಏಳನೇಯ ಮಹಾಧಿವೇಶನದಲ್ಲಿ ಪಕ್ಷದ ಕಾರ್ಯಕ್ರಮವನ್ನು ಅಂಗೀಕರಿಸಿದ್ದು ಅಲ್ಲಿಂದ ಇಲ್ಲಿಯವರೆಗೆ ಅನುಸರಿಸಿದ 'ತಂತ್ರ' ಇದರ ಆಧಾರದಲ್ಲೇ ಎಂದು ಹೇಳಿದ ಕಾಂ. ಸುರ್ಜಿತ್ ಪಕ್ಷದ ಕಾರ್ಯಕ್ರಮ ರೂಪಿಸುವಲ್ಲಿ ನಡೆದ ದೀರ್ಘ, ಸೈದ್ಧಾಂತಿಕ ಹೋರಾಟನ್ನು ಬಿಡಿಸಿಟ್ಟರು.

ಸಿಪಿಐ(ಎಂ) ಮಾರ್ಕ್ಸ್ ವಾದಿ- ಲೆನಿನ್‌ವಾದಿ ಪಕ್ಷವಾಗಿದೆ. ಸೋವಿಯತ್ ಯೂನಿಯನ್ ಮತ್ತಿತರೆ ಸಮಾಜವಾದಿ ದೇಶಗಳಲ್ಲಿ ಸಮಾಜವಾದಿ ಪದ್ಧತಿ ಕುಸಿದುಬಿದ್ದಾಗ ಪಕ್ಷವು ದಿಕ್ಕು ತಪ್ಪಲಿಲ್ಲ. ಇನ್ನೇನು ಎಲ್ಲವೂ ಮುಗಿದೇ ಹೋಯಿತು ಎಂದು ತಲೆಮೇಲೆ ಕೈಹೊತ್ತು ಕೂಡಲಿಲ್ಲ. ಆದರೆ ಸಮಾಜವಾದವನ್ನು ಕಟ್ಟುವಲ್ಲಿ ಸಂಭವಿಸಿದ ವಿಕೃತಿ ಹಾಗೂ ಉಲ್ಲಂಘನೆಗಳನ್ನು ಗುರುತಿಸಿ ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ತನ್ನ ಬದ್ಧತೆಯನ್ನು ಪುನರ್‌ಘೋಷಿಸಿತು ಎಂದು ನುಡಿದರು.

ಭಾರತದಲ್ಲಿನ ಕಮ್ಯುನಿಸ್ಟ್ ಚಳುವಳಿಯ ಸುವರ್ಣ ಅಧ್ಯಾಯಗಳನ್ನು ನೆನಪಿಸಿಕೊಂಡ ಸುರ್ಜಿತ್‌ರವರು ಅವುಗಳನ್ನು ಒಂದೊಂದಾಗಿ ತೆರೆದಿಟ್ಟರು. 1921 ರಲ್ಲಿ ಅಹ್ಮದಾಬಾದ್‌ನ ಎಐಸಿಸಿ ಅಧಿವೇಶನದಲ್ಲಿ ಮೊತ್ತಮೊದಲ ಬಾರಿಗೆ ಬ್ರಿಟಿಶರಿಂದ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ ಮೊಳಗಿಸಿದ್ದೇ ಕಮ್ಯುನಿಸ್ಟರು. ಸ್ವರಾಜ್ಯದ ಕಲ್ಪನೆಗೆ ಸಾಮಾಜಿಕ, ಆರ್ಥಿಕ ಆಯಾಮ ನೀಡಿದವರೇ ಕಮ್ಯುನಿಸ್ಟರು. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರು, ರೈತರು ಹಾಗೂ ಶೋಷಿತ ಜನಸಮೂಹವನ್ನು ತೊಡಗಿಸಿದ ಕಮ್ಯುನಿಸ್ಟರು, ವಿದ್ಯಾರ್ಥಿ-ಯುವಜನ, ಮಹಿಳೆ, ದಲಿತ, ಬುದ್ಧಿಜೀವಿ ಮುಂತಾದ ಜನಸಮೂಹಗಳನ್ನು ಚಳುವಳಿಗೆ ಇಳಿಸುವುದರಲ್ಲಿ ಕಮ್ಯುನಿಸ್ಟರ ಪಾತ್ರ ಪ್ರಧಾನವಾಗಿದೆ ಎಂದರು.

"ಸ್ವಾತಂತ್ರ್ಯ ಬಂದ ನಂತರ ಕಮ್ಯುನಿಸ್ಟರು ರಾಷ್ಟ್ರೀಯ ಬದುಕಿನಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದಿದ್ದಾರೆ. ಏನೆಲ್ಲಾ ಭೂಸುಧಾರಣೆ ಜಾರಿಗೆ ಬಂದಿದೆಯೋ ಅದು ಸಾಧ್ಯವಾದದ್ದು ಕಮ್ಯುನಿಸ್ಟ್ ಚಳುವಳಿಯ ನಿರಂತರ ಸಮರಧೀರ ಹೋರಾಟದಿಂದ. ಇಂದಿನ ವ್ಯವಸ್ಥೆಯಲ್ಲಿಯೂ ಭೂಹೀನರಿಗೆ ಹೆಚ್ಚುವರಿ ಭೂಮಿಯನ್ನು ಹಂಚಲು ಸಾಧ್ಯವಿದೆ ಎಂದು ತೋರಿಸಿದ್ದು, ಜಾರಿಗೊಳಿಸಿದ್ದು ಪ.ಬಂಗಾಳ, ಕೇರಳ, ತ್ರಿಪುರಾ ರಾಜ್ಯಗಳು. ಭಾಷಾವಾರು ಪ್ರಾಂತ್ಯಗಳ ರಚನೆಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಕಮ್ಯುನಿಸ್ಟರು. ಮೊದಲು ಜನರಿಗೆ ವಚನ ನೀಡಿ ಮರೆತವರು ಕಾಂಗ್ರೆಸ್ ನಾಯಕರು. ರಾಜ್ಯ ಕೇಂದ್ರ ಸಂಬಂಧಗಳ ಪುನರ್ರಚನೆ ಮತ್ತು ಒಕ್ಕೂಟದ ವ್ಯವಸ್ಥೆಯ ಬಲವರ್ಧನೆಗೆ ನಿರಂತರ ಹೋರಾಡುತ್ತಾ ಬಂದಿದ್ದು ಕಮ್ಯುನಿಸ್ಟ್ ಪಕ್ಷ. ಇಂದಿನ ಜಾಗತೀಕರಣ, ಉದಾರೀ ಕರಣದ ಆರ್ಥಿಕನೀತಿಗಳು, ಮತ್ತು ಕೋಮುವಾದ, ಛಿದ್ರಕಾರಿ ಶಕ್ತಿಗಳ ವಿರುದ್ಧ ರಾಜಿ ಇಲ್ಲದ ತ್ಯಾಗಮಯ ಹೋರಾಟ ನಡೆಸಿದವರು ಕಮ್ಯುನಿಸ್ಟರು ಎಂದು ಹೇಳಿದರು.

ಆದ್ದರಿಂದಲೇ ಸಿಪಿಐ(ಎಂ) ಹಾಗೂ ಎಡಪಕ್ಷಗಳ ಮೇಲೆ ದಾಳಿ ಆರಂಭಗೊಂಡಿದೆ. ಮುಖ್ಯವಾಗಿ ಪಕ್ಷ ಬಲವಾಗಿರುವ ಪ.ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ನೂರಾರು ಕಾರ್ಯಕರ್ತರು ಆಳುವ ವರ್ಗಗಳು ಮತ್ತು ಅವರ ಏಜೆಂಟರಿಂದ ಆಕ್ರಮಣ ಕ್ಕೊಳಗಾಗಿ ಪ್ರಾಣ ಕಳೆದು ಕೊಂಡಿದ್ದಾರೆ. ಜನತೆಯ ಬೆಂಬಲದಿಂದ ಇವರಿಗೆ ತಿರು ಗೇಟು ನೀಡುತ್ತಾ ಬರಲಾಗಿದೆ. ಸಾಮ್ರಾಜ್ಯಶಾಹಿಯೂ ಸಹ ದೇಶದೊಳಗೆ ಬಹುರಾಷ್ಟ್ರೀಯ ಹಣಕಾಸು ಬಂಡವಾಳ ನುಗ್ಗಿಸಲು ಹವಣಿಸುತ್ತಿದೆ. ತನಗೆ ಪ್ರತಿರೋಧ ವಿರದಂತೆ ನೋಡಿಕೊಳ್ಳಲು ಕುತಂತ್ರಗಳನ್ನು ರೂಪಿಸುತ್ತಿದೆ.

ಸಿಪಿಐ(ಎಂ) ನ್ನು ಒಂದು ರಾಷ್ಟ್ರೀಯ ಪಕ್ಷವೆಂಬ ಮಾನ್ಯತೆ ರದ್ದು ಪಡಿಸಿದ ಚುನಾವಣಾ ಆಯೋಗದ ಕ್ರಮವನ್ನು ಅನುಚಿತ, ಅಸಮರ್ಥನೀಯವೆಂದು ಅವರು ಟೀಕಿಸಿದರು. 1999 ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು 2 ಕೋಟಿಗೂ ಅಧಿಕ ಮತ ಗಳಿಸಿದೆ. ಚುನಾವಣೆಗೊಂಡ ಮತಗಳಲ್ಲಿ 5-6 ಶೇಕಡ ಮತ ಪಡೆದಿದೆ. ಪಾರ್ಲಿಮೆಂಟಿನಲ್ಲಿ ಮೂರನೆಯ ಅತಿ ದೊಡ್ಡ ಪಕ್ಷವಾಗಿದೆ. ಹೀಗಿದ್ದು ಪಕ್ಷಕ್ಕೆ ರಾಷ್ಟ್ರೀಯ ಪಕ್ಷವಲ್ಲವೆಂದು ನಿರ್ಧರಿಸಿರುವ

ಪುಟ 10 ಕ್ಕೆ



ಮೂರನೇ ಪರ್ಯಾಯ ಪ್ರಸ್ತುತ-ಜ್ಯೋತಿಬಸು

'ಈ ವಿಶೇಷ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಲು ನಮಗೆ ಸಂತೋಷವೆನಿಸಿದೆ' ಎಂದು ಮಾತನ್ನಾರಂಭಿಸಿದ ಹಿರಿಯ ನಾಯಕ ಜ್ಯೋತಿಬಸುರವರು ಈ ಐತಿಹಾಸಿಕ ಸಮ್ಮೇಳನ ನಡೆಯುತ್ತಿರುವ ಕೇರಳ ಅನೇಕ ಧೀಮಂತ ಹೋರಾಟಗಳ ನಾಡು. ಪುನ್ನಪ್ರವಯಲಾರ್ ಹೋರಾಟ, ಮತ್ತು ಉತ್ತರ ಮಲಬಾರ್ ಪ್ರಾಂತ್ಯದಲ್ಲಿ ಪಾಳೇಗಾರಿ ಶೋಷಣೆಯ ವಿರುದ್ಧ ರೈತರ ಹೋರಾಟದಂತಹ ಮಹೋನ್ನತ ಚಳುವಳಿಗಳು ದೇಶದ ಕಮ್ಯುನಿಸ್ಟ್ ಚಳುವಳಿಯ ಪುಟಗಳಲ್ಲಿ ಮಿನುಗುತ್ತಿವೆ" ಎಂದು ನೆನಪಿಸಿಕೊಂಡರು.

ಜಾಗತೀಕರಣ ಹಾಗೂ ಭಾರತದಲ್ಲಿನ ವಿಶಾಲ ಜನಸಮೂಹ ಅನುಭವಿಸುತ್ತಿರುವ ನೋವು-ನರಳಿಕೆಗಳನ್ನು ಅವಲೋಕಿಸಿದ ಕಾಂ. ಬಸುರವರು ದೇಶದೊಳಗಿನ ಸ್ಥಿತಿಗತಿಗಳತ್ತ ಹೊರಳಿದರು. ಈ ವ್ಯವಸ್ಥೆ ಸೃಷ್ಟಿಸುತ್ತಿರುವ ಅತೃಪ್ತಿ ಮತ್ತು ಅಸ್ಥಿರತೆಯ ದುರ್ಲಾಭವನ್ನು ಕೋಮುವಾದಿ ಮತ್ತು ಛಿದ್ರಕಾರಿ ಶಕ್ತಿಗಳು ಬಳಸುತಿವೆ. ಸಾಮ್ರಾಜ್ಯಶಾಹಿ ವಿರುದ್ಧದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮೂಡಿಬಂದ ಐಕ್ಯತೆಯ ತಳಹದಿಯನ್ನು ನಾಶಗೊಳಿಸಲು ಕೋಮುವಾದಿ-ಪ್ರತ್ಯೇಕತಾವಾದಿಗಳು ಹೊರಟಿವೆ. 'ಹಿಂದುತ್ವ' ತನ್ನ ಸಿದ್ಧಾಂತವೆಂದು ಪ್ರತಿಪಾದಿಸುತ್ತಿರುವ ಪಕ್ಷ ದೇಶದಲ್ಲಿ ಅಧಿಕಾರ ಹಿಡಿದಿದೆ. ಇದು ಹಿಂದೂ ಧರ್ಮಕ್ಕೆ ಬಗೆದ ಅವಮಾನ. ಹಿಂದು ಧಾರ್ಮಿಕ ಸಂತರು ಇನ್ನೊಂದು ಧರ್ಮವನ್ನು ದ್ವೇಷಿಸಲು ಬೋಧಿಸಲಿಲ್ಲ. ಆದರೆ ಈ ಹಿಂದುತ್ವವು ಆರ್.ಎಸ್.ಎಸ್.ನ ನಿರ್ದೇಶನದಲ್ಲಿ ಅಲ್ಪಸಂಖ್ಯಾತರ, ದಲಿತರ ವಿರೋಧಿಯಾಗಿದೆ. ಸಂವಿಧಾನ ಮತ್ತು ಪ್ರಭುತ್ವದೊಳಗೆ ತನ್ನ ಕಂಬಂಧ ಬಾಹುಗಳನ್ನು ಚಾಚುತ್ತಿದೆ. ಧರ್ಮನಿರಪೇಕ್ಷತೆ, ಸಂವಿಧಾನವನ್ನು ಬುಡಮೇಲು ಮಾಡಲು ಮುಂದಾಗುತ್ತಿದೆ. ಮುಸಲ್ಮಾನರು, ಕ್ರಿಶ್ಚಿಯನ್ನರು ಹಿಂದೂಕರಣ ಗೊಳ್ಳಬೇಕೆಂದು ಆರ್‌ಎಸ್‌ಎಸ್ ದಬಾಯಿಸುತ್ತಿದೆ. ಕೇಂದ್ರದ ಗೃಹಸಚಿವರೇ ಇಂತಹ ಆರ್‌ಎಸ್‌ಎಸ್‌ನ ಶಿಬಿರದಲ್ಲಿ ಭಾಗಿಯಾಗಿದ್ದಾರೆ. ಆದರೆ ಆರ್‌ಎಸ್‌ಎಸ್‌ನ ಸಿದ್ಧಾಂತವನ್ನು ಒಪ್ಪದ ಕೆಲವು ಪಕ್ಷಗಳು ಕೇಂದ್ರ ಸರ್ಕಾರದಲ್ಲಿ ಪಾಲುದಾರರಾಗಿದ್ದು ಅಧಿಕಾರ ದಾಹದಿಂದ ಸಂದರ್ಭಸಾಧಕವಾಗಿವೆ. ದೇಶದ ಹಿತಗಳನ್ನು - ಅದಕ್ಕೆ ಒದಗಿರುವ ಅಪಾಯಗಳನ್ನು ಕಡೆಗಣಿಸಿವೆ ಎಂದು ಟೀಕಿಸಿದರು. ಇಂದಿನ ಸಂದರ್ಭದಲ್ಲಿ ಮೂರನೇ ಪರ್ಯಾಯ ಪ್ರಸ್ತುತವಾಗಿದೆ. ಕಳೆದ ಮೂರು ವರುಷಗಳಲ್ಲಿ ಅಸ್ತವ್ಯಸ್ತವಾಗಿದ್ದ ಶಕ್ತಿಗಳು ಪುನರ್‌ಸಂಘಟಿತವಾಗುತ್ತಿವೆ ಎಂದು ಹೇಳಿದರು.

23 ವರ್ಷಗಳನ್ನು ಪೂರೈಸಿದ ಪ.ಬಂಗಾಳದ ಎಡರಂಗ ಸರ್ಕಾರದ ಸಾಧನೆಗಳನ್ನು ಪ್ರಸ್ತಾಪಿಸಿದ ಅವರು ರಾಜ್ಯದ ಜನತೆಯಲ್ಲಿ ಶಾಂತಿ, ಕೋಮು ಸೌಹಾರ್ದತೆ ಕಾಪಾಡಲಾಗಿದೆ. ರಾಜ್ಯದಲ್ಲಿದ್ದ ಜಾತ್ಯಾತೀತ ವಿರೋಧಿ ಕ್ರಮಗಳನ್ನು ತೊಲಗಿಸಲಾಗಿದೆ. ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿ ಎಡರಂಗದ ವಿರುದ್ಧ ಧಾಳಿ ಹೆಚ್ಚಾಗಿದೆ. ದೈಹಿಕ ಆಕ್ರಮಣ ನಡೆದಿವೆ. ಹಿಂಸೆ, ಕೋಮುವಾದದ ವಿಷ ಹರಡಿಸಲಾಗುತ್ತಿದೆ. ಅವರೇ ಇಂದು ಅಧ್ಯಕ್ಷೀಯ ಆಡಳಿತ ಹೇರಬೇಕು ಎಂದು ಹೇಳುತ್ತಿದ್ದಾರೆ. ಹೀಗೇನಾದರೂ ಮಾಡಿದರೆ ಪ.ಬಂಗಾಳದ ಜನತೆ ಎಡರಂಗದ ನೇತೃತ್ವದಲ್ಲಿ ತಕ್ಕ ಪಾಠ ಕಲಿಸುತ್ತದೆಎಂದು ಎಚ್ಚರಿಸಿದರು.

ಈ ಸಮ್ಮೇಳನದ ಕರಡು ಕಾರ್ಯಕ್ರಮದ ಬಗ್ಗೆ ಗಮನ ಸೆಳೆದ ಅವರು ಪಕ್ಷದೊಳಗೆ ಮೂರು ತಿಂಗಳ ಚರ್ಚೆ ನಂತರ ತಿದ್ದುಪಡಿಗಳೊಂದಿಗೆ ಇಲ್ಲಿ ಸೇರಿದ್ದೇವೆ. ಪಕ್ಷದೊಳಗಿನ ಆಂತರಿಕ ಪ್ರಜಾ ಪ್ರಭುತ್ವದ ಗಟ್ಟಿತನವನ್ನು ಇದು ಸಾಬೀತುಪಡಿಸಿದೆ. ಪ್ರತಿನಿಧಿಗಳು ತಿದ್ದುಪಡಿಗಳನ್ನು ಚರ್ಚಿಸಿ ಅಂತಿಮಗೊಳಿಸುವರು ಎಂದು ಹೇಳಿದರು.

ಕೇರಳದ ಮುಖ್ಯಮಂತ್ರಿ, ಪಿ.ಬಿ.ಸದಸ್ಯರಾದ ಇ.ಕೆ.ನಾಯನಾರ್ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಆರಂಭದಲ್ಲಿ ಕೆಂಪು ಪತಾಕೆಯನ್ನು ಹಿರಿಯ ಕಮ್ಯುನಿಸ್ಟ್ ನಾಯಕ ನಂಡೂರಿ ಪ್ರಸಾದ್ ರಾವ್(ಆಂದ್ರಪ್ರದೇಶ) ಅರಳಿಸುವುದರ ಮೂಲಕ ಕಲಾಪಗಳಿಗೆ ಚಾಲನೆ ನೀಡಿದರು. ಕಾಂ. ಜ್ಯೋತಿಬಸು, ವಳ್ಳಿ ಸ್ವರಾಜ್ಯಂ, ಆರ್.ಉಮಾಥ್, ಪಿ.ಮಹಮ್ಮದ್ ಕುಟ್ಟಿ ಮತ್ತು ಗಣೇಶ ಶಂಕರ ವಿದ್ಯಾರ್ಥಿ ಒಳಗೊಂಡ ಅಧ್ಯಕ್ಷೀಯ ಮಂಡಳಿ ಆಯ್ಕೆಯಾಯಿತು.

ಕಾಂ ಸುರ್ಜಿತ್ ಕಾರ್ಯಕ್ರಮವನ್ನು ಮಂಡಿಸಿದರು. ಪ್ರಕಾಶ್ ಕಾರಟ್ ಮಾತನಾಡಿ ತಿದ್ದುಪಡಿಗಳನ್ನು ಮಂಡಿಸಿದರು. ನಗರದಲ್ಲಿ ಹಲವಾರು ಸಾಂಸತಿಕ ಕಾರ್ಯಕ್ರಮಗಳು, ಕವಿಗೋಷ್ಠಿ, ಪುಸ್ತಕ ಪ್ರದರ್ಶನ, ವಿಚಾರಸಂಕಿರಣಗಳನ್ನು ಯೋಜಿಸಲಾಗಿದೆ. ತಿರುವನಂತಪುರ ಸರಳವಾಗಿ ಸಿಂಗಾರಗೊಂಡು ಸುಂದರವಾಗಿ ಕಂಗೊಳಿಸುತ್ತಿದೆ.

○

ಕೇರಳ ಪಂಚಾಯತ್ ಚುನಾವಣೆ - ಎಲ್‌ಡಿಎಫ್ ಸಾಧನೆ

ಬಾಲಕೃಷ್ಣ ಶೆಟ್ಟಿ

ಸೆಪ್ಟೆಂಬರ್ ಕೊನೆಯ ವಾರದಲ್ಲಿ ಕೇರಳದ ಸ್ಥಳೀಯ ಸಂಸ್ಥೆಗಳಿಗೆ ನಾಲ್ಕು ಹಂತದ ಚುನಾವಣೆ ನಡೆದಿದ್ದು ಸಿಪಿಐ(ಎಂ) ನೇತೃತ್ವದ ಎಡರಂಗ ಮುನ್ನಡೆ ಸಾಧಿಸಿದೆ. ಜಾತ್ಯಾತೀತ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಮತ್ತು ಕೋಮುವಾದಿ ಬಿಜೆಪಿ ರಾಜ್ಯಾದ್ಯಂತ ಅಪವಿತ್ರ ಮೈತ್ರಿ ಮಾಡಿಕೊಂಡರೂ ಅವರ ಆಸೆ ಫಲಿಸಲಿಲ್ಲ. ಬದಲಾಗಿ 13 ಜಿಲ್ಲಾ ಪಂಚಾಯತ್‌ಗಳ ಪೈಕಿ 9 ರಲ್ಲಿ ಎಡರಂಗ ಭರ್ಜರಿ ಜಯಗಳಿಸಿದೆ. ಗ್ರಾಮಪಂಚಾಯತ್‌ಗಳ ಪೈಕಿ 436 ರಲ್ಲಿ ಎಲ್‌ಡಿಎಫ್ ಜಯಗಳಿಸಿದ್ದರೆ 374 ರಲ್ಲಿ ಮಾತ್ರ ಯುಡಿಎಫ್ ಜಯಗಳಿಸಿದೆ. 4 ಕಾರ್ಪೊರೇಶನ್ ಪೈಕಿ 3ನ್ನು ಎಲ್‌ಡಿಎಫ್ ತನ್ನದಾಗಿಸಿಕೊಂಡರೆ ಯುಡಿಎಫ್ ಒಂದಕ್ಕೆ ಮಾತ್ರ ತೃಪ್ತಿ ಪಟ್ಟುಕೊಂಡಿತು. ಮುನಿಸಿಪಾಲಿಟಿಗಳಲ್ಲಿ ಮಾತ್ರ ಯುಡಿಎಫ್ ಮೆಜಾರಿಟಿ ಬಂದಿದ್ದು 23 ಎಲ್‌ಡಿಎಫ್ 19 ರಲ್ಲಿ ಜಯ ಸಾಧಿಸಿದೆ.

1995 ರ ಪಂಚಾಯತ್ ಚುನಾವಣೆಯಲ್ಲಿ 4 ಗ್ರಾಮಪಂಚಾಯತಿಗಳಲ್ಲಿ ಅಧಿಕಾರ ಹಿಡಿದಿದ್ದ ಬಿಜೆಪಿ ಈ ಬಾರಿ ಎರಡು ಗ್ರಾಮ ಪಂಚಾಯತ್‌ಗಳಿಗೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖವಾದ ಅಂಶ ಎಂದರೆ ಬಿಜೆಪಿ ಮತ್ತು ಕಾಂಗ್ರೆಸ್ ಆಡಳಿತ ನಡೆಸುತ್ತಿರುವ ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ಅಲ್ಲಿನ ಆಳುವ ಪಕ್ಷಗಳು ಸೋತಿವೆ. ಆದರೆ ಕೇರಳದ ಆಡಳಿತಾರೂಢ ಪಕ್ಷ ತನ್ನ ಜನಪರ ಕಾರ್ಯಕ್ರಮಗಳ ಮೂಲಕ ಹೆಚ್ಚಿನ ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಿದೆ.

ಜನರೂಪಿತ ಯೋಜನೆ(People Planning)ಗೆ ಸಿಕ್ಕ ಜಯ:


ಕಮ್ಯುನಿಸ್ಟ್ ರೂವಾರಿ ಕಾಂ. ಇ.ಎಂ.ಎಸ್. ಅವರ ಕನಸಿನ ಕೂಸಾದ ಜನ ರೂಪಿತ ಯೋಜನೆಯನ್ನು ಜಾರಿಗೆ ತಂದ ಎಲ್‌ಡಿಎಫ್ ಸರಕಾರ ಜನರ ಪ್ರೀತಿಗೆ ಪಾತ್ರ ವಾಗಿದೆ. ಈ ಯೋಜನೆಯ ಅಡಿಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 306,288 ಮನೆಗಳನ್ನು ಕಟ್ಟಲಾಗಿದ್ದರೆ 351,669 ಚದರ ಮೀಟರ್ ಕಟ್ಟಡ, 4,13,174 ಕಕ್ಕಸುಗಳು, 8,759 ಬಾವಿ, 17,188 ಕಿ.ಮಿ ರಸ್ತೆಗಳನ್ನು ಸ್ಥಾಪಿಸಲಾಗಿದೆ. 27,443 ಕೆರೆಗಳನ್ನು ದುರಸ್ತಿ ಮಾಡಲಾಗಿದೆ. ಅಂದರೆ ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಷ್ಠಾನಕ್ಕೆ ತಂದ ಕಾಮಗಾರಿಗಳಿಗಿಂತ 2-3 ಪಟ್ಟು ಜಾಸ್ತಿ ಕಾಮಗಾರಿಗಳನ್ನು ಜಾರಿಗೆ ತರಲಾಗಿದೆ. ರಾಜ್ಯದ ಒಟ್ಟು ವಾರ್ಷಿಕಯೋಜನೆಯ ಶೇ 35 ರಿಂದ ಶೇ 40 ಭಾಗ ಸ್ಥಳೀಯಮಟ್ಟದ ಜನರೂಪಿತ ಯೋಜನೆ ಮೂಲಕ ನಡೆಸಲಾಗುತ್ತಿದೆ.

ಸೂಚಕ -1 ಶೇಕಡಾವಾರು ಮತ

ಚುನಾವಣಾ ವರ್ಷ	ಎಲ್‌ಡಿಎಫ್	ಯುಡಿಎಫ್	ಬಿಜೆಪಿ	ಇತರರು
1988-ಪಂಚಾಯತ್	38.94	38.90	2.51	19.46
1991-ಅಸೆಂಬ್ಲಿ	46.17	48.17	4.79	-
1995-ಪಂಚಾಯತ್	44.70	42.85	6.11	6.34
1996-ಅಸೆಂಬ್ಲಿ	44.01	44.76	6.08	5.15
1998-ಲೋಕಸಭಾ	44.31	45.64	7.91	2.14
1999-ಲೋಕಸಭಾ	43.60	46.89	8.01	1.50
2000-ಪಂಚಾಯತ್	42.64	41.48	5.83	10.05

ಕಾಂಗ್ರೆಸ್ ಪಕ್ಷವು ಕೂಡಾ ಚುನಾವಣೆಯಲ್ಲಿ ಈ ಯೋಜನೆಯ ಪರವಾಗಿಯೇ ಪ್ರಚಾರ ನಡೆಸಿತು. ಆದರೆ ಈ ಯೋಜನೆಯ ಅನುಷ್ಠಾನದಲ್ಲಿ ಸಣ್ಣಪುಟ್ಟ ಲೋಪದೋಷಗಳನ್ನು ಎತ್ತಿ ಹಿಡಿದು ತನ್ನ ಬೆಂಬಲಿಗರು ಎಡರಂಗದ ಕಡೆ ವಾಲದಂತೆ ನೋಡಿಕೊಂಡಿತು.

ಬಿಜೆಪಿಗೆ ಹೀನಾಯ ಸೋಲು: ಕೇರಳದ ವಿಧಾನಸಭೆಯಲ್ಲಿ ಒಂದೇ ಒಂದು ಶಾಸಕನನ್ನು ಹೊಂದಿರದ ಬಿಜೆಪಿ ಪಂಚಾಯತು ಮತ್ತು ನಗರ ಸಭೆಗಳಲ್ಲಿ ಅಲ್ಲಲ್ಲಿ ಕೆಲವು ಸ್ಥಾನಗಳನ್ನು ಪಡೆದುಕೊಂಡಿತ್ತು. ಆದರೆ ಈ ಬಾರಿ ಅದು ಹೀನಾಯ ಸೋಲನ್ನು ಅನುಭವಿಸಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಶೇ 8 ಕ್ಕೂಹೆಚ್ಚು ಮತ ಪಡೆದ ಬಿಜೆಪಿ ಈ ಬಾರಿ ಶೇ 5.83ರಷ್ಟು ಮತ ಪಡೆದಿದೆ. ಕಟ್ಟಾ ಕಮ್ಯುನಿಸ್ಟ್ ವಿರೋಧಿ ಬಿಜೆಪಿ ತಾನು ಗೆಲ್ಲಲಾರದ ಸ್ಥಾನಗಳಲ್ಲಿ ತನ್ನ ಮತಗಳನ್ನು ಕಾಂಗ್ರೆಸ್ಸಿಗೆ ವರ್ಗಾಯಿಸಿದ್ದರೆ, ಕಾಂಗ್ರೆಸ್ ಕೂಡಾ ತಾನು ಗೆಲ್ಲಲಾರದ ಪ್ರದೇಶಗಳಲ್ಲಿ ಬಿಜೆಪಿಗೆ ವರ್ಗಾಯಿಸಿದೆ. ಈ ಲೇಖನದ ಜತೆಗಿರುವ ಪೋಸ್ಟರ್‌ನ ಪ್ರತಿಯೇ ಇದಕ್ಕೆ ಸಾಕ್ಷಿ.



ಕಾಂಗ್ರೆಸ್-ಬಿಜೆಪಿ ಮೈತ್ರಿಯ ಸಂಕೇತ

ಸೂಚಕ 1 ರಲ್ಲಿ ತೋರಿಸಿದಂತೆ 1999 ರ ಲೋಕಸಭಾ ಚುನಾವಣೆಗೆ ಹೋಲಿಸಿದಲ್ಲಿ ಪಂಚಾಯತ್ ಚುನಾವಣೆಯಲ್ಲಿ ಎಲ್.ಡಿ.ಎಫ್. ಗೆ ಬಂದ ಮತಗಳಲ್ಲಿ ಶೇ 0.96 ರಷ್ಟು ಕಡಿಮೆಯಾಗಿದ್ದರೂ ಯು.ಡಿ.ಎಫ್.ಗೆ ಶೇ 5.41 ರಷ್ಟು ಮತ್ತು ಬಿಜೆಪಿಗೆ ಸಾಧಾರಣ ಶೇ 3 ರಷ್ಟು ಮತ ಕಡಿಮೆಯಾಗಿದ್ದು ಪಕ್ಷೇತರ ಮತ್ತು ಬಂಡಾಯ ಅಭ್ಯರ್ಥಿಗಳಿಗೆ ಸಿಕ್ಕಿದ ಮತಗಳ ಸಂಖ್ಯೆ ಜಾಸ್ತಿ ಆಗಿದೆ.

ಸಿಪಿಐ(ಎಂ) ಪಾಲು ಹೆಚ್ಚಳ: ಶೇಕಡಾವಾರು ಸೀಟುಗಳ ಸಂಖ್ಯೆಯಲ್ಲಿ, ಎಲ್‌ಡಿಎಫ್‌ನ ಅಂಗ ಪಕ್ಷಗಳ ಪೈಕಿ ಸಿಪಿಐ(ಎಂ) ನ ಪಾಲು ಹೆಚ್ಚಾಗಿದೆ. ಸೂಚಕ 2 ರಲ್ಲಿ ತೋರಿಸಿದಂತೆ 1995 ರ ಪಂಚಾಯತ್ ಚುನಾವಣೆಗಳಲ್ಲಿ ಆಯ್ಕೆಯಾದ ಎಲ್‌ಡಿಎಫ್ ಪ್ರತಿನಿಧಿಗಳ ಪೈಕಿ ಸಿಪಿಐ(ಎಂ) 100 ರಲ್ಲಿ 64.59 ರಷ್ಟು ಗದ್ದಿದ್ದರೆ ಈ ಬಾರಿ 69.96 ರಷ್ಟು ಗದ್ದಿದೆ. ಸಿಪಿಐ(ಎಂ) ಕಡಿಮೆ ಸ್ಥಾನಗಳಿಗೆ ಸ್ಪರ್ಧಿಸಿದ್ದು ಇತರ ಮಿತ್ರಪಕ್ಷಗಳಿಗೆ ಹಾಗೂ ಪಕ್ಷೇತರ ಅಭ್ಯರ್ಥಿಗಳಿಗೆ ಹೆಚ್ಚಿನ ಸ್ಥಾನಗಳನ್ನು ಬಿಟ್ಟುಕೊಟ್ಟಿತ್ತು. (ಸೂಚಕ 2) ಆದರೂ ಕೂಡಾ ಎಲ್ ಡಿಎಫ್ ಗೆ ಸಿಕ್ಕಿದ ಸ್ಥಾನಗಳ ಪೈಕಿ 100 ರಲ್ಲಿ 69.90 ರಷ್ಟು ಸ್ಥಾನಗಳನ್ನು ಸಿಪಿಐ(ಎಂ) ಗಳಿಸಿದ್ದು ಇತರೆಲ್ಲ ಮಿತ್ರ ಪಕ್ಷಗಳಿಗಿಂತ ಮುನ್ನಡೆ ಸಾಧಿಸಿದೆ.

ಅಂದರೆ ಸಿಪಿಐ(ಎಂ) ಸ್ಪರ್ಧೆ ಮಾಡಿದ 100 ಸ್ಥಾನಗಳಲ್ಲಿ ಶೇ 62.12 ರಷ್ಟು ಗೆದ್ದರೆ ಇತರ ಮಿತ್ರ ಪಕ್ಷಗಳು ಅವುಗಳು ಸ್ಪರ್ಧೆ ಮಾಡಿದ 100 ಸ್ಥಾನಗಳ ಪೈಕಿ ಶೇ 40 ಕ್ಕಿಂತಲೂ ಕಡಿಮೆಸ್ಥಾನಪಡೆದಿವೆ (ಸೂಚಕ 2).

ಸೂಚಕ 2 - ಎಲ್‌ಡಿಎಫ್ ಮಿತ್ರಪಕ್ಷಗಳು ಸ್ಪರ್ಧಿಸಿದ ಮತ್ತು ಜಯಗಳಿಸಿದ ಸ್ಥಾನಗಳ ಶೇಕಡಾವಾರು ಸಂಖ್ಯೆ

ಪಕ್ಷ	1995 ರಲ್ಲಿ ಎಲ್‌ಡಿಎಫ್ ಜಯಗಳಿಸಿದ ಒಟ್ಟು ಸ್ಥಾನಗಳಲ್ಲಿ ಮಿತ್ರ ಪಕ್ಷಗಳು ಪಡೆದ ಶೇ. ಸ್ಥಾನ	2000 ದಲ್ಲಿ ಮಿತ್ರ ಪಕ್ಷಗಳಿಗೆ ಹಂಚಿದ ಶೇ. ಸ್ಥಾನ	ಎಲ್‌ಡಿಎಫ್‌ನ ಒಟ್ಟು ಸ್ಥಾನಗಳಲ್ಲಿ ಪ್ರತಿಯೊಂದು ಮಿತ್ರ ಪಕ್ಷಗಳು ಜಯಗಳಿಸಿದ ಶೇ ಸ್ಥಾನಗಳು-200	ಪ್ರತಿಯೊಂದು ಮಿತ್ರ ಪಕ್ಷಗಳು ತಾವು ಸ್ಪರ್ಧಿಸಿದ ಒಟ್ಟು ಕ್ಷೇತ್ರಗಳಲ್ಲಿ ಜಯಗಳಿಸಿದ ಶೇ. ಸ್ಥಾನಗಳು
ಸಿಪಿಐ(ಎಂ)	64.59	53.68	62.12	69.90
ಸಿಪಿಐ	11.74	14.57	40.23	11.77
ಕೇರಳ ಕಾಂಗ್ರೆಸ್	2.92	5.85	25.98	3.14
ಜನತಾದಳ(ಜಾ)	3.64	2.23	31.69	2.24
ಎನ್.ಸಿ.ಪಿ.	1.27	2.37	26.91	1.38
ಆರ್‌ಎಸ್‌ಪಿ	1.15	1.50	23.50	0.72
ಎಲ್‌ಡಿಎಫ್(ಸ್ವತಂತ್ರ)	13.31	18.81	26.14	10.85
ಎಲ್‌ಡಿಎಫ್(ಇತರೆ)	1.39	-	-	-

ತೃಪ್ತಿ ಪಟ್ಟುಕೊಂಡಿಲ್ಲ: ಯುಡಿಎಫ್‌ಗಿಂತ ಜಾಸ್ತಿ ಸ್ಥಾನಗಳನ್ನು ಪಡೆದು ಬಿಜೆಪಿಯನ್ನು ಹಿಂದಕ್ಕೆ ತಳ್ಳಲು ಸಾಧ್ಯವಾಗಿದ್ದರೂ ನಮ್ಮ ಜಯದಿಂದ ತೃಪ್ತಿಪಟ್ಟುಕೊಂಡಿಲ್ಲ ಎಂದು ಕೇರಳದ ಮುಖ್ಯಮಂತ್ರಿ ಕಾಂ. ಇ.ಕೆ.ನಾಯನಾರ್ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಪಿನರಾಯಿವಿಜಯನ್ ಹೇಳಿದ್ದಾರೆ. ಜನರೂಪಿತ ಯೋಜನೆ ಕೇರಳದ ರಾಜಕೀಯದಲ್ಲಿ ಕಾರ್ಯಸೂಚಿಯಾಗಿ ಮಾರ್ಪಟ್ಟಿದೆ. ಆದರೆ ಎಡರಂಗವು ಜಾರಿಗೊಳಿಸಿದ ಈ ಜನಪ್ರಿಯ ಯೋಜನೆಯ ಎಲ್ಲಾ ಫಲಾನುಭವಿಗಳು ನಮಗೆ ಮತ ಹಾಕಿಲ್ಲ. ನಾವು ಜನರ ಬಗ್ಗೆ ಎಷ್ಟೇ ದುಡಿದರೂ ಅವರೊಂದಿಗೆ ರಾಜಕೀಯ ಸಂವಾದ ನಡೆಸದಿದ್ದಲ್ಲಿ, ಅವರ ತಿಳುವಳಿಕೆ ಮಟ್ಟವನ್ನು ಹೆಚ್ಚಿಸದಿದ್ದಲ್ಲಿ ಅವು ಮತಗಳಾಗಿ ಪರಿವರ್ತನೆ ಹೊಂದುವುದಿಲ್ಲ. ಈ ನಿಟ್ಟಿನಲ್ಲಿ ಮುಂಬರುವ ಅಸೆಂಬ್ಲಿ ಚುನಾವಣೆಯನ್ನು ಎದುರಿಸಬೇಕಾಗಿದೆ ಎಂದು ಇಬ್ಬರೂ ಹಿರಿಯ ಮುಖಂಡರು ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದ್ದಾರೆ. ○

ಕರ್ನಾಟಕದಲ್ಲಿ ಕಳೆದ ವಾರ

ಪುಟ 3 ರಿಂದ

ಬೆಳಗಾವಿ ಜಿಲ್ಲೆಯ ಕಾಗವಾಡ ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆಯಲ್ಲಿ ಜನತಾದಳ(ಸಂಯುಕ್ತ)ದ ಅಭ್ಯರ್ಥಿ ಗೆದ್ದಿದ್ದಾರೆ. ಬಿಜೆಪಿ ಧೂಳಿಪಟವಾಗಿದೆ. ಈ ಚುನಾವಣೆಯಲ್ಲಿ ಜನತಾದಳ ಎಸ್. ಮತ್ತು ಸಂಯುಕ್ತ ಬಣಗಳು ಒಂದಾಗಿ ಕಾಂಗ್ರೆಸ್ ಬಿಜೆಪಿಯನ್ನು ಎದುರಿಸಿದ್ದವು.

ಕಾಂಗ್ರೆಸ್‌ಗೆ ಕೃಷ್ಣರವರ ಸರ್ಕಾರ ಅಧಿಕಾರಕ್ಕೆ ಬಂದ ನಂತರದ ಚುನಾವಣೆಯಲ್ಲಿ ಇದು ಮೊದಲ ಸೋಲು. ಕೆಲವೇ ತಿಂಗಳ ಹಿಂದೆ ತಾಲ್ಲೂಕು, ಜಿಲ್ಲಾ ಪಂಚಾಯತ್‌ಗಳಲ್ಲಿ ಕಾಂಗ್ರೆಸ್ ಭಾರಿ ಜಯಬೇರಿ ಹೊಡೆದಿತ್ತು, ಹಿಂದೆ ಇಲ್ಲಿ ಕಾಂಗ್ರೆಸ್ ಶಾಸಕರು ಗೆದ್ದಿದ್ದರು. ಸಹಜವಾಗಿ ಈ ಫಲಿತಾಂಶ ಜನತಾದಳದ ಉಭಯಬಣಗಳಲ್ಲಿ ಉತ್ಸಾಹ ಮೂಡಿಸಿದೆ, ವಿಲೀನದ ಪ್ರಕ್ರಿಯೆಯ ಮಾತು ಗಟ್ಟಿಯಾಗುತ್ತಿದೆ. ಆದರೆ ಈ ಫಲಿತಾಂಶವನ್ನು ಅವರು ಕೇವಲ ವ್ಯಕ್ತಿಗತವಾಗಿ ನೋಡಬೇಕಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾಗಿ ಪ್ರಬಲ ಸ್ಪರ್ಧೆ ನೀಡುವ ರಾಜಕೀಯ ಶಕ್ತಿಯನ್ನು ಜನತೆ ಬಯಸುತ್ತಿದ್ದಾರೆ. ಇಂತಹ ಪರ್ಯಾಯ ಆರ್ಥಿಕ-ಸಾಮಾಜಿಕ ನೀತಿಗಳ ರಾಜಕಾರಣವನ್ನು ನಿರೀಕ್ಷಿಸುತ್ತಿದ್ದಾರೆ. ಆದ್ದರಿಂದ ಎರಡೂ ಬಣಗಳು ಒಂದಾದರೆ ಸಾಕು ಎಂಬ ಭ್ರಮೆ ಬೇಕಿಲ್ಲ.

ಕುಡಿಯುವ ನೀರು: ಈಗ ವಿದೇಶಿ ಕಂಪನಿಗಳ ಕೈಯಲ್ಲಿ

ಬೆಂಗಳೂರ ನಗರದ ನಾಗರಿಕರಿಗೆ ಕುಡಿಯುವ ನೀರಿನ ಪೂರೈಕೆ ಹಾಗೂ ಒಳಚರಂಡಿ ವ್ಯವಸ್ಥೆಯ ನಿರ್ವಹಣೆಯನ್ನು ಕೃಷ್ಣರವರ ಸರ್ಕಾರವು ಫ್ರೆಂಚ್ ದೇಶದ ಖಾಸಗಿ ಸಂಸ್ಥೆಗಳಿಗೆ ವಹಿಸುವ ಒಪ್ಪಂದಕ್ಕೆ ಸಹಿ ಮಾಡಿದೆ. ಸೈಜ್ ತಿಯಾನ್ಸೆಸ್ ಡಿ ಆಸ್, ಬೋವಿಸ್, ವಿವೆಂಡಿ ವಾಟರ್ ಸಂಸ್ಥೆಗಳು 10 ಲಕ್ಷ ಜನಸಂಖ್ಯೆಗೆ 5 ವರ್ಷಗಳ ಕಾಲ ಈ ವಹಿವಾಟನ್ನು ನೋಡಿಕೊಳ್ಳಲಿವೆ ಎಂಬುದು ಪ್ರಾಥಮಿಕ ಒಪ್ಪಂದವಂತೆ. ನೀರಿನ ದರವನ್ನು ಸರ್ಕಾರ ನಿಗದಿ ಮಾಡಲಿದೆಯೆಂದು ಬೇರೆ ಹೇಳಿದ್ದಾರೆ. ಈ ವಿದೇಶಿ ಕಂಪನಿಗಳ ಮುಂದೆ ಈ ಸರ್ಕಾರಿ ಸ್ಥಿತಿ ಏನು ಎಂಬುದು ತಿಳಿದಿರುವಂತಹುದೇ.

ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸಲಾಗದ ಮಟ್ಟಕ್ಕೆ ನಮ್ಮ ಸರ್ಕಾರದ ಮಂಡಳಿಗಳು ತಲುಪಿವೆಯೋ? ಖಂಡಿತ ಇಲ್ಲ. ಈ ಒಪ್ಪಂದವು ವಿಶ್ವಸಂಸ್ಥೆ-ಐಎಂಎಫ್ ಗಳಂತಹ ಕುಖ್ಯಾತಿ ಸಂಸ್ಥೆಗಳ ನಿರ್ದೇಶನಗಳ ಜಾರಿ ಎಂಬುದು ಬೇರೆ ಹೇಳಬೇಕಿಲ್ಲ, ಕೃಷ್ಣರ ಸರ್ಕಾರ ಈ ಮೂಲಕ ಖಾಸಗಿ ಸಂಸ್ಥೆಗಳ ಕೈಗೆ ನಾಗರಿಕರ ಬದುಕನ್ನು ಒಪ್ಪಿಸಿದೆ. ಈ ಸಂಸ್ಥೆಗಳ ದರಗಳನ್ನು ನೀಡಲಾಗದವರು ನೀರಿಲ್ಲದೆ ಸಾಯಬೇಕಾದ ಸ್ಥಿತಿ ಬರಲಿದೆ. ಗಂಜಿಗೆ ಗತಿಯಿಲ್ಲದಿದ್ದರೂ ನೀರು ಕುಡಿದಾದರೂ ಕಾಲ ತಳ್ಳುವ ಅವಕಾಶವೂ ಬಡಜನರ ಪಾಲಿಗಿಲ್ಲ.

ಮುಖ್ಯಮಂತ್ರಿಗಳೂ ಮತ್ತು ಈ ವಿದೇಶಿ ಕಂಪನಿಗಳವರು ಎಷ್ಟೇ ಮುಚ್ಚಿಕೊಳ್ಳಲು ಹೆಣಗಿದರೂ ಇದು ಜಾಗತೀಕರಣದ ಫಲ. ಹೀಗೆ ನೀರಿನ ಸಂಪನ್ಮೂಲವನ್ನು ಖಾಸಗಿಯವರಿಗೆ ವಹಿಸಿದ್ದರಿಂದ ಉಂಟಾದ ಅಸಹನೀಯ ಪರಿಣಾಮಗಳಿಂದಾಗಿ ಜಗತ್ತಿನ ಹಲವಾರು ದೇಶಗಳಲ್ಲಿ ಇತ್ತೀಚಿಗೆ ಭಾರಿ ಪ್ರಮಾಣದಲ್ಲಿ ಜನರ ಚಳುವಳಿಗಳೇ ನಡೆದಿವೆ. ಉದಾಹರಣೆಗೆ ಬೊಲಿವಿಯಾ. ಬೊಲಿವಿಯಾ ದೇಶದಲ್ಲಿ ಬಾವಿ ಮತ್ತು ಕೊಳಗಳ ನೀರಿನ ಪರಂಪರಾನುಗತ ಹಕ್ಕನ್ನು ಕಾಯ್ದೆ ಮೂಲಕ ಸರ್ಕಾರ ಕಿತ್ತುಕೊಂಡಿತು. ಇದರ ವಿರುದ್ಧ ದೇಶದಾದ್ಯಂತ ವ್ಯಾಪಕ ಪ್ರತಿಭಟನೆ ಆರಂಭಗೊಂಡಿದ್ದು ನಾಲ್ಕಾರು ತಿಂಗಳಾದರೂ ಮುಂದುವರಿದಿದೆ. ಹಾಗೆಯೇ ಅದೇ ಸರ್ಕಾರ 1985 ರಿಂದಲೂ ಅನುಸರಿಸುತ್ತಿರುವ ನವ ಉದಾರೀಕರಣದ ನೀತಿಯಂತೆ ಕುಡಿಯುವ ನೀರನ್ನು ಒಳಗೊಂಡು ಎಲ್ಲಾ ಅಗತ್ಯ ಸೇವೆಗಳನ್ನು ಖಾಸಗೀಕರಿಸಿದೆ. ಬೊಲಿವಿಯಾದ ಮಹಾನಗರದಲ್ಲಿ ನೀರಿನ ಸರಬರಾಜನ್ನು ವಿದೇಶಿ ಬಹುರಾಷ್ಟ್ರೀಯ ಕಂಪನಿಗೆ ನೀಡಲು 40 ವರುಷಗಳ ಒಪ್ಪಂದವೂ ಏರ್ಪಟ್ಟಿದೆ. ಇದರ ಬೆನ್ನಲ್ಲೇ ಆ ಕಂಪನಿಯು ಒಂದು ಕುಟುಂಬ ಕನಿಷ್ಟ 20 ಡಾಲರ್ ಹಣವನ್ನು ಕುಡಿಯುವ ನೀರಿಗೆ ನೀಡಬೇಕೆಂದು ದರ ಏರಿಸಿ ನಿಗದಿ ಪಡಿಸಿದೆ. ಆ ದೇಶದಲ್ಲಿ ಜನರ ಕನಿಷ್ಟ ಕೂಲಿಯೇ ತಿಂಗಳಿಗೆ 100 ಡಾಲರ್. ಇಷ್ಟು ಕಡಿಮೆ ಆದಾಯ ಇರುವವರು ನೀರಿಗೆ ಅಷ್ಟು ಹಣ ತೆತ್ತು ಬದುಕುವುದಾದರೂ ಹೇಗೆ? ಇದನ್ನು ಪ್ರತಿಭಟಿಸಿದ್ದರಿಂದ ವಿದೇಶಿ ಬಂಡವಾಳ ಹೂಡಿಕೆದಾರರಿಗೆ ನೀಡಲಾದ ಗ್ಯಾರಂಟಿ ಹಕ್ಕು ರಕ್ಷಿಸಬೇಕೆಂದು ಹೇಳಿ ಸರ್ಕಾರವು ತುರ್ತು ಪರಿಸ್ಥಿತಿಯನ್ನೇ ಹೇರಿ ಜನರ ಮೇಲೆ ಕ್ರೂರವಾದ ದಬ್ಬಾಳಿಕೆ ನಡೆಸಲಾಗುತ್ತಿದೆ. ಇಂತಹ ಅನೇಕ ಹೋರಾಟಗಳ ಪರಿಣಾಮವಾಗಿ ಬೊಲಿವಿಯಾ ದೇಶದ 1/3 ಭಾಗ ಗೆರಿಲ್ಲಾ ಹೋರಾಟಗಾರರ ನಿಯಂತ್ರಣದಲ್ಲಿದೆ ಎಂಬುದನ್ನು ಗಮನಿಸಬೇಕು.

ಆ ದಿನಕ್ಕೆ ಮಾತ್ರವೇ ದುಡಿದು ತಿನ್ನುವ, ಹತ್ತಾರು ಲಕ್ಷ ಕುಟುಂಬಗಳ ಜೋಪಡಿ ಲೋಕ, ಮಧ್ಯಮ, ಕೆಳವರ್ಗದವರು ನೀರಿನ ಖಾಸಗೀಕರಣದಿಂದ ತತ್ತರಿಸುವುದಂತೂ ನಿಜ. ವಿದ್ಯುತ್, ನೀರು, ಚರಂಡಿ, ಶಿಕ್ಷಣ, ಆರೋಗ್ಯ.... ಹೀಗೆ ದಿನನಿತ್ಯವೂ ಎಲ್ಲವನ್ನು ಖಾಸಗೀಕರಿಸಿ ಸುಲಿಗೆಕಾರರ ಬಾಯಿಗೆ ನಾಗರಿಕರನ್ನು ದೂಡುವ ನೀತಿಗಳ ವಿರುದ್ಧ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಎಚ್ಚೆತ್ತು ಪ್ರತಿಭಟಿಸಬೇಕಿದೆ. ○

ಜಾಗತೀಕರಣದ ಪ್ರಭಾವ ಔಷಧಿ ಕ್ಷೇತ್ರಗಳ ಮೇಲೆ

ಜಾಗತೀಕರಣವೆಂದರೆ ಬೇರೆ ಬೇರೆ ದೇಶಗಳ ನಡುವಿನ ಆರ್ಥಿಕ ಅವಲಂಬನೆ ತೆಗೆದುಹಾಕಿ, ಇಡೀ ವಿಶ್ವವೇ ಒಂದು ಹಳ್ಳಿಯಾಗಿ ಪರಿವರ್ತನೆ ಆಗುವುದು. ಈ ಪ್ರಕ್ರಿಯೆಯಲ್ಲಿ ಆರ್ಥಿಕ ನೀತಿಯಲ್ಲಿರುವ ಎಲ್ಲ ಅಡೆತಡೆಗಳನ್ನು ಆಯಾ ದೇಶಗಳು ತೆಗೆದುಹಾಕಬೇಕಾಗುವುದು. ಈ ಪ್ರಕ್ರಿಯೆಯಲ್ಲಿ ಸ್ಪಷ್ಟವಾಗಿ ಶ್ರೀಮಂತ ದೇಶಗಳು ತಮ್ಮ ಆರ್ಥಿಕ ಪ್ರಬಲತೆಯಿಂದ ಇಡೀ ಸಂದರ್ಭವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವುದು. ಇನ್ನೊಂದೆಡೆ ಬಡರಾಷ್ಟ್ರಗಳು ಹಾಗೂ ಮುಂದುವರೆಯುತ್ತಿರುವ ರಾಷ್ಟ್ರಗಳು ಮೇಲ್ಕಂಡ ಎಲ್ಲಾ ರೀತಿಯ ಪ್ರಕ್ರಿಯೆಗಳು ಗೊತ್ತಿದ್ದರೂ ಕೂಡ ತಮ್ಮ ಆರ್ಥಿಕ ದೌರ್ಬಲ್ಯತೆಯಿಂದ ಸ್ವಾವಲಂಬನೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ದಿಶೆಯಲ್ಲಿ ಜಗತ್ತಿನ ಆರ್ಥಿಕ ಸಂಸ್ಥೆಗಳಾದ ವಿಶ್ವಬ್ಯಾಂಕ್,

ಕೋಷ್ಟಕ -1	
ಕಂಪನಿಗಳು	ವ್ಯಾಪಾರ-ವಹಿವಾಟು ಜನವರಿ-ಡಿಸೆಂಬರ್ 1998 (ಕೋಟಿ ರೂ.)
1. ಗ್ಲಾಸ್ಕೋ - ವೆಲ್‌ಕಮ್	811
2. ರ್‍ಯಾನಬ್ಯಾಕ್ಸಿ★	568
3. ಸಿಪ್ಲಾ ★	484
4. ಹೆಸ್ಟ-ಮಾರಿಯಾನ್ ರುಸೆಲ್	428
5. ವೊಕಾರ್ಡ-ಮೇರಿಂಡ್	373
6. ಲುಪಿನ್ ಲ್ಯಾಬ್ಸ್★	329
7. ನಿಕೋಲಸ್ ಪಿರಾಮಿಲ್	300
8. ಫೈಝರ್	287
9. ನಾಲ್	278
10. ಅಲೆಂಬಿಕ್	258

★ ಭಾರತೀಯ ಮೂಲ ಕಂಪನಿಗಳು

ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ಈಗ ವಿಶ್ವವ್ಯಾಪಾರ ಸಂಘಟನೆಗಳು ಶ್ರೀಮಂತ ರಾಷ್ಟ್ರಗಳ ಹಿತಾಸಕ್ತಿ ಕಾಪಾಡುವಲ್ಲಿ ಮುಂದಾಗಿವೆ. ವಿಶ್ವಬ್ಯಾಂಕ್ ಹಾಗೂ ಅಂತರ್ರಾಷ್ಟ್ರೀಯ ಈ ಪ್ರಕ್ರಿಯೆಯಿಂದಾಗಿ 1984 ರಿಂದ 1990 ರವರೆಗೆ ಬಡರಾಷ್ಟ್ರಗಳಿಂದ 178 ಬಿಲಿಯನ್ ಡಾಲರ್ ಹಣ ಶ್ರೀಮಂತ ರಾಷ್ಟ್ರಗಳ ಬ್ಯಾಂಕುಗಳಿಗೆ ವರ್ಗಾವಣೆಯಾಗಿದೆ. ಈ ರೀತಿಯಾಗಿ ವಿಶ್ವಬ್ಯಾಂಕ್, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ವಿಶ್ವವ್ಯಾಪಾರ ಸಂಸ್ಥೆ ಒಟ್ಟಾಗಿ ಜಗತ್ತಿನ ಆರ್ಥಿಕ ಸ್ಥಿತಿಗತಿಗಳನ್ನು ನಿಯಂತ್ರಿಸುತ್ತಿದೆ. ತೃತೀಯ ರಾಷ್ಟ್ರಗಳು ಈ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದ ಸ್ಥಿತಿಗೆ ಹಾಗೂ ಹೋರಾಟ ಮುಂದುವರೆಸಲು ಸಾಧ್ಯವಾಗದ ಸ್ಥಿತಿಗೆ ಬಂದಿವೆ.

ಈ ಜಾಗತೀಕರಣ ಪ್ರಕ್ರಿಯೆ ಜಗತ್ತಿನ ಔಷಧ ಕ್ಷೇತ್ರದಿಂದ ಕೂಡ ಏನು ಹೊರತಾಗಿಲ್ಲ. ಕಳೆದ ಒಂದೂವರೆ ದಶಕದಿಂದ ಔಷಧ ಸಂಶೋಧನಾಲಯ ಹಾಗೂ ತಯಾರಕರ ಸಂಘ (Phrma)ದ ಪರವಾಗಿ ಅಮೆರಿಕಾ ದೇಶ ಈಗ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಇಂಟಲೆಕ್ಚುಯಲ್ ಪ್ರಾಪರ್ಟಿ ನಿಯಮವನ್ನು (IPR)ಸಾರ್ವಜನಿಕ ಆರೋಗ್ಯ ಹಿತಾಸಕ್ತಿಗಳ ಸಲುವಾಗಿ ಎಂದು ನೆವಹೇಳಿ ಹೇರುತ್ತಿದೆ. 'ವಿಶ್ವದ ಮುಖಂಡ'(ಜೂನ್ 98) ಎಂಬ ಪತ್ರಿಕೆಯ ಸಂಪಾದಕೀಯದಲ್ಲಿ (ವಾಷಿಂಗ್‌ಟನ್‌ನಿಂದ ಹೊರಡುವ ಪತ್ರಿಕೆ) ಈ ವಿಷಯ ಪ್ರಕಟವಾಗಿದೆ.

ಭಾರತ ಕೂಡ ಹಣಕಾಸಿನ ಹೊಂದಾಣಿಕೆ ಕಾರ್ಯಕ್ರಮದಡಿಯಲ್ಲಿ ವಿಶ್ವಬ್ಯಾಂಕ್, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ವಿಶ್ವವ್ಯಾಪಾರ ಸಂಘಟನೆಯ ಪರವಾಗಿ ಭಾರತೀಯ ಔಷಧ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿದೆ. ಜನಸಾಮಾನ್ಯರಿಗೆ, ಔಷಧ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರ ಮೇಲೆ ಇದು ಭಾರೀ ಪರಿಣಾಮ ಬೀರಿದೆ. ಇದಕ್ಕೆ ಮೊದಲು ನಾವು ಔಷಧ ಕ್ಷೇತ್ರದ ಮೊದಲಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳೋಣ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಸಮಯದಲ್ಲಿ ಔಷಧ ಕ್ಷೇತ್ರ ಒಟ್ಟು 10ಕೋಟಿ ರೂ. ವಹಿವಾಟಿನದಾಗಿತ್ತು. ಅಂದು ಔಷಧ ಕ್ಷೇತ್ರ ಸಂಪೂರ್ಣ ವಾಗಿ ಬಹುರಾಷ್ಟ್ರೀಯ ಕಂಪನಿಗಳ ಒಡೆತನದಲ್ಲಿತ್ತು. ಆ

ವೀರಣ್ಣ. ಶ. ಹಳ್ಳಿ

ವೇಳೆಯಲ್ಲಿ 'ಪೇಟೆಂಟ್ ಹಾಗೂ ಡಿಸೈನ್ ಆಕ್ಟ್ 1911' ರ ನಿಯಮದ ಸಹಾಯದಿಂದ ಈ ಕಂಪನಿಗಳು ಔಷಧ ಕ್ಷೇತ್ರವನ್ನು ಕೊಳ್ಳೆಹೊಡೆದರು. ಆ ವೇಳೆಯಲ್ಲಿ ಈ ಬಹುರಾಷ್ಟ್ರೀಯ ಔಷಧ ಕಂಪನಿಗಳು ಕೇವಲ ತಮ್ಮ ಮೂಲದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದವು. ಅವರ ಯಾವುದೇ ರೀತಿಯ ಮೂಲ ಔಷಧ ಅಥವಾ ಔಷಧಿ ತಯಾರಿಸುವ ಘಟಕಗಳು ಇರಲಿಲ್ಲ. ಮೇಲಾಗಿ ಜೀವನಾವಶ್ಯಕ ಔಷಧಗಳ(Life saving drugs) ಅಥವಾ ಸಾಂಕ್ರಾಮಿಕ ರೋಗಗಳಿಗೆ ಬೇಕಾಗುವ ಔಷಧಗಳ ಉತ್ಪಾದನೆಗೆ ಈ ಕಂಪನಿಗಳು ತಯಾರಾಗಿರಲಿಲ್ಲ. ಕೇವಲ ಲಾಭ ತರುವ ಔಷಧಗಳ ಮಾರಾಟ

ಕೋಷ್ಟಕ -2		
ಔಷಧ(ಉಪಯೋಗ)	ಲಭ್ಯವಾದ ವರ್ಷ	
	ಹೊರದೇಶದಲ್ಲಿ	ಭಾರತದಲ್ಲಿ
1. ಐಬುಪ್ರೊಫಿನ್(ಬಾವು ನಿವಾರಕ)	1967	1973
2. ಸಾಲಬ್ಯುಟಮಾಲ(ಶ್ವಾಸಕೋಶ ವಿಸ್ತರಿಸುವಿಕೆ)	1973	1976
3. ಮೆಬೆಂಡಿರ್ಝುಲ್(ಜಂತುಹುಳು ನಿವಾರಕ)	1974	1976
4. ಸಿಮಿಟಿಡಿನ್(ಅಲ್ಸರ್)	1976	1981
5. ಲೋರಾಝಿಫಾಮ (ಮಾನಸಿಕ ರೋಗ)	1977	1978
6. ರ್‍ಯಾನಿಟಿಡಿನ್ (ಅಲ್ಸರ್)	1983	1985
7. ನಾರಫ್ಲಾಕ್ಸಾಸಿನ್(ಆಂಟಿ ಬ್ಯಾಕ್ಟೀರಿಯಲ್)	1984	1988
8. ಅಸೈಕ್ಲೋವಿರ್(ವೈರಸ್ ವಿರುದ್ಧ)	1985	1988
9. ಸಿಪ್ರೊಫ್ಲಾಕ್ಸಾಸಿನ್ (ಆಂಟಿ ಬ್ಯಾಕ್ಟೀರಿಯಲ್)	1985	1989
10. ಎಸ್ಟಿಮಿರ್ಝೂಲ್(ನಿದ್ರಾರಹಿತ ಅಲರ್ಜಿ ನಿವಾರಕ)	1986	1988

ಮಾಡುತ್ತಿದ್ದವು. ಆಗ ಭಾರತದಲ್ಲಿನ ಔಷಧಗಳ ಬೆಲೆ ಇಡೀ ವಿಶ್ವದಲ್ಲೇ ಅತ್ಯಂತ ದುಬಾರಿಯದ್ದಾಗಿತ್ತು. 1947-57 ರವರೆಗೆ ಲಭ್ಯವಿದ್ದ 1704 ಔಷಧಗಳ ಪೇಟೆಂಟ್ಸ್‌ನಲ್ಲಿ ಶೇ 99 ರಷ್ಟು ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿತ್ತು.

ಸಾರ್ವಜನಿಕ ಕ್ಷೇತ್ರಗಳ ಕೊಡುಗೆ: ವಿಶ್ವ ಆರೋಗ್ಯ ಸಂಸ್ಥೆ (WHO) ಹಾಗೂ ಯುನಿಸೆಫ್ (UNICEF) ನ ಸಹಾಯದಿಂದ 1954 ರಲ್ಲಿ ಹಿಂದೂಸ್ತಾನ್ ಆಂಟಿಬಯಾಟಿಕ್ಸ್ ಸ್ಥಾಪನೆ ಆಗಿ ಆಂಟಿಬಯಾಟಿಕ್‌ನ ತಯಾರಿಕೆ ಪ್ರಾರಂಭವಾಯಿತು. 1861ರಲ್ಲಿ ಸೋವಿಯತ್ ಯೂನಿಯನ್‌ನ ಸಹಾಯದಿಂದ ಐ. ಡಿ. ಪಿ. ...

ಸ್ಥಾಪನೆ ಆಯಿತು. ಕ್ಷಯರೋಗಕ್ಕೆ ಬೇಕಾದ ಸ್ಟ್ರೆಪ್ಟೋಮೈಸಿನ್‌ನ ತಯಾರಿಕೆ ಮತ್ತು ಮುಂತಾದ ಔಷಧಿಗಳಿಗೆ ಬೇಕಾದ ಮೂಲ ಔಷಧಗಳ ಉತ್ಪಾದನೆ ಪ್ರಾರಂಭ ವಾಯಿತು. ಮಾರುಕಟ್ಟೆ ಯಲ್ಲಿ ಔಷಧಗಳ ಬೆಲೆಯಲ್ಲಿ ಗಮನಾರ್ಹ ಇಳಿಕೆಯಾಯಿತು. ನಂತರ ಸರಣಿಯಾಗಿ ಸ್ಮಿತ್ ಸ್ಟೇನ್‌ಸ್ಟ್ರೀಟ್ ಫಾರ್ಮಾಸ್ಯುಟಿಕಲ್(SSPL) 1977 ರಲ್ಲಿ, ಬೆಂಗಾಲ ಇಮ್ಯುನಿಟಿ (BI) 1978, ಬೆಂಗಾಲ ಕೆಮಿಕಲ್ಸ್ ಮತ್ತು ಫಾರ್ಮಸ್ಯುಟಿಕಲ್ 1977 ರಲ್ಲಿ ಮುಂತಾದ ಸಾರ್ವಜನಿಕ ಕ್ಷೇತ್ರಗಳು ತಲೆ ಎತ್ತಿದವು. ಇವುಗಳು ತಯಾರಿಸಿದ ಮೂಲ ಔಷಧಗಳಿಂದಾಗಿ ದೇಶದಲ್ಲಿ ಅನೇಕ ಸಣ್ಣ ಹಾಗೂ ಮಧ್ಯಮ ಔಷಧ ತಯಾರಿಕಾ ಘಟಕಗಳು ಬೆಳೆದು ಬಂದು ಔಷಧ ಕ್ಷೇತ್ರದಲ್ಲಿ ಭಾರತ ಸ್ವಾವಲಂಬನೆ ಪಡೆಯಲು ಸಾಧ್ಯವಾಯಿತು. ಪ್ರಯೋಗಾಲಯಗಳು ಹಾಗೂ ಸಂಶೋಧನಾಲಯಗಳು (ICMR, CDRI, CSIR, ICAR ಮುಂತಾದವುಗಳು) ಬೆಳೆದು ಬಂದವು. ಈ ಬೆಳವಣಿಗೆಯಿಂದಾಗಿ ಬಹುರಾಷ್ಟ್ರೀಯ ಔಷಧ ಕಂಪನಿಗಳು ತಮ್ಮ ಔಷಧ ತಯಾರಿಕಾ ಘಟಕಗಳನ್ನು ಹಾಗೂ ಮೂಲ ಔಷಧ ತಯಾರಿಕೆಯನ್ನು ಪ್ರಾರಂಭ ಮಾಡಿದವು.



ಭಾರತೀಯ ಪೇಟೆಂಟ್ ಕಾನೂನು 1970; ಪೇಟೆಂಟ್ ಕಾನೂನು ಎಂದರೆ ಯಾರಾದರೂ ಹೊಸ ಅವಿಷ್ಕಾರ ಮಾಡಿದಲ್ಲಿ, ಒಂದು ವೇಳೆ ಅದಕ್ಕೆ ಪೇಟೆಂಟ್(ತಯಾರಿಸುವ ಹಾಗೂ ಮಾರಾಟ ಮಾಡುವ ಹಕ್ಕು)ನ್ನು ಪಡೆದಲ್ಲಿ ಅದನ್ನು ಬೇರೆಯವರಾರು ತಯಾರಿಸುವ ಹಾಗಿಲ್ಲ ಹಾಗೂ ಮಾರಾಟ ಮಾಡುವ ಹಾಗಿಲ್ಲ. ಇದು ಆ ಅವಿಷ್ಕಾರಕ್ಕೆ ಏಕಸ್ವಾಮ್ಯತ್ಯ ನೀಡಿದಂತಾಗುವುದು. ಇದರಲ್ಲಿ ಎರಡು ರೀತಿ ಪ್ರಾಡಕ್ಟ್ ಪೇಟೆಂಟ್(ವಸ್ತುವಿಗೆ ನೀಡುವ ಹಕ್ಕುಪತ್ರ)ಹಾಗೂ ಪ್ರೊಸೆಸ್ ಪೇಟೆಂಟ್(ತಯಾರಿಸುವ ವಿಧಾನಕ್ಕೆ ನೀಡುವ ಹಕ್ಕುಪತ್ರ) ಎಂಬುದಾಗಿದೆ.

ಭಾರತೀಯ ಪೇಟೆಂಟ್ ಕಾನೂನನ್ನು ಪಾರ್ಲಿಮೆಂಟಿನಲ್ಲಿ 1967 ರಲ್ಲಿ ಮಂಡಿಸಿದರೂ, ದೀರ್ಘಕಾಲದ ಚರ್ಚೆಯಿಂದ ಭಾರತೀಯ ಪೇಟೆಂಟ್ ಕಾನೂನು 1970, 1972 ರಲ್ಲಿ ಜಾರಿಯಲ್ಲಿ ಬಂದಿತು. ಈ ಕಾನೂನು ಪ್ರಕಾರ ಔಷಧ, ಕೃಷಿ ಉತ್ಪನ್ನ, ಕೃಷಿಗೆ ಬೇಕಾಗುವ ವಸ್ತು, ಸಾಮಗ್ರಿಗಳು, ಕೃಷಿ ವಿಧಾನ ಅಥವಾ ತೋಟಗಾರಿಕೆ ವಿಧಾನ, ತಿನ್ನುವ ಪದಾರ್ಥಗಳು(ಪಾನಿಯಗಳು ಹಾಗೂ ಪರಿಮಳ ವಸ್ತುಗಳು ಒಳಗೊಂಡು) ರಾಸಾಯನಿಕ ವಸ್ತುಗಳು, ಜೀವಾಣು ಶಾಸ್ತ್ರ ಹಾಗೂ ಅಣುಶಕ್ತಿಗಳ ಅವಿಷ್ಕಾರದ ಮೇಲೆ ಇರುವುದಿಲ್ಲ. ಇದು ಬೆಳೆಯುತ್ತಿರುವ ರಾಷ್ಟ್ರಗಳಿಗೆ ಬಹಳ ಸಹಾಯಕವಾಗುವುದು. ಭಾರತದಲ್ಲಿ ಕೇವಲ 5-7 ವರ್ಷಗಳವರೆಗೆ ತಯಾರಿಕಾ ವಿಧಾನಗಳ ಮೇಲೆ ಪೇಟೆಂಟ್ ವಿಧಿಸಬಹುದಾಗಿದೆ.

ಭಾರತೀಯ ಪೇಟೆಂಟ್ ಕಾನೂನು 1970 ಹಾಗೂ ಸಾರ್ವಜನಿಕ ಕ್ಷೇತ್ರಗಳ ಉಗಮದಿಂದ ಭಾರತದಲ್ಲಿ ಔಷಧ ಕ್ಷೇತ್ರದಲ್ಲಿ ಒಂದು ದೊಡ್ಡ ಕ್ರಾಂತಿಯಾಯಿತು. ಭಾರತೀಯ ವಿಜ್ಞಾನಿಗಳು 107 ಹೊಸ ಔಷಧಗಳ ತಯಾರಿಕಾ ವಿಧಾನಗಳನ್ನು ಅವಿಷ್ಕಾರ ಮಾಡಲು ಸಾಧ್ಯವಾಯಿತು. ಇಂದು ಸುಮಾರು 23 ಸಾವಿರ ಸಣ್ಣ, ಮಧ್ಯಮ ಹಾಗೂ ದೊಡ್ಡ ಔಷಧ ತಯಾರಿಕಾ ಕಂಪನಿಗಳೂ ಹುಟ್ಟಿಕೊಂಡು ಇಡೀ ಜಗತ್ತಿಗೆ ಅತಿ ಹೆಚ್ಚಿನ ಪೈಪೋಟಿಯನ್ನು ನೀಡುತ್ತಿವೆ. ಇದಲ್ಲದೇ ಇಂದು ಭಾರತೀಯ ಕಂಪನಿಗಳು 140 ಕ್ಕೂ ಹೆಚ್ಚು ದೇಶಗಳಿಗೆ ತಮ್ಮ ಔಷಧಗಳನ್ನು ರಫ್ತುಮಾಡುತ್ತಿವೆ. ಕೇವಲ ಔಷಧ ಉತ್ಪಾದನೆ ಮಾತ್ರವಲ್ಲದೇ ವಿಶ್ವದಲ್ಲಿನ 500 ಮೂಲಔಷಧ ಪೈಕಿ ಭಾರತ 350 ಮೂಲ ಔಷಧ ತಯಾರಿಕೆಯಲ್ಲಿ ಸ್ವಾವಲಂಬನೆಯನ್ನು ಪಡೆದಿದೆ. ಭಾರತದಲ್ಲಿ ಔಷಧ ಉತ್ಪಾದನೆಗೆ ಬೇಕಾಗುವ ಶೇ 70 ರಷ್ಟು ಔಷಧ ಮೂಲವಸ್ತುಗಳನ್ನು ಭಾರತೀಯ ಕಂಪನಿಗಳು ಪೂರೈಸುತ್ತಿವೆ. ಇಂದು ಭಾರತೀಯ ಔಷಧ ತಯಾರಿಕಾ ಕಂಪನಿಗಳು ಮೂಲಔಷಧ ವಸ್ತುಗಳ ತಯಾರಿಕೆಯಲ್ಲಿ ಮುಖಂಡತ್ವವನ್ನು ವಹಿಸಿವೆ. 1971 ರಲ್ಲಿ ಇದ್ದ ಮೂಲಔಷಧ ತಯಾರಿಕೆ 350 ಕೋಟಿ ರೂ. ನಿಂದ 1992-93 ರಲ್ಲಿ 6560 ಕೋಟಿ ರೂ. ಆಗಿ ಬೆಳೆಯಲು ಸಾಧ್ಯವಾಗಿದ್ದು ಕೇವಲ ಭಾರತೀಯ ಪೇಟೆಂಟ್ ಕಾನೂನು 1970 ರ ಪರಿಣಾಮ. ಇಂದುಭಾರತದ ಔಷಧ ಕ್ಷೇತ್ರ 16000 ಕೋಟಿ ರೂ. ಆಗಿ ಬೆಳೆದು ನಿಂತಿದೆ.

ಭಾರತೀಯ ಪೇಟೆಂಟ್ ಕಾನೂನು 1970 ರ ಪರಿಣಾಮವಾಗಿ ಹೊಸ ಔಷಧಗಳು ಹೊರದೇಶದಲ್ಲಿ ಅವಿಷ್ಕಾರವಾದ ಕೇವಲ 5-7 ವರ್ಷಗಳಲ್ಲಿ ಭಾರತದಲ್ಲಿ ಲಭ್ಯವಾಗಲು ಸಾಧ್ಯವಾಯಿತು. (ಕೋಷ್ಟಕ-2) ಇಷ್ಟಲ್ಲದೇ ಭಾರತದಲ್ಲಿ ತೀವ್ರ ಪೈಪೋಟಿಯಿಂದಾಗಿ ಆ ಹೊಸ ಔಷಧಗಳ ಬೆಲೆಯಲ್ಲಿ ಗಮನಾರ್ಹ ಇಳಿಕೆಗೆ ಕೂಡಾ ಸಾಧ್ಯವಾಯಿತು. (ಕೋಷ್ಟಕ3) ಇಂದು ಔಷಧಗಳ ಬೆಲೆಯನ್ನು ಇಡಿ ವಿಶ್ವಕ್ಕೆ ಹೋಲಿಸಿದಲ್ಲಿ ಭಾರತದಲ್ಲಿ ಅತಿ ಕಡಿಮೆ ಬೆಲೆಗೆ ದೊರೆಯುತ್ತದೆ

ಔಷಧಗಳ ಬೆಲೆ ನಿಯಂತ್ರಣ: ಅನ್ಯ ಬಳಕೆ ವಸ್ತುಗಳಂತೆ ಔಷಧಗಳನ್ನು ಮನಸ್ಸಿಗೆ ಬಂದಂತೆ ಆಯ್ದುಕೊಳ್ಳಲಾಗದು. ಔಷಧಗಳನ್ನು ಕೇವಲ ವೈದ್ಯರು ಬರೆದುಕೊಟ್ಟಾಗ ತೆಗೆದುಕೊಳ್ಳಬೇಕಾಗುವುದು. ಇಲ್ಲಿ ಬಳಕೆದಾರನ ಆಯ್ಕೆ ಇರುವುದಿಲ್ಲ.

1970 ರಲ್ಲಿ ಔಷಧಗಳ ಬೆಲೆ ನಿಯಂತ್ರಣ ಮಸೂದೆ (DPCO) ಅನುಷ್ಠಾನಕ್ಕೆ ಬಂದು ಜೀವನಾವಶ್ಯಕ ಹಾಗೂ ಅಗತ್ಯ ಔಷಧಗಳ

ಪುಟ 10 ಕ್ಕೆ

ಕೋಷ್ಟಕ-3		
ಔಷಧಗಳು	ಬೆಲೆ ಲಭ್ಯವಾದ ವರ್ಷ	ಇಂದು
1. ರ್‍ಯಾನಿಟಿಡಿನ್ 150ಮಿ.ಗ್ರಾ	3.00(ಒಂದು ಗುಳಿಗೆ)	0.70
2. ನಾರಫ್ಲಾಕ್ಸಾಸಿನ್ 400 ಮಿ.ಗ್ರಾ	9.00 (ಒಂದು ಗುಳಿಗೆ)	2.00
3. ಸಿಪ್ರೊಫ್ಲಾಕ್ಸಾಸಿನ್ 500 ಮಿ.ಗ್ರಾ.	25.00(ಒಂದು ಗುಳಿಗೆ)	8.00

ಕೋಷ್ಟಕ-4			
ಔಷಧಗಳು	ಬೆಲೆಗಳು ರೂ.		
	ಅಂತರ್ರಾಷ್ಟ್ರೀಯ		
	ಪಾಕಿಸ್ತಾನ	ಅಮೆರಿಕ	ಭಾರತದಲ್ಲಿ
1. ರ್‍ಯಾನಿಟಿಡಿನ್ 150 ಮಿ.ಗ್ರಾಂ(10)	65	545	7.20
2. [illegible]	[illegible]	[illegible]	[illegible]

ಜಾಗತೀಕರಣದ ಪ್ರಭಾವ ಔಷಧಿ ಕ್ಷೇತ್ರಗಳ ಮೇಲೆ

ಪುಟ 9 ರಿಂದ

ಬೆಲೆಯನ್ನು ನಿಯಂತ್ರಿಸಿತು.

1970 ರಲ್ಲಿ ಹೆಚ್ಚುಕಡಿಮೆ ಎಲ್ಲಾ ಔಷಧಗಳನ್ನು ಈ ನಿಯಮದಡಿಯಲ್ಲಿ ನಮೂದಿಸಲಾಗಿತ್ತು. ಔಷಧ ತಯಾರಕರ ಒತ್ತಡದಿಂದಾಗಿ 1987 ರಲ್ಲಿ 347 ರಿಂದ 163 ಕ್ಕೆ ಹಾಗೂ 1994 ರಲ್ಲಿ 73 ಕ್ಕೆ ಇಳಿಸಲಾಯಿತು. ಇಷ್ಟಾದರೂ ಕೂಡ ಔಷಧ ತಯಾರಕರು ಇದರಿಂದ ಸಂತೋಷಕರವಾಗಿಲ್ಲ. ಅವರು ಈ ನಿಯಮವನ್ನೇ ಅಳಿಸಿ ಹಾಕುವ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಹೀಗಾಗಿ ಔಷಧಗಳ ಬೆಲೆ ದಿನದಿಂದ ದಿನಕ್ಕೆ

ರೀತಿಯಾಗಿ ಹೊಸ ಔಷಧಗಳಲ್ಲಿ ಏಕಸ್ವಾಮ್ಯತೆಗೆ ಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಿದಂತಾಗುವುದು. ಅಲ್ಲದೇ ಈ ಹೊಸ ಔಷಧಗಳು ಕೇವಲ ಶ್ರೀಮಂತ ವರ್ಗಕ್ಕೆ ಮಾತ್ರ ಲಭ್ಯವಾಗುವುದು. 1977 ರ ನಂತರ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಿದ ಕೆಲವು ದುಬಾರಿ ಹೊಸ ಔಷಧಿಗಳ ಪಟ್ಟಿ (ಕೋಷ್ಟಕ-6).

ಜಗತ್ತಿನಾದ್ಯಂತ ಔಷಧ ಬೆಲೆ ಹೆಚ್ಚಳಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ. ಇದೇ

ಕೋಷ್ಟಕ -5


ಔಷಧಗಳು	ಗುಳಿಗೆಗಳು	ಬೆಲೆಗಳು 19995	1998	ಶೇ ಹೆಚ್ಚಳ
1. ಡಯಜಪಾಮ(ಮಾನಸಿಕ ರೋಗ)	10	3.13	9.50	204
2. ಅಂಡಿಸಿರಿನ್(ಆಂಟಿಬಯಾಟಿಕ್)	4	12.85	23.15	80
3. ಸಿಪ್‌ಲ್ಯಾಕ್ಸಿನ್(ಆಂಟಿಬಯಾಟಿಕ್)	10	45.07	113.15	151
4. ಇಥಾಂಬ್ಯಟಾಲ್(ಕ್ಷಯಾರೋಗ)	10	5.92	3.00	457
5. ರಿಫಾಂಪಿಸಿನ್ (ಕ್ಷಯರೋಗ)	10	24.00	64.00	167
6. ಪೈರಾಝಿನಮೈಡ್(ಕ್ಷಯರೋಗ)	10	17.00	46.95	176
7. ಆಂಟಾಸಿಡ್ ಲಿಕ್ವಡ್(ಗ್ಯಾಸ್ಟ್ರಿಕ್ಟ್)	200 ಮಿ.	13.00	23.00	77
8. ಆಕ್ಸಿಫೆಡ್ರಿನ್ (ಹೃದಯರೋಗ)	10	10.44	21.41	105
9. ಡಿಸ್ಕೋಪಿರಾಮಿಡ್ (ಹೃದಯರೋಗ)	10	16.50	50.46	206
10. ಡಿಪಿರಿಡಾಮೋಲ (ಹೃದಯರೋಗ)	10		2.004.73	137

ಮೇಲೆರುತ್ತಿದೆ. ಬೇರೆ ಬೇರೆ ಮುಂದುವರೆಯುತ್ತಿರುವ ದೇಶಗಳು ಔಷಧಗಳ ಬೆಲೆಯನ್ನು ತಾವಾಗಿಯೇ ನಿಯಂತ್ರಿಸುತ್ತಿವೆ. ಯುನೈಟೆಡ್ ಕಿಂಗ್‌ಡಮ್ ಸರಕಾರ ಔಷಧ ಕಂಪನಿಗಳ ಲಾಭವನ್ನು ಗೊತ್ತುಪಡಿಸುವುದು. ಔಷಧ ಕಂಪನಿಗಳು ಹೆಚ್ಚಿನ ಲಾಭಾಂಶವನ್ನು ಆರೋಗ್ಯ ಇಲಾಖೆಗೆ ಮರಳಿಸಬೇಕಾಗುವುದು.

ಜೀವನಾವಶ್ಯಕ ಔಷಧಗಳ ಬೆಲೆ ದಿನದಿಂದ ದಿನಕ್ಕೆ ಮೇಲೆರುತ್ತಿರುವುದು ಅಧ್ಯಯನದ ಮೂಲಕ ತಿಳಿದುಬಂದಿದೆ. ಜನರ ಅವಶ್ಯಕತೆ, ರೋಗಗಳ ವಿಧಾನ ಅಥವಾ ಜನರು ಕೊಂಡುಕೊಳ್ಳುವ ಶಕ್ತಿಗಳು ಔಷಧ ಬೆಲೆ ನಿಯಂತ್ರಣಕ್ಕೆ ಗಮನ ನೀಡದೆ, ಔಷಧ ತಯಾರಕರ ಲಾಭಕ್ಕೆ ಕೇಂದ್ರ ಸರಕಾರ ಮೌನವಹಿಸಿದೆ.

ಈ ಕೆಳಗಿನ ಅವಶ್ಯಕ ಔಷಧಗಳ ಬೆಲೆಗಳು, ಔಷಧ ಬೆಲೆ ನಿಯಂತ್ರಣ ಸಡಿಲಕ್ಕೆ ಮೊದಲು ಮತ್ತು ನಂತರದ ಸ್ಥಿತಿಗತಿಗಳು ಈ ರೀತಿಯಾಗಿದೆ(ಕೋಷ್ಟಕ 5).

ಈ ರೀತಿಯಾಗಿ ನೂರಾರು ಔಷಧಗಳ ಬೆಲೆ, ಔಷಧ ಬೆಲೆ ನಿಯಂತ್ರಣ ಮಸೂದೆಯು ಸಡಿಲಿಕೆಯಿಂದ, ದಿನದಿಂದ ದಿನಕ್ಕೆ ಮೇಲೆರುತ್ತಿವೆ. ಇನ್ನೊಂದೆಡೆ ವಿಶ್ವವ್ಯಾಪಾರ ಸಂಸ್ಥೆಯು ಒತ್ತಡದಿಂದಾಗಿ ಭಾರತೀಯ ಪೇಟೆಂಟ್ ಕಾನೂನು 1970 ರ ಬದಲಾವಣೆ ಮಾಡಲಾಗುತ್ತಿದೆ. ಕಳೆದ ವರ್ಷ 10 ಮಾರ್ಚ್ 99 ರಂದು ಪೇಟೆಂಟ್ಸ್(ಅಮೆಂಡ್‌ಮೆಂಟ್) ಬಿಲ್, 1998 ನ್ನು ಬಿಜೆಪಿ ಸರ್ಕಾರ ಕಾಂಗ್ರೆಸ್‌ನ ಜೊತೆಗೂಡಿ ಜಾರಿಯಲ್ಲಿ ತಂದಿದೆ. ಈ ಕಾನೂನು ಪ್ರಕಾರ ಅನನ್ಯ ಮಾರುಕಟ್ಟೆ ಹಕ್ಕುಗಳ(Exclusive marketing rights) ಹಾಗೂ ಮೈಲ್ ಬಾಕ್ಸ್ ನಿಬಂಧನೆಗಳನ್ನು ಜಾರಿಯಲ್ಲಿವೆ. ಅಪ್ರತ್ಯಕ್ಷವಾಗಿ ಪೇಟೆಂಟನ್ನು ಮುಖ್ಯವಾಗಿ ಬಹುರಾಷ್ಟ್ರೀಯ ಔಷಧ ಕಂಪನಿಗಳಿಗೆ ನೀಡಿದಂತಾಗುವುದು. ಇದು 5 ವರ್ಷಗಳವರೆಗೆ ಜಾರಿಯಲ್ಲಿರುವುದು. ಈ



ರೀತಿಯಾಗಿ ಮುಂದುವರೆಯುತ್ತಿದ್ದರೆ, ವಿಶ್ವ ಆರೋಗ್ಯ ಸಂಸ್ಥೆ (WHO)ಯು '2000 ಇಸವಿಯ ವೇಳೆಗೆ ಸರ್ವರಿಗೂ ಆರೋಗ್ಯ' ಕಾರ್ಯಕ್ರಮ ಕೇವಲ ಕನಸಾಗಿ ಉಳಿಯಲಿದೆ.

ಇಂದು ಜಗತ್ತಿನಲ್ಲಿ ವಿಜ್ಞಾನ ಯಾವ ರೀತಿಯಾಗಿ ಮುಂದುವರೆಯುತ್ತಿ ದೆಯೋ ಅದೇರೀತಿ ಹೆಚ್ಚು ಹೆಚ್ಚು ಹೊಸ ಔಷಧಗಳು ಮಾರುಕಟ್ಟೆಗೆ ಬರುತಿವೆ. ಪರಿಣಿತರು ತಿಳಿಸುವ ಅಭಿಪ್ರಾಯದಂತೆ ಈ ಹೊಸ ಔಷಧಗಳು ಈಗಿರುವ ಔಷಧಗಳಿಗಿಂತ ಹೆಚ್ಚೇನು ಪರಿಣಾಮಕಾರಿಯಾಗಿಲ್ಲ, 1981 ರಿಂದ 1988 ರವರೆಗೆ 25 ಅತಿದೊಡ್ಡ ಔಷಧ ಕಂಪನಿಗಳು ಮಾರುಕಟ್ಟೆಗೆ ತಂದ 348 ಹೊಸ ಔಷಧಗಳ ಪೈಕಿ ಕೇವಲ ಪ್ರತಿಶತ 3 ರಷ್ಟು ಅತ್ಯವಶ್ಯಕ ಸಾಮರ್ಥ್ಯವುಳ್ಳವವಾಗಿದ್ದು, ಪ್ರತಿಶತ 84 ರಷ್ಟು ಔಷಧಗಳು ಸ್ವಲ್ಪವೇ ಅಥವಾ ಯಾವುದೇ ಸಾಮರ್ಥ್ಯ ಹೊಂದದೆ ಇರುವ ಔಷಧಗಳಾಗಿವೆಯೆಂದು ಪರಿಣಿತರು ತಿಳಿಸುತ್ತಾರೆ. ಆದ್ದರಿಂದ ಈ ಹೊಸ ಔಷಧಗಳ ಪರಿಷ್ಕರಣೆಯನ್ನು ಕೇಂದ್ರ ಸರಕಾರ ಅತಿ ಎಚ್ಚರಿಕೆಯಿಂದ ನಿಗಾವಹಿಸಬೇಕಾಗಿದೆ.

ಈ ಕೆಳಕಂಡ ಮಹತ್ತರ ಬದಲಾವಣೆಗಳು ಔಷಧ ಕ್ಷೇತ್ರದಲ್ಲಿ ನಡೆದಿದೆ.

◆ ಸಾರ್ವಜನಿಕ ಕ್ಷೇತ್ರವಾದ (IDPL) ಐಡಿಪಿಎಲ್ 1990 ರವರೆಗೆ ಮೊದಲ 20 ಔಷಧ ಕಂಪನಿಗಳಲ್ಲಿ ಒಂದಾಗಿತ್ತು. 1980 ರಲ್ಲಿ 74 ಕೋಟಿ ರೂ. ಇದ್ದ ಔಷಧ ವ್ಯಾಪಾರ 1994 ರಲ್ಲಿ 210 ಕೋಟಿಯಾಗಿತ್ತು. 1992 ರಲ್ಲಿ ಬಿಐಎಫ್‌ಆರ್‌ಗೆತೂರಿಸಿ ನಷ್ಟ ಹೊಂದುವ ಕೈಗಾರಿಕೆಯೆಂದು ಸಾರಿ, ಸಂಪೂರ್ಣವಾಗಿ ಮುಚ್ಚುವ ಪ್ರಯತ್ನ ನಡೆದಿದೆ.

◆ ಸಾರ್ವಜನಿಕ ಕ್ಷೇತ್ರಗಳು ಲಾಭ ಅಥವಾ

ಕೋಷ್ಟಕ - 6

ಔಷಧ	ಕಂಪನಿ	ಬಲ	ಪ್ಯಾಕ್	ಬೆಲೆ
1. ಸ್ಪೊರನಾಕ್ಸ್(ಚರ್ಮ)	ಎತಸೋರ	100 ಮಿ.ಗ್ರಾಂ.	4 ಗುಳಿಗೆ	173.00
2. ಸ್ಪಾರಲೆಕ್ಸಿ (ಆಂಟಿಬಯಾಟಿಕ್)	ಸನ್‌ಫಾರ್ಮಾ	200 ಮಿ.ಗ್ರಾಂ.	6ಗುಳಿಗೆ	154.00
3. ರಿಸ್ಪಿಡ್ (ಮಾನಸಿಕ)	ಪ್ಯಾನಾಸಿಯಾ	50 ಮಿ.ಗ್ರಾಂ.	1 ಇಂಜೆ.	141.00
4. ರಿವಿಲ್ (ರಕ್ತನಾಳ)	ಇನ್‌ಫಾರ್ಮ	-	28 ಗುಳಿಗೆ	1225.00
5. ಪೈಪ್ರಾಸಿಲ್(ಆಂಟಿಬಯಾ.)	ಸೈನಾಮಿಡ್	2 ಗ್ರಾಂ	ಇಂಜೆಕ್ಷನ್	215.78
6. ರಾಕ್ಸಿಸಾರಾ (ಆಂಟಿ ಬಯ.)	ಸಾರಾಭಾಯಿ	300 ಮಿ.ಗ್ರಾಂ.	6 ಗುಳಿಗೆ	165.00
7. ಸಿಲೆಕ್ (ಆಂಟಿ ಬಯಾ)	ಗ್ಲಾಕ್ಸೋ	250 ಮಿ.ಗ್ರಾಂ	4 ಗುಳಿಗೆ	140.00

ಹಾನಿಯಲ್ಲಿ ಇರಲಿ, ಎಲ್ಲವನ್ನು ಖಾಸಗೀಕರಣ ಮಾಡಲು ಕೇಂದ್ರ ಸರಕಾರ ನಿರ್ಧರಿಸಿದೆಯೆಂದು ಕೇಂದ್ರ ಕಾರ್ಯದರ್ಶಿ ಮಂಡಳಿ ಆಶಿಸಿದೆ.

◆ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ಪ್ರಕ್ರಿಯೆಯಿಂದ ಅನೇಕ ಸಣ್ಣ ಹಾಗೂ ಮಧ್ಯಮ ಕಂಪನಿಗಳು ಮುಚ್ಚಿಹೋಗಿವೆ.

◆ ಸರಕಾರ ಔಷಧಗಳನ್ನು ಸಾರ್ವಜನಿಕ ಕ್ಷೇತ್ರಗಳಿಂದಲೇ ಖರೀದಿ ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶ ನೀಡಿದ್ದರೂ ಸರಕಾರ ಇದನ್ನು ಕಾರ್ಯಗತ ಮಾಡಲಿಲ್ಲ. ಉತ್ತರ ಪ್ರದೇಶ ಸರಕಾರ ಹೊರತಾಗಿ, ಕೇಂದ್ರ ಸರಕಾರವನ್ನೊಳಗೊಂಡು ಮತ್ತಿತರರು ಇದನ್ನು ಕಾರ್ಯಗತ ಮಾಡಿಲ್ಲ.

◆ ವಿಶ್ವ ವ್ಯಾಪಾರ ಸಂಸ್ಥೆಯ ಆಗ್ರಹದಂತೆ ಬರುವ ಚಳಿಗಾಲದ ಅಧಿವೇಶನದಲ್ಲಿ ವಿಸ್ತಾರವಾದ ಮಸೂದೆ ಪ್ರೊಸೆಸ್ ಪೇಟೆಂಟ್ ಹಾಗೂ ಪ್ರಾಡಕ್ಟ್ ಪೇಟೆಂಟನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುವುದಾಗಿ ಕೇಂದ್ರ ವಾಣಿಜ್ಯ ಮಂತ್ರಿ ಮುರುಸೋಳಿ ಮಾರನ್‌ರವರು ತಿಳಿಸಿದ್ದಾರೆ.

ಪೇಟೆಂಟ್ ಕಾನೂನಿನ ಬದಲಾವಣೆ ಪ್ರಕ್ರಿಯೆ ಪ್ರಾರಂಭವಾಗುತ್ತಿದ್ದಂತೆ ಹಲವಾರು ಕಂಪನಿಗಳು ಔಷಧಗಳನ್ನು, ಕಂಪನಿಗಳ ಶೇರನ್ನು, ಇಡಿ ಕಂಪನಿಯ ಖರೀದಿ ಹಾಗೂ ಒಂದು ಕಂಪನಿಯ ಜೊತೆ ಇನ್ನೊಂದು ಕಂಪನಿಯು ಕೂಡುವಿಕೆ ಪ್ರಾರಂಭವಾಗಿದೆ. ಇದರಿಂದಾಗಿ ಔಷಧ ಕ್ಷೇತ್ರದಲ್ಲಿ ಏಕಸ್ವಾಮ್ಯತೆ ಹಂತಹಂತವಾಗಿ ಕಾಲಿಡುತ್ತಿದೆ. ಇಂದು

ಮೊದಲ 10 ಔಷಧ ಕಂಪನಿಗಳ ಮಾರುಕಟ್ಟೆ ಶೇರು (1999)

1. ಗ್ಲಾಕ್ಸೋ ಹಾಗೂ ಸ್ಮಿತ್ ಕ್ಲೆಮ್	ಶೇ 7.33
2. ರ್‍ಯಾನಬ್ಯಾಕ್ಸಿ	ಶೇ 4.90
3. ನಿಪ್ಲಾ	ಶೇ 4.25
4. ಹೆಸ್ಟ ರುಸೆಲ್ ಹಾಗೂ ರೊನ್‌ಪೊಂಲಡ್	ಶೇ 4.10
5. ಫೈಝರ್ ಹಾಗೂ ಪಾರ್ಕ್ ಡೇವಿಸ್	ಶೇ 3.56
6. ಡಾ. ರೆಡ್ಡಿ ಲ್ಯಾಬ್ ಹಾಗೂ ಅಮೆರಿಕನ್ ರೆಮಿಡಿಸ್	ಶೇ 2.48
7. ವೊಕಾರ್ಡ ಹಾಗೂ ಮೇರಿಂಡ್	ಶೇ 2.37
8. ಕ್ಯಾಡಿಲಾ ಝೈಡಸ್	ಶೇ 2.34
9. ನಾಲ್ ಫಾರ್ಮಾ	ಶೇ 2.30
10. ಸನ್ ಫಾರ್ಮಾ	ಶೇ 2.21

ಔಷಧ ಕ್ಷೇತ್ರದ ಒಟ್ಟು ಪ್ರತಿಶತ 36 ರಷ್ಟು ಮಾರುಕಟ್ಟೆ(12,804/- ಕೋಟಿ ರೂ.) ಕೇವಲ



ಮೊದಲ ಹತ್ತು ಔಷಧ ಕಂಪನಿಗಳ ಹಿಡಿತದಲ್ಲಿದೆ. ಇದು ಏಕಸ್ವಾಮ್ಯತೆಯತ್ತ ನಡೆಯುತ್ತಿರುವ ಒಂದು ನಿದರ್ಶನ.

. ಕೇಂದ್ರ ಸರಕಾರ 'ರಾಷ್ಟ್ರೀಯ ಔಷಧ ಬೆಲೆ ಪ್ರಮಾಣ' (NPPA) ಜಾರಿಯಲ್ಲಿ ತಂದಿದೆ. ಇದು ಜಾರಿಯಲ್ಲಿದ್ದರೂ ಅನೇಕ ಅಗತ್ಯ ಔಷಧಗಳ ಬೆಲೆ ಏರಿದವು. ಕ್ಷಯರೋಗಕ್ಕೆ ಬೇಕಾದ ರಿಫಾಂಫಿಸಿನ್ ಬೆಲೆ ಶೇ 36 ರಷ್ಟು, ಇಥಾಂಬ್ಯೂಟಲ್‌ನ ಬೆಲೆ ಶೇ 75 ಹಾಗೂ ಕ್ಲೊಫಾರಿಝಿಮೈನ್‌ನ ಬೆಲೆ ಶೇ 33 ರಷ್ಟು ಏರಿಕೆ ಕಂಡವು.

ಕೆಲವೊಂದು ಕಂಪನಿಗಳು ಔಷಧಗಳ ಬೆಲೆಯಲ್ಲಿ ಹೆಚ್ಚಳ ಮಾಡಿದ್ದನ್ನು ಸುಪ್ರೀಂಕೋರ್ಟ್ ಸರಕಾರಕ್ಕೆ ಮರಳಿ ಪಡೆಯುವಂತೆ ಆದೇಶ ನೀಡಿದ್ದರೂ ಸರಕಾರ ಔಷಧ ಬೆಲೆ ಏರಲು ಕೈಬಿಟ್ಟಿದೆ. ಗ್ಲಾಕ್ಸೋ ಕಂಪನಿ ಬಿಟಾಮಿಟಾಸೂನ್ ಮೇಲೆ ಶೇ 18 ಹೆಸ್ಟ್ ಕಂಪನಿ ನೋವಾಲರಿಝಿನ್ ಮೇಲೆ ಶೇ 19 ರಷ್ಟು ಬೂಟ್ಸ್ ಕಂಪನಿ ಇನ್ಸುಲಿನ್ ಮೇಲೆ ಶೇ 16,.31 ರಷ್ಟು ಏರಿಸಲು ಅವಕಾಶ ಮಾಡಿ ಕೊಟ್ಟಿದೆ. 30 ಕ್ಕೂ ಹೆಚ್ಚು ಎನ್.ಪಿ.ಪಿ.ಎ.ನ ಆರ್ಡರ್‌ಗಳನ್ನು ಹೈಕೋರ್ಟ್ 1999 ತಡೆಯಾಜ್ಞೆ ನೀಡಿದೆ. ಹೆಚ್ಚಿನ ಬೆಲೆಯನ್ನು ಮರಳಿಪಡೆಯುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿದ್ದರೂ(ಈ ಹಣ ಸುಮಾರು 300 ಕೋಟಿರೂ.) ಸರಕಾರ ಯಾವುದೇ ರೀತಿಯ ಪ್ರಯತ್ನ ಮಾಡಿಲ್ಲ.

. ಏಪ್ರಿಲ್ 2000 ರಂದು 10 ವರ್ಷಗಳ ತೆರಿಗೆ ವಿನಾಯಿತಿ ಔಷಧ ಕಂಪನಿಗಳಿಗೆ ಹೊಸ ಅವಿಷ್ಕಾರ ಹಾಗೂ ಬೆಳವಣಿಗೆ (R&D) ಮಾಡುವ ನೆಪದಲ್ಲಿ ಪ್ರತಿಶತ 125 ರಿಂದ 150 ಹಾಗೂ 150ಕ್ಕೆ ಕೋಟಿ ರೂ. ಫಂಡ್ ನೀಡಿದೆ. ಇದರಲ್ಲಿ ಯಾವುದಾದರೂ ವಿನಾಯಿತಿ ಔಷಧ ಉಪಯೋಗಿಸುವವರಿಗೆ ಸಿಕ್ಕಿತೆ?

ಸಿಪಿಐ(ಎಂ) ವಿಶೇಷ ಸಮ್ಮೇಳನ

ಪುಟ 7 ರಿಂದ

ಆಯೋಗದ ನೀತಿ-ನಿಯಮಗಳೇ ಅಸಂಬದ್ಧವಾಗಿವೆ. ಒಬ್ಬನೇ ಒಬ್ಬ ಸಂಸತ್ ಸದಸ್ಯನಿಲ್ಲದಿದ್ದರೂ ಕೆಲವು ಪಕ್ಷಗಳು ಮಾನ್ಯತೆ ಪಡೆದಿವೆ. ಇದೆಂಥ ವಿಪರ್ಯಾಸ. ಇಂತಹ ಕ್ರಮಗಳಿಂದ ರಾಷ್ಟ್ರೀಯ ರಂಗದಲ್ಲಿ ಪಕ್ಷದ ಬೆಳವಣಿಗೆಯನ್ನು ತಡೆಯಲಾಗದು ಎದು ಭಾರಿ ಚಪ್ಪಾಳೆಗಳ ನಡುವೆ ಘೋಷಿಸಿದರು.

ಭಾರತದ ಹಿರಿಯ ಬಂಡವಾಳಗಾರರು, ವಿದೇಶಿ ಹಣಕಾಸು ಬಂಡವಾಳ ಹಾಗೂ ಭೂಮಾಲಿಕರ ಸುಲಿಗೆಯನ್ನು ತಪ್ಪಿಸದೆ ಅಭಿವೃದ್ಧಿ ಹಾಗೂ ಸಾಮಾಜಿಕ ಸಮಾನತೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರ ನೀತಿಗಳು ಮಧ್ಯಮ-ಸಣ್ಣ ಕೈಗಾರಿಕೆಗಳನ್ನು ನಾಶಗೊಳಿಸುತ್ತಿವೆ. ಕೃಷಿಕರು ನಿರ್ನಾಮ ವಾಗುತ್ತಿದ್ದಾರೆ. ಜಾತಿ, ಲಿಂಗ ತಾರತಮ್ಯ ಮತ್ತು ಅಸಮಾನತೆ ತೊಲಗಿಸಬೇಕಾದರೆ ವರ್ಗ ಹಾಗೂ ಸಾಮಾಜಿಕ ಶೋಷಣೆ ಅಂತ್ಯಗೊಳಿಸಿ ಹೊಸ ಸಮಾಜ ವ್ಯವಸ್ಥೆ ನಿರ್ಮಾಣ ವಾಗಬೇಕು, ಸ್ವಾತಂತ್ರ್ಯ ಚಳುವಳಿ ಕಾಲದಿಂದಲೂ ಜಾತಿ ದಬ್ಬಾಳಿಕೆ, ಅಸ್ಪೃಶ್ಯತೆ ವಿರುದ್ಧ ಹಾಗೂ ಮಹಿಳಾ ಹಕ್ಕುಗಳಿಗಾಗಿ ಕಮ್ಯುನಿಸ್ಟರು ಹೋರಾಡಿದ್ದಾರೆ. ಅದು ಇಂದು ಇನ್ನೂ ತೀವ್ರವಾಗಿ ಮುಂದುವರಿಯಬೇಕು ಎಂದರು. ಭೂಮಾಲೀಕತ್ವ, ಏಕಸ್ವಾಮ್ಯ ಬಂಡವಾಳ, ಸಾಮ್ರಾಜ್ಯಶಾಹಿಗಳ ವಿರುದ್ಧ ದಣಿವರಿಯದ ಹೋರಾಟ ಸಿಪಿಐ(ಎಂ) ಕಾರ್ಯಕ್ರಮ ಒಳಗೊಂಡಿದೆ. ಇದೇ ನಿಜವಾದ ದೇಶಪ್ರೇಮ. ಇದಕ್ಕೆ ಭಾರತದ ಸಮಸ್ತ ಜನತೆ ಬೆಂಬಲಿಸುತ್ತಾರೆ ಎಂಬ ದೃಢ ವಿಶ್ವಾಸ ನಮ್ಮದು ಎಂದ ಕಾಂ. ಸುರ್ಜಿತ್‌ರವರು ಈಗ ಪಕ್ಷವು ಏಳೂವರೆ ಲಕ್ಷ(7.5 ಲಕ್ಷ) ಸದಸ್ಯರನ್ನು ಹೊಂದಿದೆ. ಸಾಮೂಹಿಕ ಸಂಘಟನೆಗಳ ಸದಸ್ಯತ್ವ 3 ಕೋಟಿ 72 ಲಕ್ಷದಷ್ಟು. ಇದು ಎಡ ಪ್ರಜಾಸತ್ತಾತ್ಮಕ ಚಳುವಳಿಯ ಅತಿದೊಡ್ಡ ಭಾಗವಾಗಿದೆ.

ಈ ವಿಶೇಷ ಸಮ್ಮೇಳನವು ಅಂಗೀಕರಿಸುವ ಸಮಕಾಲಿಕಗೊಳಿಸಲಾದ ಕಾರ್ಯಕ್ರಮವು ಭಾರತದಲ್ಲಿ ಹೆಚ್ಚು ಪ್ರಜಾಸತ್ತಾತ್ಮಕ, ನ್ಯಾಯಬದ್ಧ ಸಮಾಜ ನಿರ್ಮಿಸಲು ಬದ್ಧವಾಗಿದೆ. ಇದು ಜನತಾಪ್ರಜಾಸತ್ತಾತ್ಮಕ ಹಂತ. ಇದರ ಮೂಲಕ ಹಾದೂ ಸಮಾಜವಾದದತ್ತ ಸಾಗಬೇಕಾಗಿದೆ. ಈ ವಿಶೇಷ ಸಮ್ಮೇಳನವು ದೇಶದ ಕಮ್ಯುನಿಸ್ಟ್ ಇತಿಹಾಸದಲ್ಲಿ ಮಹತ್ವದ ಅಧ್ಯಾಯವನ್ನು ಆರಂಭಿಸಲಿದೆ ಎಂದು ಹೆಮ್ಮೆಯಿಂದ ಸುರ್ಜಿತ್ ನುಡಿದರು.

ಸಿಪಿಐ(ಎಂ)ನೇತೃತ್ವದಲ್ಲಿ ಕುಂದಾಪುರ ಪುರಸಭೆಯ ಉತ್ತಮ ಸಾಧನೆ

ಕುಂದಾಪುರ ಪುರಸಭೆಯ ಆಡಳಿತವನ್ನು ತಾರೀಖು 19.11.1996 ರಂದು ವಹಿಸಿಕೊಂಡು ಮುನ್ನಡೆಸುತ್ತಿರುವ ಸಿಪಿಐ(ಎಂ)-ಜನತಾದಳ ಒಕ್ಕೂಟದ ಆಡಳಿತ ಕಳೆದ 3 ವರ್ಷ 8 ತಿಂಗಳು ಪುರಸಭೆಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿ ಉತ್ತಮ ಸಾಧನೆ ಮಾಡಿದೆ ಅಂತ ಹೆಚ್ಚಿನ ಜನರು ಹೇಳುತ್ತಿದ್ದಾರೆ.

ನಾಗರಿಕರ ಮೂಲ ಸೌಕರ್ಯಗಳ ಕೊರತೆಗಳ ಬಗ್ಗೆ ಎರಡೂ ಪಕ್ಷಗಳ ಪುರಸಭೆಯ ಸದಸ್ಯರು ಒಟ್ಟಾಗಿ ಚರ್ಚೆ ನಡೆಸಿ ಅವುಗಳ ನಿವಾರಣೆ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಕ್ರಮ ಕೈಗೊಂಡಿರುವ ಸಂತೃಪ್ತಿ ಇದೆ. ಈ ಅಭಿವೃದ್ಧಿ ಕೆಲಸಗಳಲ್ಲಿ ಸಾರ್ವಜನಿಕರು ಸಹ ತಮ್ಮನ್ನು ತಾವು ತೊಡಗಿಸಿಕೊಂಡು ಪುರಸಭೆಯೊಂದಿಗೆ ಸಹಕರಿಸಿರುವುದು ಉಲ್ಲೇಖನೀಯ.

ಕುಂದಾಪುರ ಪುರಸಭೆಯಲ್ಲಿ 23 ಸ್ಥಾನಗಳಿದ್ದು, ನಡೆದ ಚುನಾವಣೆಯಲ್ಲಿ ಸಿಪಿಐ(ಎಂ) 9 ಸ್ಥಾನಕ್ಕೆ ಸ್ಪರ್ಧಿಸಿ, 9 ಸ್ಥಾನಗಳನ್ನು ಗೆದ್ದು, ಜನತಾದಳ 6 ಸ್ಥಾನ ಗೆದ್ದು, ಒಟ್ಟಿಗೆ 15 ಸ್ಥಾನಗಳ ಬಹುಮತ ಹೊಂದಿ ಅಧಿಕಾರಕ್ಕೆ ಬಂದು ಉತ್ತಮ ಆಡಳಿತ ನಡೆಸಿ ಜನ ಮೆಚ್ಚುಗೆ ಪಡೆಯುವಂತಾಯಿತು. ಸಿಪಿಐ(ಎಂ) ನ ಕುಂದಾಪುರ ತಾಲೂಕು ಸಮಿತಿಯ ಸದಸ್ಯರಾದ ಕಾಮ್ರೇಡ್ ವಿ.ನರಸಿಂಹನವರು ಕಳೆದ 30 ತಿಂಗಳ ಅವಧಿಗೆ ಪುರಸಭಾ ಅಧ್ಯಕ್ಷರಾಗಿ ಉತ್ತಮ ಆಡಳಿತ ನೀಡುವಲ್ಲಿ ಕಾರಣಕರ್ತರಾಗಿದ್ದಾರೆ. ಈ ಹಿಂದೆ 4 ಬಾರಿ ಪುರಸಭಾ ಸದಸ್ಯರಾಗಿ ನಿರಂತರ ಜನಸಂಪರ್ಕದಿಂದ ಹಾಗೂ ಸಾಮಾಜಿಕ ಕೆಲಸ ಕಾರ್ಯಗಳಿಂದ ಮತದಾರರ ಪ್ರೀತಿ ಗಳಿಸಿದ್ದರು. ಎಚ್.ನರಸಿಂಹ, ಉಲ್ಲಿ ಡಿಸೋಜ, ಮಹಾಬಲ ವಡೇರಹೋಬಳಿ, ವಿ.ನಾಗ, ಕಾಳ, ರತ್ನ, ಗುಣರತ್ನ ಮತ್ತು ವಿನೋದ ಎಂಬವರು ಪುರಸಭಾ ಸದಸ್ಯರು ಆಗಿದ್ದು ಅವರ ಅನುಭವ ಮತ್ತು ಸ್ಫೂರ್ತಿ ಹಾಗೂ ಸಹಕಾರದಿಂದಾಗಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಭ್ರಷ್ಟಾಚಾರಕ್ಕೆ ಅವಕಾಶ ಕೊಡದೇ ನಡೆಸಲು ಸಾಧ್ಯವಾಯಿತು, ಮೀಸಲಾತಿಯ ಪ್ರಕಾರ 30 ತಿಂಗಳ ನಂತರ ಸಿಪಿಐ(ಎಂ) ಕಾಮ್ರೇಡ್ ಗುಣರತ್ನನವರು ಪುರಸಭೆಯ ಅಧ್ಯಕ್ಷೆಯಾಗಿ ಆಯ್ಕೆಗೊಂಡಿರುತ್ತಾರೆ.

ಪ್ರಥಮವಾಗಿ ಪುರಸಭೆಯ ಎಲ್ಲಾ ವಾರ್ಡುಗಳನ್ನು ಹಾಗೂ ಪ್ರದೇಶಗಳನ್ನು ಶುಚಿಯಾಗಿಡಲು ಹಾಗೂ ರಸ್ತೆಯ ಇಕ್ಕಡೆಗಳನ್ನು ಶುಚಿಯಾಗಿಡಲು ಹೆಚ್ಚಿನ ಆದ್ಯತೆ ನೀಡಲಾಗಿದೆ. ರಸ್ತೆ ನಿರ್ಮಾಣ, ದಾರಿದೀಪಗಳ ಅಭಿವೃದ್ಧಿಗೆ ವಿಸ್ತರಣೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಕುಡಿಯುವ ನೀರಿನ ಸಮಸ್ಯೆ, ಕೊಳಚೆ ನೀರಿನ ವಿಲೇವಾರಿ ಸಮಸ್ಯೆ ಹಾಗೂ ತ್ಯಾಜ್ಯ ಘನ ವಸ್ತುಗಳ ನಿರ್ವಹಣೆ ಸಮಸ್ಯೆಗಳನ್ನು ಪರಿಹಾರಗೊಳಿಸಲು, ಮುಖ್ಯ ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ.

ವಾರಾಹಿ ನದಿಯಿಂದ ನೀರು ಸರಬರಾಜು ಬಗ್ಗೆ : ಮಳೆ ನೀರು ಹರಿಯುವ ಚರಂಡಿ ರಚನೆ; ಮೀನು ಮಾರ್ಕೆಟ್ಟು ರಚನೆ ಮತ್ತು ಮಾರ್ಕೆಟ್ ಅಭಿವೃದ್ಧಿಗೆ; ಕಚೇರಿ ಕಾಂಪೌಂಡಿನಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣದ ಬಗ್ಗೆ; ಸ್ಮಶಾನ ಅಭಿವೃದ್ಧಿ ಬಗ್ಗೆ, ಸಾರ್ವಜನಿಕ ಶೌಚಾಲಯಗಳ ರಚನೆಗೆ, ಪುರಸಭೆ ರಸ್ತೆಗಳ ಅಭಿವೃದ್ಧಿ ಬಗ್ಗೆ, ಕೊಳಚೆ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಹಾಗೂ ರಸ್ತೆಗಳ ಡಾಮರೀಕರಣಕ್ಕೆ ಹೆಚ್ಚಿನ ಹಣವನ್ನು ವಿನಿಯೋಗಿಸಲಾಗುತ್ತಿದೆ.

ಪುರಸಭೆಯ ವತಿಯಿಂದ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿರುವುದಲ್ಲದೆ ಸಾರ್ವಜನಿಕರಿಂದ ದೇಣಿಗೆ ಪಡೆದುಕೊಂಡು ಅಭಿವೃದ್ಧಿ ಕೆಲಸಗಳನ್ನು ಮಾಡಿಸಲು ಸಾಧ್ಯವಾಗಿದೆ.

ನಗರ ಪ್ರದೇಶದ ಹೋಟೆಲುಗಳು, ನರ್ಸಿಂಗ್ ಹೋಂ ಹಾಗೂ ಇನ್ನಿತರ ಕಟ್ಟಡಗಳ ವಿಸರ್ಜಿತ ಮಲಿನ ನೀರು ರಸ್ತೆಯ ಬದಿ ತೆರೆದ ಚರಂಡಿ ಮೂಲಕವೇ ಹರಿದು ಹೋಗುತ್ತಿದ್ದು, ದುರ್ವಾಸನೆಯ ವಾತಾವರಣವಿರುತ್ತಿರುವುದನ್ನು ಪರಿಗಣಿಸಿ, ಈ ಬಗ್ಗೆ ಪ್ರತ್ಯೇಕ ಸಮಿತಿ ರಚಿಸಿ, ಪ್ರಥಮವಾಗಿ ಪಶ್ಚಿಮ ಭಾಗದಲ್ಲಿನ ಅಂತಹ ಕಟ್ಟಡಗಳ ಮಾಲಿಕರಿಂದ ದೇಣಿಗೆ ಪಡೆದುಕೊಂಡು ಸುಮಾರು ರೂಪಾಯಿ ಎಂಟು ಲಕ್ಷ ವೆಚ್ಚದಲ್ಲಿ ಭೂಗತ ಪೈಪುಲೈನು ಹಾಕಿಸಿ ವಿಲೇವಾರಿ ಮಾಡುತ್ತಿರುವುದು ಒಂದು ವಿಶೇಷ ಸಾಧನೆಯಾಗಿದೆ. ಇದೇ ರೀತಿ ಪೂರ್ವಭಾಗದಲ್ಲಿ ಇರುವ ಅಂತಹ ಕಟ್ಟಡಗಳ ಮಲಿನ ನೀರು ವಿಲೇವಾರಿಗೆ ಭೂಗತ ಪೈಪು ಹಾಕಿಸುವ ಬಗ್ಗೆ



ಕುಂದಾಪುರ ಪುರಸಭೆ ಅಧ್ಯಕ್ಷೆ ಕಾಂ. ಗುಣರತ್ನ

ರೂಪಾಯಿ ಮೂವತ್ತು ಲಕ್ಷ ವೆಚ್ಚದ ಯೋಜನೆ ನಿರ್ಧರಿಸಿದ್ದು, ಈ ಬಗ್ಗೆ ಶಕ್ತಿಮೀರಿ ಪ್ರಯತ್ನಿಸುತ್ತಿದ್ದು ಈ ಎರಡೂ ಯೋಜನೆಗಳಿಂದ ನಗರ ಪ್ರದೇಶದ ಮಲಿನ ನೀರಿನ ಸಮಸ್ಯೆಯಿಂದ ಮುಕ್ತಗೊಳಿಸಲು ಶ್ರಮಿಸಲಾಗಿದೆ.

ಪುರಸಭಾ ವ್ಯಾಪ್ತಿಯಲ್ಲಿನ ನೀರು ಸರಬರಾಜು ಅಭಿವೃದ್ಧಿಗೆ ತೆರೆದ ಬಾವಿ ರಚನೆ ಬಗ್ಗೆ ಯೋಚಿಸಿದೆ ಮತ್ತು ಖಾಸಗಿ ಬಾವಿಗಳಿಂದ ನೀರು ಪಡೆಯುತ್ತಿದ್ದು, ನೀರಿನ ಕೊರತೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ.

ಪುರಸಭೆಯ ವತಿಯಿಂದ ಹೊಸ ಬಸ್‌ನಿಲ್ದಾಣದ ಬಳಿ ನಿರ್ಮಾಣವಾಗುತ್ತಿರುವ ವಾಣಿಜ್ಯ ಸಂಕೀರ್ಣ ಈಗಾಗಲೇ ನೆಲ ಅಂತಸ್ತು ಪೂರ್ಣಗೊಂಡು, ಎಲಂ ಮಾಡಿ ಸಂಬಂಧ ಪಟ್ಟವರಿಗೆ ಕೋಣೆಗಳನ್ನು ವಹಿಸಿಕೊಡಲಾಗಿದೆ. ಒಂದನೇ ಅಂತಸ್ತಿನ ಕೆಲಸ ಸಧ್ಯದಲ್ಲೇ ಪೂರ್ಣಗೊಳ್ಳಲಿದೆ. ಪುರಸಭೆಯ ನಿಯಮಾವಳಿಯ ಪ್ರಕಾರ ಎಲಂ ಮಾಡಲಾಗುವುದು. ಪುರಸಭೆಯ ಆದಾಯ ಇದರಿಂದ ಹೆಚ್ಚಾಗಲಿದ್ದು ಅಭಿವೃದ್ಧಿಗಾಗಿ ವಿನಿಯೋಗಿಸಲಾಗುವುದು.

ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ತೆರಿಗೆ ನಿರ್ಧರಣಾಧಿಕಾರಿಯವರು ತೆರಿಗೆ ಹಾಕಿದ್ದರಲ್ಲಿ ಬಹಳ ನ್ಯೂನತೆಗಳು ಕಂಡು ಬಂದುದರಿಂದ ತಾ. 7.6.2000 ರಂದು ಸೇರಿದ ವಿಶೇಷ ಸಾಮಾನ್ಯ ಸಭೆಯಲ್ಲಿ ಖಂಡಿಸಲಾಗಿದ್ದು, ಸುಮಾರು 8,000ಕ್ಕೂ ಮಿಕ್ಕಿ ಖಾತೆಗಳಿದ್ದು ಸುಮಾರು 4,000 ಕ್ಕೂ ಮೇಲ್ಪಟ್ಟು ಆಕ್ಷೇಪಗಳು ದಾಖಲಾಗಿದ್ದುದನ್ನು ಪರಿಶೀಲಿಸಿ ರದ್ದು ಪಡಿಸುವುದರೊಂದಿಗೆ ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮ ಕೈಗೊಂಡು, ಪುನಃ ತೆರಿಗೆ ಎಸಸ್‌ಮೆಂಟ್ ಮಾಡಬೇಕೆಂದು ಸಂಬಂಧ ಪಟ್ಟ ಇಲಾಖೆಗೆ ಬರೆದುಕೊಳ್ಳಲು ವಿಶೇಷ ಸಾಮಾನ್ಯ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ಉತ್ತಮ ಕೆಲಸ ಮಾಡುವ ಆಡಳಿತ ಮಂಡಳಿಯ ವಿರುದ್ಧ ಕೆಟ್ಟ ಹೆಸರು ತರುವ ಅಧಿಕಾರಿಗಳ ಮತ್ತು ಕೆಲವರ ಸಂಚು ಇದಾಗಿದೆ.

ಪುರಸಭೆಯ ವ್ಯಾಪ್ತಿಯಲ್ಲಿ 23 ವಾರ್ಡುಗಳಿದ್ದು ಪ್ರತಿಯೊಂದು ವಾರ್ಡಿಗೂ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಆದ್ಯತೆ ನೀಡುತ್ತ, ಜನರ ನಿರಂತರ ಸಂಪರ್ಕವಿಟ್ಟುಕೊಂಡು, ಆಗಿಂದ್ದಾಗ್ಗೆ ಅವರಿಗೆ ಅಭಿವೃದ್ಧಿ ಕೆಲಸಗಳ ಬಗ್ಗೆ ವರದಿ ಮಾಡುತ್ತಾ, ಆಗದ ಕೆಲವು ಕೆಲಸಗಳಿಗೆ ಕಾರಣಗಳನ್ನು ನೀಡುತ್ತಾ, ಅವರ ಸಲಹೆ-ಸೂಚನೆಗಳನ್ನು ಪಡೆಯಬೇಕೆಂದು ನಿರ್ಧರಿಸಲಾಗಿದೆ. ಪ್ರತಿವಾರ್ಡಿನಲ್ಲಿ ಸಮಿತಿಗಳನ್ನು ರಚಿಸುವುದರ ಮೂಲಕ ಪಕ್ಷದ ಸದಸ್ಯರ-ಬೆಂಬಲಿಗರ ಮಧ್ಯೆ ಸಂಪರ್ಕ ಹೆಚ್ಚಿಸುವ ಕೆಲಸ ನಡೆಯಬೇಕಾಗಿದೆ. ತನ್ಮೂಲಕ ಎಲ್ಲಾ ಸ್ಥಾನಗಳಲ್ಲಿ ಪಕ್ಷದ ಸದಸ್ಯರು ಹಾಗೂ ಬೆಂಬಲಿಗರು ಸ್ಪರ್ಧಿಸುವ ನಿಟ್ಟಿನಲ್ಲಿ ರಾಜಕೀಯ ಕೆಲಸ ನಡೆಯಿಸುವ ಮೂಲಕ ಇನ್ನೊಂದು ಚುನಾವಣೆಯಲ್ಲಿ ಪುನಃ ಹೆಚ್ಚಿನ ಸ್ಥಾನಗಳನ್ನು ಪಡೆದು ಅಧಿಕಾರಕ್ಕೆ ಬರುವಂತೆ ನಿರ್ಧರಿಸಲಾಗಿದ್ದು, ಪ್ರಾಯೋಗಿಕವಾಗಿ ಶ್ರಮಿಸಬೇಕಾಗಿದೆ. ಸಂಘಟನೆ ಮತ್ತು ಜನಸಂಪರ್ಕದ ಕೆಲಸ ನಡೆಯುತ್ತ ಇದ್ದು, ಚುರುಕುಗೊಳಿಸಬೇಕಾಗಿದೆ.

- ಕೆ.ಶಂಕರ್

ಕೃಷ್ಣ ಸರ್ಕಾರದ ಒಂದು ವರ್ಷ

ಪುಟ 3 ರಿಂದ

ಚಾಚುತ್ತಿರುವುದರಿಂದ ರಾಜ್ಯದ ಬೊಕ್ಕಸದ ಮೇಲೆ ದೊಡ್ಡ ಪ್ರಮಾಣದ ಸಾಲದ ಹೊರೆ. ಇದರಿಂದಾಗಿ ಈ ಸಾಲ ಮತ್ತು ಅದರ ಬಡ್ಡಿಯನ್ನು ತೀರಿಸುವುದಕ್ಕಾಗಿಯೇ ಮುಂದಿನ ಹಲವಾರು ವರ್ಷಗಳ ಬಜೆಟ್ ಮೀಸಲಾಗಬೇಕಾಗಿದೆ. ಮತ್ತು ಆ ವರ್ಷಗಳಲ್ಲಿ ರಾಜ್ಯದ ಎಲ್ಲಾ ಅಭಿವೃದ್ಧಿ ಯೋಜನೆಗಳು ಕುಂಠಿತವಾಗುತ್ತವೆ. ರಾಜ್ಯದ ಜನರ ಮೇಲೆ ಸಾಲ ತೀರಿಸುವ ದೊಡ್ಡ ಹೊರೆ ಮತ್ತು ಹೊಣೆ ಬೀಳುತ್ತದೆ ಎಂಬ ಯಾವ ಪರಿವೆಯೂ ಇದ್ದಂತೆ ಕಾಣುತ್ತಿಲ್ಲ.

ಇದೇ ವಿಶ್ವಬ್ಯಾಂಕ್ ಸಾಲಗಳೆಡೆಗೆ ಕೈಚಾಚುತ್ತಿರುವುದರಿಂದಾಗಿ ಅವರ ಶರತ್ತುಗಳ ಪಾಲನೆಗಾಗಿ ಇಂದು ವಿದ್ಯುತ್ ಉತ್ಪಾದನೆ ಹಾಗೂ ಸರಬರಾಜು ಖಾಸಗೀಕರಣ, ವಿದ್ಯುತ್ ದರಗಳ ದುಬಾರಿ ಹೇರಿಕೆ, ನಗರಗಳಿಗೆ ನೀರು ಸರಬರಾಜುಗಳ ಖಾಸಗೀಕರಣ, ನೀರಾವರಿ ಯೋಜನೆಗಳಲ್ಲಿ ನೀರು ಹಂಚಿಕೆ ಹಾಗೂ ದರ ವಸೂಲಿಯ ಖಾಸಗೀಕರಣ(ನೀರಾವರಿ ಸಹಕಾರ ಸಂಘ) ಭಾಗ್ಯಜ್ಯೋತಿ ಯೋಜನೆಯ ಹಾಗೂ ಹಸಿರು ಕಾರ್ಡುಗಳ ಸಂಖ್ಯೆಯ ತೀವ್ರ ಕಡಿತ ಮುಂತಾದ ಅನೇಕ ಕ್ರಮಗಳು.

ಈ ಕ್ರಮಗಳಿಂದ ಕರ್ನಾಟಕದ ಬಡಜನರ ಮಧ್ಯಮ ವರ್ಗದ ಜನರ ಬದುಕು ಬೆಂಕಿಯ ಮೇಲೆ ಇಟ್ಟಂತಾಗುತ್ತದೆ. ತಮಗೆ ಮತಹಾಕಿ ಅಧಿಕಾರಕ್ಕೆ ತಂದ ಬಡಜನತೆಗೆ ದ್ರೋಹ ಬಗೆದಂತಾಗುತ್ತದೆಂಬ ಯಾವ ಕಾಳಜಿಯೂ ಇಲ್ಲದೆ ಪಂಕಾನುಪಂಕವಾಗಿ ಇಂತಹ ಕ್ರಮಗಳು ಆರಂಭವಾಗಿವೆ.

ಕಂಪನಿ ಮಾದರಿ ಆಡಳಿತ v/s ಪ್ರಜಾಸತ್ತೆ

ಇಂತಹ ಎಲ್ಲ ವಿಶ್ವಬ್ಯಾಂಕ್ ಪ್ರಣೀತ ಬಿಜೆಪಿಕೂಟ ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆಂದು ಭಾರತ ದಲ್ಲಿ ಹೊಸ ಆಡಳಿತ ಮಾದರಿಯನ್ನು ಮುಂದಿಡಲಾಗುತ್ತಿದೆ. ಚಂದ್ರಬಾಬು ನಾಯ್ಡು ರವರು ವಿಶ್ವಬ್ಯಾಂಕ್‌ನ ಗುಲಾಮರಂತೆ ನಡೆಯಲಾರಂಭಿಸಿದ ದಿನದಿಂದ ಪತ್ರಿಕೆ ಮತ್ತು ಟಿ.ವಿ.ಗಳಲ್ಲಿ ಅಬ್ಬರದ ಪ್ರಚಾರ ದೊರಕಿದ ಈ ಕಂಪನಿ ಮಾದರಿ (ಕಾರ್ಪೋರೇಟ್ ಮಾದರಿ) ಆಡಳಿತದ ಮೂಲಸೂತ್ರಗಳು ಇವು.



ಮುಖ್ಯಮಂತ್ರಿಯ ಕೈಯಲ್ಲೇ ಎಲ್ಲಾ ಅಧಿಕಾರದ ಕೇಂದ್ರೀಕರಣ ಮತ್ತು ಮುಖ್ಯಮಂತ್ರಿಯ ಪಾತ್ರವನ್ನೇ ಎಲ್ಲಾ ಕಡೆಯಲ್ಲಿಯೂ ಪ್ರಚಾರಕ್ಕಿಡುವುದು ಮಂತ್ರಿ ಮಂಡಲವನ್ನು ಕೇವಲ ರಬ್ಬರ್ ಸ್ಟ್ಯಾಂಪ್ ಮಟ್ಟಕ್ಕಿಳಿಸುವುದು. ಸಚಿವ ಸಹೋದ್ಯೋಗಿಗಳಿಗೆ ಬೆಲೆ ಇಲ್ಲದಂತೆ ಮಾಡುವುದು. ವಿಧಾನಸಭೆಯ ಚರ್ಚೆಗಳನ್ನು ಮೊಟಕುಗೊಳಿಸುವುದು, ಸುಗ್ರೀವಾಜ್ಞೆಗಳ ಮೂಲಕ ಆಡಳಿತ ನಡೆಸುವುದು ಇವು ಆಡಳಿತದ ಒಂದು ಮುಖ.

ಕೋಟ್ಯಾಂತರ ಜನರ ಮುಖವಾಣಿ ತಾನೆಂಬುದನ್ನು ಮರೆತು ವಿಶ್ವಬ್ಯಾಂಕ್, ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರ ಮುಂದೆ ಡೊಗ್ಗು ಸಲಾಮು ಹೊಡೆಯುವುದು. ಅಮೆರಿಕಾ ಅಧ್ಯಕ್ಷರ ಭೇಟಿಯ ಕೃಪೆಗಾಗಿ ಅಂಗಲಾಚುವುದು. ಅವರು ಭೇಟಿ ನೀಡುವ ಕೃಪೆ ನಿರಾಕರಿಸಿದಾಗ ಜಪಾನಿನ ಪ್ರಧಾನಿಯನ್ನು ಆಹ್ವಾನಿಸಿ ಮೀಸೆ ಮಣ್ಣಾಗಲಿಲ್ಲವೆಂಬಂತೆ ವರ್ತಿಸುವುದು, ಲಾಭಕೋರ ಕಂಪನಿಗಳ ಯಜಮಾನರ ಹಣತಿಯಂತೆ ನಡೆದುಕೊಳ್ಳುವುದು, ಅವರೇ ಆಡಳಿತದ ಮುಖ್ಯಸ್ಥ ರನ್ನೊಳಗೊಂಡ ಟಾಸ್ಕ್ ಫೋರ್ಸ್‌ಗಳನ್ನು ರಚಿಸುವುದು. ಇದು ಮತ್ತೊಂದು ಮುಖ.

ಹೀಗೆ ತಮಗೆ ಮತ ನೀಡಿದ ಪ್ರಜೆಗಳ ಅಭಿಮತಕ್ಕಿಂತ ವಿಶ್ವ ಬ್ಯಾಂಕ್ ದೊರೆಗಳ ಆಜ್ಞೆಯೇ ಪರಮವೆಂಬ ಭಾವನೆ ಭಾರತದ ಸಂವಿಧಾನ ದಲ್ಲಿ ಅಡಕ ವಾಗಿರುವ ಪ್ರಜಾಪ್ರಭುತ್ವದ ಮೂಲತತ್ವಕ್ಕೆ ಕೊಡಲಿ ಪೆಟ್ಟು ಹಾಕುತ್ತಿದೆ.


ಈ 'ಕಂಪನಿ ಮಾದರಿ' ಆಡಳಿತವನ್ನು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿ ಯಶಸ್ವಿಯಾಗಿರುವ ಜನರ ಅಭಿಮತವೇ ರಾಜ್ಯ ಆಡಳಿತದ ಸೂತ್ರವೆನ್ನುವ ಆಡಳಿತ ವಿಕೇಂದ್ರೀಕರಣ, ಪಂಚಾಯತ್ ರಾಜ್, ಜನರೂಪಿತ ಯೋಜನೆಗಳನ್ನುಳ್ಳ ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಜನಪರ ಮಾದರಿಗೆ ಹೋಲಿಸಿ ನೋಡಿದರೆ ಸ್ಪಷ್ಟವಾಗುತ್ತದೆ ಯಾವುದು ಜನಪರ ಯಾವುದು ಪ್ರಜಾಪ್ರಭುತ್ವ ಎನ್ನುವುದು.

ವಿಶ್ವಬ್ಯಾಂಕ್ ಪ್ರಣೀತ ಮಾರ್ಗದಲ್ಲಿ ಇನ್‌ಫೋಸಿಸ್ ಕಂಪನಿಗಳ ಒಡೆಯರ ಜೊತೆಗೆ ಜಂಭದಿಂದ ಸಾಗುತ್ತಿರುವಾಗ ಭಾರತದ ವಾಸ್ತವತೆಯ ಕರಾಳ ಪೆಟ್ಟು ರಾಜ್‌ಕುಮಾರ್ ಅಪಹರಣದ ಪ್ರಕರಣದೊಂದಿಗೆ ಕೃಷ್ಣ ಸರ್ಕಾರದ ಮೇಲೆ ಎರಗಿದೆ. ವಿಶ್ವಬ್ಯಾಂಕ್ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಒಡೆಯರಿಗೆ ಶರಣಾದ ದೇಹ ವೀರಪ್ಪನ್ ಕಾಲುಗಳ ಮುಂದೆ ಮೈಚೆಲ್ಲಿ ಬಿದ್ದಿದೆ. ವೀರಪ್ಪನಂತಹ ಕಾಡುಗಳ್ಳನನ್ನು ದೃಢವಾಗಿ ಎದುರಿಸುವ ಮಾರ್ಗಗಳ ಬದಲಾಗಿ, ಕೋಟಿಗಟ್ಟಲೆ ಕಪ್ಪ ಕಾಣಿಕೆಗಳನ್ನು ನೀಡಿ ತೃಪ್ತಿಪಡಿಸುವ, ಕಾನೂನಿನ ವಲಯಗಳನ್ನು ಮೀರಿ ಅವನು ಕೇಳಿದ್ದಕ್ಕೆಲ್ಲ 'ಸೈ' ಎನ್ನುವ ನೀತಿಯಿಂದಾಗಿ ಕರ್ನಾಟಕದ ಜನತೆಯ ನೆಚ್ಚಿನ ಕಲಾವಿದ 75 ದಿನಗಳಿಗಿಂತಲೂ ಹೆಚ್ಚು ದಿನ ಅರಣ್ಯ ವಾಸ ಮಾಡಬೇಕಾಗಿ ಬಂದಿದೆ. ಕೃಷ್ಣ ಸರ್ಕಾರದ ಅಗ್ನಿ ಪರೀಕ್ಷೆಯಾಗಿ ಈ ಪ್ರಕರಣ ಕಾದು ಕುಳಿತಿದೆ.

ತಮ್ಮ ಸಚಿವ ಸಂಪುಟ ಹಾಗೂ ಶಾಸನ ಸಭೆಯನ್ನು ಅಲಕ್ಷಿಸುವ ಈ ಪ್ರಜಾಪ್ರಭುತ್ವ ವಿರೋಧಿ ಕಾರ್ಪೋರೇಟ್ ಮಾದರಿ ಆಡಳಿತದಿಂದಾಗಿ ಕಾಂಗ್ರೆಸ್ಸಿನೊಳಗೆ ಬೂದಿಮುಚ್ಚಿದ ಕೆಂಡದಂತಿರುವ ಭಿನ್ನಮತ ಆಸ್ಫೋಟಗೊಳ್ಳಲಿದೆ. ಆದರೆ ಭಿನ್ನಮತ ಕಾಂಗ್ರೆಸ್‌ನ ಆಡಳಿತವನ್ನು ಸ್ವಲ್ಪವಾದರೂ ಜನಪರ ದಾರಿಗೆ ಒಯ್ಯುವ ಲಕ್ಷಣಗಳೇನು ಕಂಡು ಬರುತ್ತಿಲ್ಲವೆಂಬುದೇ

ಒಲಂಪಿಕ್ಸ್: ಸಿಡ್ನಿಯಿಂದ ಅಥೆನ್ಸ್‌ಗೆ

ಹದಿನೈದು ದಿನಗಳ ಕಾಲ ಜಗತ್ತಿನ ಕೋಟ್ಯಾಂತರ ಕ್ರೀಡಾಭಿಮಾನಿಗಳ ಕಣ್ಮನಸ್ಸುಗಳನ್ನು ತನ್ನಡೆಗೆ ಸೆಳೆದಿದ್ದ ಹೊಸ ಸಹಸ್ರಮಾನದ ಮೊದಲ ಕ್ರೀಡಾ ಕೂಟ



ಅಥ್ಲೆಟಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಓಟದ ಸ್ಪರ್ಧೆಯಲ್ಲಿ ಸೆಮಿಫೈನಲ್ ತಲುಪಿದ್ದ ಭಾರತ ಕೆ.ಎಂ.ಬೀನಾಮೋಳ್

ಒಲಂಪಿಕ್ಸ್ ವರ್ಣರಂಜಿತ ತೆರೆ ಕಂಡಿತು. ಅಭೂತಪೂರ್ವ ಬೆಳಕಿನ ಚಮತ್ಕಾರ, ಕಿವಿಗೆ ಇಂಪು ನೀಡುವ ಸಂಗೀತ, ವೈವಿದ್ಯಮಯ ಸಾಹಸಿಕ, ಸಾಂಪ್ರದಾಯಿಕ ನೃತ್ಯ, ಸಿಡಿಮದ್ದಿನ ಚಿತ್ತಾರಗಳೊಂದಿಗೆ 27ನೇ ಒಲಂಪಿಕ್ಸ್ ಇತಿಹಾಸ ಪುಟ ಸೇರಿತು.

ಇದೇ ಮೊದಲ ಬಾರಿಗೆ ಕ್ರೀಡಾಪಟುಗಳು ತಮ್ಮ ದೇಶದ ಬಾವುಟದಡಿ ಒಟ್ಟಾಗಿ ಆಗಮಿಸುವ ಸಂಪ್ರದಾಯದಿಂದ ಹೊರ ಬಂದು ಕ್ರೀಡಾಂಗಣದ ನಾಲ್ಕು ದ್ವಾರಗಳಲ್ಲಿ ಆಗಮಿಸಿ ಎಲ್ಲರೊಂದಿಗೂ ಬೆರೆತು ಸಂಭ್ರಮದಲ್ಲಿ ತೊಡಗಿದ್ದು ಈ ಬಾರಿಯ ವಿಶೇಷವಾಗಿತ್ತು.

ಕಾಲ, ಧರ್ಮ, ರಾಜಕೀಯ ಒಲವುಳ್ಳ ಆಧಾರದ ಮೇಲೆ ಯಾವ ದೇಶ ಹಾಗೂ ಸ್ಪರ್ಧಿಗಳನ್ನು ಹೊರಗಿಡ ಬಾರದೆಂಬ ಅಂತರ್ರಾಷ್ಟ್ರೀಯ ಧ್ಯೇಯ ಇನ್ನೂ ಪೂರ್ಣ ಸಾಧ್ಯ ಆಗದಿರುವುದು ವಿಷಾದನೀಯ. ಅಟ್ಲಾಂಟದಲ್ಲಿ ನಡೆದ ಒಲಂಪಿಕ್ಸ್‌ಗಿಂತ ಮುಂಚೆ ನಡೆದ ಕ್ರೀಡಾಕೂಟಗಳಲ್ಲಿ ಬಹುತೇಕ ಧರ್ಮ, ವರ್ಣಬೇದ ಹಾಗೂ ರಾಜಕೀಯ ನೇರ ಹಸ್ತಕ್ಷೇಪಗಳು, ಹಾಗೂ ಸೇಡಿನ ಪ್ರವೃತ್ತಿಗಳು ಕಂಡುಬರುತ್ತಿದ್ದವು. (ಸೋವಿಯತ್ ಒಕ್ಕೂಟ ಮಾಸ್ಕೋ ಒಲಂಪಿಕ್ಸ್ ಯಾವ ಲೋಪವೂ ಆಗದ ರೀತಿ ನಡೆಸಿದರೂ ಅಮೆರಿಕಾ ಅದನ್ನು ವಿಫಲಗೊಳಿಸಲು ಯತ್ನ ನಡೆಸಿತು) ಆದರೆ ಈ ಬಾರಿ ತೃತೀಯ ಜಗತ್ತಿನ ದೇಶಗಳ ನೆಚ್ಚಿನ ಕ್ರೀಡಾಸ್ಪರ್ಧಿಗಳ ಮೇಲೆ ಉದ್ದೀಪನ ಔಷಧಿ ಸೇವನೆ ಕಾರಣವೊಡ್ಡಿ 607 ಕ್ರೀಡಾಳುಗಳನ್ನು ಮತ್ತೆ ಮತ್ತೆ ಪರೀಕ್ಷೆಗೆ ಒಡ್ಡಿ ಅನರ್ಹಗೊಳಿಸುವ ಸಂಚು ನಡೆಯಿತು. ಇದರಲ್ಲಿ ಪದಕ ವಿಜೇತೆ ಭಾರತದ ಕರ್ಣಂ ಮಲ್ಲೇಶ್ವರಿಯು ಕೂಡ ಒಬ್ಬರು.


ಹಿಂದಿನ ಒಲಂಪಿಕ್ಸ್ ಕ್ರೀಡಾಕೂಟಗಳಲ್ಲಿ ವರ್ಣಬೇದ, ಧರ್ಮ,ರಾಜಕೀಯ ಗಮನ ಸೆಳೆಯುತ್ತಿದ್ದರೆ, ಈ ಬಾರಿಯೂ ಆಸ್ಟ್ರೇಲಿಯದ ಮೂಲ ನಿವಾಸಿಗಳು ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ತಮ್ಮ ಪ್ರತಿಭಟನೆಯ ಮೂಲಕ ತಮ್ಮ ನೋವು ಮತ್ತು ಹೀನಾಯ ಜೀವನ ಸ್ಥಿತಿ ಬಗ್ಗೆ ಗಮನ ವಿಶ್ವದ ಸೆಳೆಯುವ ಯತ್ನ ಮಾಡಿದರು.

199 ರಾಷ್ಟ್ರಗಳ 10,000 ಕ್ಕೂ ಹೆಚ್ಚು ಕ್ರೀಡಾ ಸ್ಪರ್ಧಿಗಳು ಭಾಗವಹಿಸಿದ್ದ, ಸಹಸ್ರಮಾನದ ಕ್ರೀಡಾಕೂಟದಲ್ಲಿ ಹಲವು ಒಲಂಪಿಕ್ಸ್ ಹಾಗೂ ವಿಶ್ವದಾಖಲೆಗಳು ನಿರ್ಮಾಣಗೊಂಡವು. ಈಜಿನಲ್ಲಿ ಒಟ್ಟು ಹದಿನಾಲ್ಕು ವಿಶ್ವ ದಾಖಲೆಗಳು ಹಾಗೂ ಹನ್ನೊಂದು ಒಲಂಬಿಕ್ಸ್ ದಾಖಲೆಗಳಾದವು. ಅಥ್ಲೆಟಿಕ್ಸ್ ಹಾಗೂ ಇತರೆ ಸ್ಪರ್ಧೆಗಳಲ್ಲಿ ಹತ್ತಾರು ವಿಶ್ವದಾಖಲೆಗಳು ಸ್ಥಾಪನೆಗೊಂಡು ಕ್ರೀಡೆ ಮತ್ತಷ್ಟು ಉತ್ತುಂಗಕ್ಕೇರಿದೆ.



ಚಿನ್ನ ಗೆದ್ದ ಇಥೋಪಿಯಾದ ಓಟಗಾರ

ಪದಕಗಳಲ್ಲಿಯೂ ಎಂದಿನಂತೆ ಸಮಾಜವಾದಿ ಹಾಗೂ ಮಾಜಿ ಸಮಾಜವಾದಿ ರಾಷ್ಟ್ರಗಳು ಮೇಲುಗೈ ಸಾಧಿಸಿವೆ. 39 ಚಿನ್ನ, 25



ಭಾರತಕ್ಕೆ ಗೌರವ ತಂದುಕೊಟ್ಟ ಕರ್ಣಂ ಮಲ್ಲೇಶ್ವರಿ

ಬೆಳ್ಳಿ ಮತ್ತು 33 ಕಂಚು ಒಟ್ಟು 97 ಪದಗಳಿಸಿದ ಅಮೆರಿಕ ಅಗ್ರ ಸ್ಥಾನದಲ್ಲಿದ್ದರೂ ಅದರ ಒಟ್ಟು ಸಾಧನೆ ಕಳೆದ ಬಾರಿಗಿಂತ ಕೆಳಗಿಳಿದಿದೆ. ಕಳೆದ ಬಾರಿ 108 ಪದಕ ಗಳಿಸಿತ್ತು. ಮಾಜಿ ಸಮಾಜವಾದಿ ರಶ್ಯಾ 32 ಚಿನ್ನ, 28 ಬೆಳ್ಳಿ, 28 ಕಂಚು ಒಟ್ಟು 88 ಪದಕಗಳೊಂದಿಗೆ ಅಮೆರಿಕಕ್ಕೆ ತೀವ್ರ ಪೈಪೋಟಿ ನೀಡಿತು. ಚೀನಾ 28 ಚಿನ್ನ, 16 ಬೆಳ್ಳಿ ಹಾಗೂ 15 ಕಂಚು, ಒಟ್ಟು 59 ಪದಕ ಗಳಿಸಿ ಮುಂದಿನ ದಿನಗಳಲ್ಲಿ ಒಲಂಪಿಕ್ಸ್‌ನಲ್ಲಿ ಏಕಸ್ವಾಮ್ಯದ ಭರವಸೆ ಮೂಡಿಸಿದೆ. ಕ್ಯೂಬಾದ ಸ್ಪರ್ಧಿಗಳು ಹಿಂದಿನಂತೆಯೇ ಆರ್ಥಿಕ ದಿಗ್ಬಂಧನ ಗಳ ಅಂತರಾಷ್ಟ್ರೀಯ ಪಿತೂರಿ ನಡುವೆಯೂ 11 ಚಿನ್ನ, 11 ಬೆಳ್ಳಿ, 7 ಕಂಚು ಸೇರಿದಂತೆ 29 ಪದಕ ಗಳಿಸಿ ತಮ್ಮ ರಾಷ್ಟ್ರದ ಪ್ರತಿಷ್ಠೆಯನ್ನು ಮೇಲಕ್ಕೇರಿಸಿ ದ್ದಾರೆ. ಇನ್ನುಳಿದಂತೆ ಉತ್ತರಕೊರಿಯ 4 ಪದಕ ಗಳಿಸಿದರೆ, ಮೊದಲ ಬಾರಿಗೆ ವಿಯೆಟ್ನಾಂ ಒಲಂಪಿಕ್ಸ್‌ನಲ್ಲಿ ಪದಕ ಗಳಿಸಿ ಸಮಾಜವಾದದ ಸಾಮಾಜಿಕ ನ್ಯಾಯಾದ ಬಾವುಟ ಎತ್ತಿ ಹಿಡಿದಿದೆ. ಬಂಡವಾಳಶಾಹಿ ಐಕ್ಯಜರ್ಮನಿ, ಇಟಲಿ, ಫ್ರಾನ್ಸ್ ಪದಕಗಳಲ್ಲಿ ತೀವ್ರ ಹಿನ್ನಡೆ ಅನುಭವಿಸಿವೆ.

ಭಾಗವಹಿಸಿದ್ದ 199 ರಾಷ್ಟ್ರಗಳಲ್ಲಿ 80 ರಾಷ್ಟ್ರಗಳು ಪದಕ ಪಟ್ಟಿಯಲ್ಲಿ ಸೇರಿದೆ. ಅದರಲ್ಲಿ 51 ರಾಷ್ಟ್ರಗಳು ಚಿನ್ನದ ಪದಕ ಗಳಿಸಿದರೆ, 15 ರಾಷ್ಟ್ರಗಳು ಬೆಳ್ಳಿ ಪದಕ ಗಳಿಸಿ, 14 ರಾಷ್ಟ್ರಗಳು ಕಂಚಿನ ಪದಕ ಗಳಿಸಿವೆ.

ನೂರು ಕೋಟಿ ಜನ ಸಂಖ್ಯೆಯ ಭಾರತ ಎಂದಿನಂತೆ ಈ ಬಾರಿಯೂ ಕಳಪೆ ಪ್ರದರ್ಶನ ನೀಡಿದೆ. ಅದರ ಕ್ರೀಡಾಪಟು ಗಳಲ್ಲಿ ಹಲವರು ಒಲಂಪಿಕ್ಸ್‌ಗೆ ಮುಂಚೆ ತೋರಿದ ಸಾಮರ್ಥ್ಯವನ್ನು ಅಲ್ಲಿ ತೋರಲಾಗದೆ ಭಾರತದ ಕ್ರೀಡೆ ನಗೆ ಪಾಟಲಿಗೆ ಒಳಗಾಗಬೇಕಾಯಿತು. ಕಳೆದ ಬಾರಿಯ ಪದಕ ವಿಜೇತ ಲಿಯಾಂಡರ್ ಪೇಸ್ ಈ ಬಾರಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿ ತೀವ್ರ ನಿರಾಶೆ ಮೂಡಿಸಿದರು. ಬಹಳ ಭರವಸೆ ಇಟ್ಟಿದ್ದ ಹಾಕಿ ಹಾಗೂ ಟೆನಿಸ್ ಡಬಲ್ಸ್ ಕೂಡ ಪದಕದ ಅಂಚಿಗೂ ಸುಳಿಯಲಾಗಲಿಲ್ಲ. ಕ್ರೀಡಾಪಟು ಗಳಲ್ಲಿ ಕೇರಳದ ಕೆ.ಎಂ.ಬೀನಾಮೋಳ್, ಗುರುಚರಣ ಸಿಂಗ್ ಹೀಗೆ ಒಂದಿಬ್ಬರು ಒಳ್ಳೆ ಸ್ಪರ್ಧೆ ನೀಡಿದರು. ಒಟ್ಟಾರೆ ಭಾರ ಎತ್ತುವ ಸ್ಪರ್ಧೆಯಲ್ಲಿ ಕಂಚುಗೆದ್ದ ಕರ್ಣಂ ಮಲ್ಲೇಶ್ವರಿಯವರ ಶ್ರಮದಿಂದ ಭಾರತ ಪದಕ ಪಟ್ಟಿಯಲ್ಲಿ ಹೆಸರು ನಮೂದಿಸಿದೆ.



ಆಸ್ಟ್ರೇಲಿಯಾದ ಅಪ್ರತಿಮ ಪ್ರತಿಭೆ ಕ್ಯಾಥಿ ಫ್ರೀಮನ್

ಈ ನಿಟ್ಟಿನಲ್ಲಿ ಭಾರತ ಅಥೆನ್ಸ್‌ನಲ್ಲಿ ನಡೆಯುವ ಒಲಂಪಿಕ್ಸ್ ಕ್ರೀಡಾಕೂಟದಲ್ಲಿಯಾದರೂ ಯಶಸ್ಸು ಗಳಿಸಲಿ ಎಂಬ ಆಶಯದೊಂದಿಗೆ.

– ಜಯರಾಮು

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ